ಜನ ಪ್ರಕಾಶನ

lawyering for change

# ಸಂವಿಧಾನ ಪೀಠಿಕೆ

## ಒಂದು ಪುಟ್ಟ ಮುನ್ನುಡಿ

ಅರವಿಂದ ನರೇನ್
ಪೂರ್ಣ ರವಿಶಂಕರ್




ಜನ ಪ್ರಕಾಶನ
ಪರ್ಯಾಯ ಕಾನೂನು ವೇದಿಕೆ

# ಸಂವಿಧಾನ ಪೀಠಿಕೆ

## ಒಂದು ಪುಟ್ಟ ಮುನ್ನುಡಿ

ಅರವಿಂದ ನರೇನ್

ಪೂರ್ಣ ರವಿಶಂಕರ್

ಓದಿನಿಂದ ಅರಿವಿನತ್ತ
ಜನ ಪ್ರಕಾಶನ
ಜನ ಸಂಸ್ಕೃತಿ ಅಧ್ಯಯನ ಮತ್ತು ಪ್ರಕಾಶನ

lawyering for change
ಪರ್ಯಾಯ ಕಾನೂನು
ವೇದಿಕೆ, ಬೆಂಗಳೂರು

**SAMVIDHANA PEETHIKE: ONDU PUTTA MUNNUDI**

**A brief introduction to the Preamble of the Indian Constitution is penned by Arvind Narain and Poorna Ravishankar and published by Jana Prakashana, No.54, 11th A Main Road, 14th cross, 5th Phase, Jayanagara, Bengaluru-560041**
**Email- janaprakashana@gmail.com**
**Phone: 6361774553, 9448324727**

**ಸಂವಿಧಾನ ಪೀಠಿಕೆ: ಒಂದು ಪುಟ್ಟ ಮುನ್ನುಡಿ**
**ಲೇಖಕರು: ಅರವಿಂದ ನರೇನ್ ಮತ್ತು ಪೂರ್ಣ ರವಿಶಂಕರ್, ಪರ್ಯಾಯ ಕಾನೂನು ವೇದಿಕೆ, ನಂ.122/4, ಇನ್‌ಫ್ಯಾಂಟ್ರಿರಸ್ತೆ, ಬಾಲಾಜಿಆರ್ಟ್‌ಗ್ಯಾಲರಿ ಸಮೀಪ, ಬೆಂಗಳೂರು–560001; ಸಂಪರ್ಕ ಮಾಹಿತಿ: contact@altlawforum.org | altlawforum.org | +91-80-22865757**

| | | |
|---|---|---|
| ಅನುವಾದ | : | ಸತ್ಯಾ ಎಸ್., ಕಮ್ಯೂನ್, ಬೆಂಗಳೂರು. । 9740154913 |
| ಸಂಪಾದಕೀಯ ಸಹಕಾರ | : | ವಿನಯ್ ಕೆ. ಶ್ರೀನಿವಾಸ್ |
| © | : | ಲೇಖಕರದು / ಪರ್ಯಾಯ ಕಾನೂನು ವೇದಿಕೆಯದು |
| ಮುಖಪುಟ ಚಿತ್ರ, ವಿನ್ಯಾಸ | : | ಕ್ಷೀರಜಾಕೃಷ್ಣನ್ |
| ಪ್ರಕಟಣೆಯ ವರ್ಷ | : | ಮೊದಲ ಆವೃತ್ತಿ – ನವೆಂಬರ್ 2021<br>ಎರಡನೆಯ ಆವೃತ್ತಿ – ಮೇ 2022 |
| ಅಳತೆ | : | ಡೆಮ್ಮಿ 1/8 |
| ಕಾಗದ | : | 70 ಜಿಎಸ್‌ಎಂ ಎಸ್.ಎನ್.ಮ್ಯಾಪ್ಲಿತೊ |
| ಪುಟಗಳು | : | 100 |
| ಪ್ರತಿಗಳು | : | 2000 |
| ಬೆಲೆ | : | ರೂ. 100/– |
| ಮುದ್ರಕರು | : | ತ್ರಿದಳ ಯೂನಿಪ್ರಿಂಟ್ಸ್, ಬೆಂಗಳೂರು. । 9845351474 |


ಈ ಪುಸ್ತಕದ ಡಿಜಿಟಲ್ ಪ್ರತಿಯನ್ನು ಕೆಳಗಿನ ಲಿಂಕ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು:
**https://altlawforum.org/publications/hte-preamble-a-brief-introduction/**

ಯಾವುದೇ ವಾಣಿಜ್ಯ ಉದ್ದೇಶವಿಲ್ಲದೆ ಹೆಚ್ಚಿನ ಓದು ಮತ್ತು ಸಂಶೋಧನೆಗೆ ಪ್ರೇರಣೆ ನೀಡುವುದು ಈ ಪುಟ್ಟ ಪುಸ್ತಕವನ್ನು ಪ್ರಕಟಿಸುವ ಉದ್ದೇಶವಾಗಿದೆ. ಬೇರೆ ಮೂಲಗಳಿಂದ ಸಂಗ್ರಹಿಸಿ ಇಲ್ಲಿ ಮರು ಮುದ್ರಿಸಿರುವ ಎಲ್ಲ ಮಾಹಿತಿಗಳು ಶುದ್ಧ ವ್ಯವಹಾರದ ನೀತಿಗಳಿಗೆ ಅನುಸಾರವಾಗಿದೆ.

ಅರವಿಂದ್ ನಾರಾಯಣ್ ಅವರು ವೃತ್ತಿಯಲ್ಲಿ ವಕೀಲರು, ಪರ್ಯಾಯ ಕಾನೂನು ವೇದಿಕೆಯ ಸಹ-ಸಂಸ್ಥಾಪಕರು. ಐಪಿಸಿಯ ಸೆಕ್ಷನ್ 377ರ ಕಾನೂನು ಬದ್ಧತೆಯನ್ನು ಪ್ರಶ್ನಿಸಿ 2009ರಲ್ಲಿ ದೆಹಲಿ ಉಚ್ಚ ನ್ಯಾಯಾಲಯದಲ್ಲಿ ಹಾಗೂ 2018ರಲ್ಲಿ ಸರ್ವೋಚ್ಚ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ ವಕೀಲರ ತಂಡದಲ್ಲಿ ಅರವಿಂದ್ ಕೂಡ ಇದ್ದರು. ಲಾ ಲೈಕ್ ಲವ್: ಕ್ವಿಯರ್ ಪರ್ಸ್ಪೆಕ್ಟಿವ್ ಆನ್ ಲಾಕೃತಿಯ ಲೇಖಕರು ಮತ್ತು ಸಹ-ಸಂಪಾದಕರು; ಬ್ರೀತಿಂಗ್ ಲೈಫ್ ಇನ್ ಟು ದ ಕಾನ್ಸ್ಟಿಟ್ಯೂಷನ್ ಕೃತಿಯ ಸಹಲೇಖಕರು.

ಪೂರ್ಣ ರವಿಶಂಕರ್ ಅವರು ಸಂಶೋಧಕರು ಹಾಗೂ ಪರ್ಯಾಯ ಕಾನೂನು ವೇದಿಕೆಯಲ್ಲಿ ವಕೀಲರು.  ಸಮಾಜದ ಬೇರೆ ಬೇರೆ ವರ್ಗಗಳಲ್ಲಿ, ಸಮುದಾಯಗಳಲ್ಲಿ ಸಂವಿಧಾನ ಸಾಕ್ಷರತೆಯನ್ನು ಮೂಡಿಸಲು ಬದ್ಧತೆಯಿಂದ ಕೆಲಸ ಮಾಡುತ್ತಿದ್ದಾರೆ. ಲಿಂಗ ಸಮಾನತೆ ಮತ್ತು ಜೈಲುವಾಸಿಗಳ ಹಕ್ಕುಗಳು ಅವರ ಆಸಕ್ತಿಯ ಕ್ಷೇತ್ರಗಳಾಗಿವೆ.

ಕಮ್ಯೂನ್– ಸಾಮಾಜಿಕ ಬದ್ಧತೆಯ ಸಂವಹನ ಸಮಾಲೋಚನೆ ಸಂಸ್ಥೆ (ಕಮ್ಯುನಿಕೇಷನ್ ಏಜೆನ್ಸಿ). ಸಂವಹನ ತಂತ್ರ ರೂಪಿಸುವುದು, ವಿಭಿನ್ನ ಮಾಧ್ಯಮಗಳಲ್ಲಿ ಪ್ರಚಾರ ಸಾಮಗ್ರಿಗಳನ್ನು ಸಿದ್ಧಪಡಿಸುವುದು, ಅನುವಾದ ಮತ್ತು ಎಡಿಟಿಂಗ್– ಇವು ಪ್ರಮುಖ ಕಾರ್ಯಕ್ಷೇತ್ರಗಳು.

## ಕೃತಜ್ಞತೆಗಳು

ಇತ್ತೀಚಿನ ದಿನಗಳಲ್ಲಿ ಸಾಮಾನ್ಯ ಜನರು ಸಂವಿಧಾನದ ಬಗ್ಗೆ ತೋರಿದ ತೀವ್ರವಾದ ಹಾಗೂ ಸಹಜವಾದಆಸಕ್ತಿಯು ಸಂವಿಧಾನ ಪೀಠಿಕೆಯಕುರಿತು ಈ ಪುಟ್ಟ ಪುಸ್ತಕವನ್ನು ಬರೆಯಲು ಪ್ರೇರಣೆ ನೀಡಿತು. ಸಂವಿಧಾನದ ಬುನಾದಿಯಂತಿರುವ ಮೂಲತತ್ವಗಳು ಮತ್ತು ಮೌಲ್ಯಗಳ ಕುರಿತುಇರುವ ಮಿಥ್ಯೆಗಳನ್ನು ಅಳಿಸಿ ಹಾಕುವುದು ಹಾಗೂ ಇಂದಿನ ಕಾಲಮಾನದಲ್ಲಿ ಈ ಸಾಂವಿಧಾನಿಕ ಮೌಲ್ಯಗಳಿಗೆ ಇರುವ ಪ್ರಾಮುಖ್ಯತೆಯನ್ನು ಶೋಧಿಸುವ ಪ್ರಯತ್ನವಾಗಿ ಈ ಪುಸ್ತಕರೂಪುಗೊಂಡಿದೆ.

ಈ ಪುಸ್ತಕವನ್ನು ಓದಿ ತಮ್ಮ ಅಮೂಲ್ಯ ಸಲಹೆಗಳನ್ನು ನೀಡಿದ ಶ್ರೀಯುತರಾದ ಪ್ರಿಯಾ ರಾವ್, ವಿನಯ್‌ಕುಮಾರ್, ಗುರುಪ್ರಸಾದ್ ಡಿ. ಎನ್., ಎ. ನಾರಾಯಣ ಮತ್ತು ಅರುಣ್‌ತಿರುವೆಂಕಟಂ ಅವರಿಗೆ ಕೃತಜ್ಞತೆಗಳು. ನಮ್ಮ ಬರವಣಿಗೆಯನ್ನುಗಮನಾರ್ಹವಾಗಿತಿದ್ದಲು ಸಹಕಾರಿಯಾದ ಸುದೀರ್ಘವಾದ ಸಲಹೆ ಮತ್ತು ಪ್ರತಿಕ್ರಿಯೆಗಳನ್ನು ನೀಡಿದ ಶ್ರೀ ತೇಜಸ್ವಿ ಶಿವಾನಂದ ಅವರಿಗೆ ನಮ್ಮ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ. ಶ್ರೀಯುತರಾದ ಮಣಿಪಿ.ಆರ್. ಎಸ್., ಸ್ವಾತಿ ಶೇಷಾದ್ರಿ, ವೆಂಕಟ್ ಶ್ರೀನಿವಾಸನ್, ಜಾನಕಿ ಶ್ರೀನಿವಾಸನ್, ಪ್ರಸನ್ನರಾಜಶೇಖರಪ್ಪ, ವೈ. ಜೆ.ರಾಜೇಂದ್ರ, ದೇವಾಂಜಲಿ ಸರ್ಕಾರ್ ಮತ್ತು ಫಾದರ್‌ಜೆರಾಲ್ಡ್‌ಅವರೊಂದಿಗೆ ನಡೆಸಿದ ಚರ್ಚೆ–ಸಂವಾದಗಳು ಈ ಪುಸ್ತಕಕ್ಕೆ ನಿರ್ಧಿಷ್ಟಚೌಕಟ್ಟು ನೀಡಲು, ತೀಕ್ಷ್ಣಗೊಳಿಸಲು ಹಾಗೂ ಸ್ಪಷ್ಟತೆ ನೀಡಲು ಸಹಕಾರಿಯಾಗಿವೆ. ಈ ಪುಸ್ತಕದರಚನೆಗೆಪರ್ಯಾಯ ಕಾನೂನು ವೇದಿಕೆಯ ನಮ್ಮೆಲ್ಲ ಸಹೋದ್ಯೋಗಿಗಳು ನೀಡಿದ ಬೆಂಬಲ–ನೆರವುಮಹತ್ತರವಾದುದು.

ಪುಸ್ತಕವನ್ನು ಮತ್ತು ಮುಖಪುಟವನ್ನು ವಿನ್ಯಾಸಗೊಳಿಸಿದ ಕ್ಷೀರಜಾಕೃಷ್ಣನ್ ಅವರಿಗೆ ವಂದನೆಗಳು. ಕಾನೂನಾತ್ಮಕ ಬರಹಗಳನ್ನು ಅನುವಾದ ಮಾಡುವುದು ಸುಲಭವಲ್ಲ. ಎಲ್ಲಾ ಅಂಶಗಳನ್ನು ನಿಖರವಾಗಿ, ಸುಲಭವಾಗಿಗ್ರಹಿಸುವಂತೆ, ತಾಳ್ಮೆಯಿಂದ ಕನ್ನಡಕ್ಕೆ ಅನುವಾದ ಮಾಡಿದ ಸತ್ಯಾ ಎಸ್. ಮತ್ತು ಅವರ ಕಮ್ಯೂನ್ ತಂಡಕ್ಕೆ ನಮ್ಮಧನ್ಯವಾದಗಳು.

**– ಪರ್ಯಾಯ ಕಾನೂನು ವೇದಿಕೆ.**

# ಭಾರತದ ಸಂವಿಧಾನ

## ಪೀಠಿಕೆ

**ಭಾರತದ ಜನತೆಯಾದ ನಾವು,**
**ಭಾರತವನ್ನು ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷ**
**ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ**
ರೂಪಿಸುವುದಕ್ಕಾಗಿ;
ಭಾರತದ ಎಲ್ಲಾ ಪ್ರಜೆಗಳಿಗೆ
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯವನ್ನು;**
ವಿಚಾರ, ಅಭಿವ್ಯಕ್ತಿ, ನಂಬಿಕೆ, ಶ್ರದ್ಧೆ ಮತ್ತು
ಉಪಾಸನೆಯ **ಸ್ವಾತಂತ್ರ್ಯವನ್ನು;**
ಸ್ಥಾನಮಾನ ಮತ್ತು ಅವಕಾಶಗಳ **ಸಮತೆಯನ್ನು**
ದೊರೆಯುವಂತೆ ಮಾಡುವುದಕ್ಕಾಗಿ;
ವ್ಯಕ್ತಿಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ
**ಭ್ರಾತೃತ್ವ ಭಾವನೆಯನ್ನು** ಮೂಡಿಸುವುದಕ್ಕೆ
ದೃಢಸಂಕಲ್ಪ ಮಾಡಿ,
ನಮ್ಮ ಸಂವಿಧಾನ ಸಭೆಯಲ್ಲಿ
1949ನೆಯ ಇಸವಿಯ ನವೆಂಬರ್ ತಿಂಗಳ 26ನೇ ದಿನದಂದು
**ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು,**
**ಅಂಗೀಕರಿಸಿ, ಶಾಸನವಾಗಿ ವಿಧಿಸಿಕೊಂಡಿದ್ದೇವೆ.**

# ನಲ್ನುಡಿಗಳು

## 1. ಸಮಕಾಲೀನ ಸ್ಪಂದನೆಗಳಿಗೆ ಸಂವಾದಿ

**ಭಾನು ಮುಷ್ತಾಕ್**
ವಕೀಲರು, ಲೇಖಕರು ಮತ್ತು ಹೋರಾಟಗಾರರು

ಒಂದು ಪುಟ್ಟ ಮುನ್ನುಡಿಯೊಡನೆ ಮೂಡಿಬಂದ ಸಂವಿಧಾನ ಪೀಠಿಕೆಕಿರು ಪುಸ್ತಿಕೆಯು ಆಲ್ಟರ್ನೇಟಿವ್ ಲಾ ಫೋರಮ್‌ನ ಪ್ರಕಾಶನದಿಂದ ಬೆಳಕು ಕಂಡಿದೆ. ಅರವಿಂದ ನರೇನ್ ಮತ್ತು ಪೂರ್ಣಾರವಿಶಂಕರ್‌ಅವರ ಲೇಖನದಿಂದ ಹಾಗೂ ಅವರುಗಳ ಮೌನತಪಸ್ಸುಅವಿರತ ಶ್ರಮ ಮತ್ತು ಅದಮ್ಯಇಚ್ಛಾಶಕ್ತಿಯಿಂದ ಪ್ರಕಟವಾಗುತ್ತಿರುವ ಈ ಕಿರು ಪುಸ್ತಿಕೆಯು ಸಮಕಾಲೀನ ಸ್ಪಂದನೆಗಳಿಗೆ ಸಂವಾದಿಯಾಗಿದೆ. ಸಾಮಾನ್ಯ ಜನರು ಸಂವಿಧಾನದ ಬಗ್ಗೆ ಅತೀವ ಒಲವನ್ನು ಮತ್ತು ಕುತೂಹಲವನ್ನು ವ್ಯಕ್ತಪಡಿಸುತ್ತಾ ಹೆಚ್ಚಿನ ಮಾಹಿತಿಯನ್ನು ಈ ಬಗ್ಗೆ ತಿಳಿದುಕೊಳ್ಳಲು ಆಸಕ್ತಿಯನ್ನು ಹೊಂದಿದ್ದಾರೆ. ಹಲವಾರು ಶಕ್ತಿಯುತ ವ್ಯಕ್ತಿಗಳ ಸಂಘಟನಾತ್ಮಕ ಕ್ರಿಯಾಶೀಲತೆಯ ದ್ಯೋತಕವಾಗಿ ಹೊರಬಂದಿರುವ ಈ ಪುಸ್ತಕದ ಇಂಗ್ಲಿಷ್ ಅವತರಣಿಕೆಯನ್ನು ಕನ್ನಡಕ್ಕೆ ತಂದಿರುವ ಸತ್ಯಾ ಎಸ್. ಮತ್ತು ಕಮ್ಯೂನ್ ತಂಡವು ಉತ್ತಮ ಅನುವಾದ ಕಾರ್ಯವನ್ನು ಮಾಡಿದೆ.

ನಮ್ಮ ಸಂವಿಧಾನ ಜಗತ್ತಿನ ಅನೇಕ ದೇಶಗಳಿಗೆ ಮಾದರಿಯಾಗಿದೆ. ನಮ್ಮ ಸಂವಿಧಾನವು ಕೇವಲ ಒಂದು ವರ್ಗ, ಜಾತಿ, ಜನಾಂಗ, ಅಥವಾ ಪ್ರದೇಶಕ್ಕೆ ಅನ್ವಯವಾಗುವಂತಹುದಲ್ಲ. ಈ ದೇಶದ ಕಟ್ಟಕಡೆಯ ವ್ಯಕ್ತಿ ಕೂಡ ಅದರಿಂದ ರಕ್ಷಣೆ ಪಡೆಯುವಂತೆ ಮತ್ತು ಆತನನ್ನು ಶೋಷಣೆಯಿಂದ ಹೊರತರಲು ಬೇಕಾದಂತಹ ಕಾನೂನಿನ ಆಳ್ವಿಕೆಯನ್ನು ಸಂವಿಧಾನವು ನಿರ್ದೇಶಿಸುತ್ತದೆ. ಇಂತಹ ಸಂವಿಧಾನ ರೂಪುಗೊಂಡ ಹಿನ್ನೆಲೆಯಲ್ಲಿ ವಿಸ್ತಾರವಾದ ಇತಿಹಾಸ ಇದೆ. ಮತ್ತು ಸಂವಿಧಾನದ ಪೀಠಿಕೆಯು ವಿಶಿಷ್ಟ, ಉದಾತ್ತ ಮತ್ತು ಎಲ್ಲರನ್ನೂ ಒಳಗೊಳ್ಳುವ ತಿರುಳು ಹಾಗೂ ಭಾಷೆ ಅದ್ಭುತವಾದ ಮಿಡಿಯುವ ಹೃದಯವನ್ನು ಹೊಂದಿದೆ. ಸ್ವಾತಂತ್ರ್ಯ ಹೋರಾಟಗಾರ ಮತ್ತು ಸಕ್ರಿಯ ರಾಜಕೀಯ ಕಾರ್ಯಕರ್ತರು

ಮತ್ತು ಬರಹಗಾರರಾಗಿದ್ದ ಕೆ.ಎಂ.ಮುನ್ಷಿಯವರು ಪೀಠಿಕೆಯನ್ನು 'ಸಂವಿಧಾನದ ಜಾತಕ' ಎಂದು ಕರೆದರು. ನ್ಯಾಯವಾದಿಯಾದ ಪಾಲ್ಖೀವಾಲಾರವರು ಇದನ್ನು 'ಸಂವಿಧಾನದ ಗುರುತಿನ ಚೀಟಿ' ಅಂತಕರೆದರೆ ನ್ಯಾಯಮೂರ್ತಿ ಹಿದಾಯತುಲ್ಲಾರವರು ಇದನ್ನು 'ಸಂವಿಧಾನದ ಆತ್ಮ' ಎಂದು ಕರೆದರು. ಸ್ವಾತಂತ್ರದ ಸಂದರ್ಭದ ಪ್ರಮುಖ ರಾಜಕೀಯ ಮುತ್ಸದ್ದಿಯಾಗಿದ್ದ ಟ್ಯಾಗೋರ್ ಪೀಠಿಕೆಯನ್ನು 'ಅನರ್ಘ್ಯ ಒಡವೆ' ಎಂದು ಕರೆದರು. ಭಾರತದ ಜನತೆಯಾದ ನಾವು ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು ಅಂಗೀಕರಿಸಿ ಶಾಸನವಾಗಿ ವಿಧಿಸಿ ಕೊಂಡಿದ್ದೇವೆ ಎಂಬುದು ಬಹುತ್ವದ ಸಮಾನತೆಯ ದೇಶದ ಏಕತೆ ಮತ್ತು ಸಮಗ್ರತೆಯ ಒಟ್ಟಾರೆ ಭಾಷೆ ಭಾವ ಮನಸ್ಸು ಕೃತಿಯ ಮೂಲಕ ಮೇಳೈಸಿದೆ. ಅಂತಹದೊಂದು ಮೂಲ ಉದ್ದೇಶದ ಇಂಗಿತದೊಂದಿಗೆ ಮೂಡಿ ಬಂದಿರುವ ಈ ಪ್ರಯತ್ನದ ಮೂಲಕ ಬೆಳೆಸಿದಾಗ ಸಂವಿಧಾನದ ಮತ್ತು ಪೀಠಿಕೆಯ ಆಂತರ್ಯವು ಭಾರತದ ಪ್ರಜೆಗಳಲ್ಲಿ ಮಿಡಿಯಲು ಸಾಧ್ಯವಾದಲ್ಲಿ ನಮ್ಮ ದೇಶದ ಸಮಗ್ರತೆ ಮತ್ತು ಐಕ್ಯತೆಯ ಭದ್ರ ಬುನಾದಿಯನ್ನು ರೂಪಿಸುವಲ್ಲಿ ಸಫಲವಾಗುತ್ತದೆ.

## 2. ಆಕಾಶದಲ್ಲಿ ಹಾರಲು ಬೇಕಾದ ಶಕ್ತಿಯನ್ನು ಸಂವಿಧಾನದಿಂದ ಪಡೆಯಬೇಕಿದೆ

**ವಸುಧೇಂದ್ರ**
ಲೇಖಕರು.

ಅರಿವಿನ ಕೊರತೆಯಾದಂತೆಲ್ಲಾ ಬದುಕು ದುರ್ಬಲಗೊಳ್ಳುತ್ತದೆ, ಸಲ್ಲದ ಅನ್ಯಾಯಕ್ಕೆ ಒಳಗಾಗುತ್ತೇವೆ. ಬದುಕಿನ ಅಗತ್ಯವಾದ ಅರಿವನ್ನು ನಾವೆಲ್ಲರೂ ಶ್ರಮವಹಿಸಿ ಪಡೆದುಕೊಳ್ಳಬೇಕಾಗುತ್ತೆ. ತಾನಾಗಿಯೇ ಯಾವುದೂ ನಮಗೆ ಒಲಿಯುವುದಿಲ್ಲ.

ಭಾರತೀಯ ಸಂವಿಧಾನದ ದೊಡ್ಡಾಲದ ಮರದ ಕೆಳಗೆ ನಾವೆಲ್ಲಾ ಬದುಕುತ್ತಿದ್ದರೂ, ಈ ವಿಶಾಲ ಮರದ ರೆಂಬೆ ಕೊಂಬೆಗಳ ಪರಿಚಯ ನಮಗೆ ಸ್ಪಷ್ಟವಾಗಿ ಇಲ್ಲ, ಅದರ ಫಲಪುಷ್ಪಗಳನ್ನು ನಮ್ಮದಾಗಿಸಿಕೊಳ್ಳುವ ಅರಿವಿಲ್ಲ. ಬಹುತೇಕ ವಿದ್ಯಾವಂತರು ಮತ್ತು ಅವಿದ್ಯಾವಂತರಿಬ್ಬರೂ ಇಂತಹ ಅಜ್ಞಾನದಿಂದ ಬಳಲುತ್ತಿದ್ದಾರೆ. ನಮ್ಮನ್ನು ಪೊರೆವ ಸಂವಿಧಾನದ ಸೂಕ್ತ ತಿಳುವಳಿಕೆ ಇಲ್ಲದಿದ್ದರೆ, ನಮ್ಮ ಹಕ್ಕುಗಳ ಅರಿವನ್ನೂ ಕಳೆದುಕೊಂಡು ಬಿಡುತ್ತೇವೆ. ಹಕ್ಕುಗಳು ನಮಗೆ ಯಾರೋ ದಯಪಾಲಿಸಿದ ಅನುಕೂಲಗಳು ಎಂದು ಭಾವಿಸಿ, ಅನಾವಶ್ಯಕ ದೈನ್ಯತೆಯಲ್ಲಿ ಬದುಕುತ್ತೇವೆ. ನಮ್ಮ ಮೂಲಭೂತ ಹಕ್ಕುಗಳ ಅರಿವಿಲ್ಲದೆ, ದಿಟ್ಟತನದಲ್ಲಿ ಬದುಕಲು ಸಾಧ್ಯವಿಲ್ಲ.

ಆ ನಿಟ್ಟಿನಿಂದ ಈ ಪುಟ್ಟ ಪುಸ್ತಿಕೆ ದೊಡ್ಡ ಕೆಲಸವನ್ನು ಮಾಡಿದೆ. ಸಂವಿಧಾನದ ಮುಖ್ಯ ಅಂಶಗಳನ್ನು ಅತ್ಯಂತ ಸರಳವಾಗಿ ನಮಗೆ ತಿಳಿಸಿಕೊಟ್ಟು, ನಮ್ಮ ಆತ್ಮಾಭಿಮಾನವನ್ನು ಹೆಚ್ಚಿಸುವ ಉದ್ದೇಶವನ್ನು ಈ ಕೃತಿ ಹೊಂದಿದೆ. ಅಂಬೇಡ್ಕರ್, ಗಾಂಧೀಜಿ ಮತ್ತು ನೆಹರೂರವ ಮನೋಭಾವವನ್ನು ತೆರೆದಿಡುತ್ತಲೇ ನಮ್ಮ ಸಂವಿಧಾನವನ್ನು ಪರಿಚಯಿಸುತ್ತದೆ. ಸ್ವಾತಂತ್ರ್ಯದ ವಿವಿಧ ಆಯಾಮಗಳು, ಸಂವಿಧಾನದ ಮುಖ್ಯ ಸಂಗತಿಗಳಾದ ಸ್ವಾತಂತ್ರ್ಯ, ಧರ್ಮ ನಿರಪೇಕ್ಷತೆ, ಬಂಧುತ್ವ, ಘನತೆ, ನ್ಯಾಯಪರತೆ – ಇತ್ಯಾದಿಗಳ ಕರಾರುವಾಕ್ಕು ಅರ್ಥ ತಿಳಿಸಿ, ಉದಾಹರಣೆಗಳ ಮೂಲಕ ನಮ್ಮ ತಿಳಿವನ್ನು ಗಟ್ಟಿಗೊಳಿಸುತ್ತದೆ. ಈ ಅರಿವು ಎಲ್ಲಾ ಭಾರತೀಯರಿಗೂ ಇರಲೇ ಬೇಕಾದ ಜರೂರತ್ತಿದೆ. ಆ ನಿಟ್ಟಿನಿಂದ ಇದನ್ನು ಓದು ಬಲ್ಲವರು ತಮ್ಮ ಪಾಡಿಗೆ ತಾವು ಓದುವುದಷ್ಟೇ ಅಲ್ಲ, ಇತರರಿಗೂ ಓದಿ ಹೇಳಿ ತಿಳಿಸಿಕೊಡುವ ಅವಶ್ಯಕತೆಯೂ ಇದೆ.

ಭಾರತದಲ್ಲಿ ಸಮಾನತೆ, ಸ್ವಾತಂತ್ರ್ಯ, ಘನತೆಗಳಂತಹ ಹಕ್ಕುಗಳು ನಿಜಕ್ಕೂ ಅರ್ಥಪೂರ್ಣವಾಗಬೇಕಾದರೆ, ಸಂವಿಧಾನದ ಪಠಣ ಮತ್ತು ಪಾರಾಯಣಗಳ ಅವಶ್ಯಕತೆಯಿದೆ. ರೂಢಿಯಲ್ಲಿ ಸವಕಲಾಗಿ ಹೋಗಿರುವ ಈ ಮಹತ್ವದ ಪದಗಳಿಗೆ ಇರುವ ವಿಶಾಲ ಅರ್ಥವನ್ನು ತಿಳಿಸಿಕೊಡಲು ಈ ಕಿರು ಪುಸ್ತಿಕೆ ವಿಶೇಷ ಉತ್ಸಾಹವನ್ನು ತೋರಿಸುತ್ತದೆ. ಎರೆಹುಳುವಿನಂತೆ ನೆಲದಲ್ಲಿ ತೆವಳುವದನ್ನು ಬಿಟ್ಟು, ಗರುಡನಂತೆ ಆಕಾಶದಲ್ಲಿ ಹಾರಲು ಬೇಕಾದ ಶಕ್ತಿಯನ್ನು ನಮ್ಮ ಸಂವಿಧಾನದಿಂದ ನಾವು ಪಡೆಯಬೇಕಿದೆ.

## 3. ಪ್ರಜಾಪ್ರಭುತ್ವದ ಗೆಲುವು ಅಥವಾ ಸೋಲಿಗೆ ನಾವೇ ಕಾರಣ

**ಎಂ. ಡಿ. ಪಲ್ಲವಿ,**
ಗಾಯಕರು ಮತ್ತು ರಂಗನಟಿ

ಬರ್ಮಾದಲ್ಲಿಎದ್ದಿರುವ ಮಿಲಿಟರಿದಂಗೆ ಮತ್ತು ದೇಶಾದ್ಯಂತ ನಡೆಯುತ್ತಿರುವ ರೈತರ ಪ್ರತಿಭಟನೆಯ ಸುದ್ದಿಗಳನ್ನು ಓದುತ್ತಿರುವುದರ ನಡುವೆಯೇ ನಾನು ಇದನ್ನು ಬರೆಯುತ್ತಿದ್ದೇನೆ. ಕಳೆದ ಎರಡು ವರ್ಷಗಳಲ್ಲಿ ದೇಶವುಎರಡು ಬೃಹತ್ ಪ್ರತಿಭಟನೆಗಳನ್ನು ಕಂಡಿದೆ. ರಾಷ್ಟ್ರೀಯ ನಾಗರಿಕತ್ವಕಾಯಿದೆ ಮತ್ತುಕೃಷಿ ಸಂಬಂಧಿ ಕಾಯಿದೆಗಳು ಈ ಹೋರಾಟಗಳಿಗೆ ಕಾರಣವಾಗಿವೆ. ಈ ಎರಡು ಸಂಧರ್ಭಗಳಲ್ಲಿ ಸಾಮಾನ್ಯ ಜನರು ಸಂವಿಧಾನದ ಕುರಿತು ಆಡಿರುವಷ್ಟು ಮಾತುಗಳನ್ನು ಈ ಹಿಂದೆಂದೂ ಆಡಿರಲಿಲ್ಲ. ಸಂವಿಧಾನದ ಬಗ್ಗೆ ತಿಳಿದುಕೊಳ್ಳಲೇ ಬೇಕಾದ ಅಗತ್ಯತೆಯನ್ನು ಈಗ ಎಲ್ಲ ನಾಗರಿಕರು ಮನಗಂಡಿದ್ದಾರೆ. ಪರ್ಯಾಯ ಕಾನೂನು ವೇದಿಕೆಯು ಪ್ರಕಟಿಸಿರುವ ಈ ಕಿರುಪುಸ್ತಕವು ಸಂವಿಧಾನದ ಪೀಠಿಕೆಯ

ಆಶಯಗಳನ್ನು ಹಾಗೂ ಸಂವಿಧಾನವು ಏನನ್ನು ಸೂಚಿಸುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳುವುದಕ್ಕೆ ಮಾರ್ಗದರ್ಶಕವಾಗಿದೆ.

ಸಂವಿಧಾನ ರಚನೆಯ ಕುರಿತು ಅನೇಕ ಒಳನೋಟಗಳನ್ನು ನೀಡುವ ಈ ಪುಸ್ತಕವು, ಸಂವಿಧಾನ ರಚನೆ ಸಮಿತಿಯಲ್ಲಿ ನಡೆದ ಚರ್ಚೆಗಳನ್ನು, ತೆಗೆದುಕೊಂಡ ನಿರ್ಧಾರಗಳನ್ನು, ಕೈಬಿಟ್ಟ ಸೂಚನೆಗಳನ್ನು ದೃಷ್ಟಾಂತ ಸಹಿತವಾಗಿ ವಿವರಿಸಿದೆ. ಈ ದೃಷ್ಟಾಂತಗಳಿಂದ ನಾನು ಅಪಾರವಾಗಿ ಪ್ರೇರಣೆ ಹೊಂದಿದ್ದೇನೆ. ನಮ್ಮ ಸಂವಿಧಾನ ರಚನಕಾರರು ಸಮಾನತೆ ಮತ್ತು ನ್ಯಾಯಪರತೆ ಕುರಿತು ಸಮಾನ ದೃಷ್ಟಿಕೋನ ಹೊಂದಿದ್ದರು ಎಂಬುದು ಹೃದಯಸ್ಪರ್ಶಿಯಾಗಿದೆ. ದೇಶದ ದುರ್ಬಲ ವರ್ಗಗಳ ಬಗ್ಗೆ ಈ ದೇಶವು ಸೂಕ್ಷ್ಮವೂ, ನ್ಯಾಯಪರವೂ ಆಗಿರಬೇಕು ಎನ್ನುವುದು ಅವರ ಕನಸಾಗಿತ್ತು. ಈ ದೇಶ ಮತ್ತು ಅದರ ಜನರು ಎದುರಿಸಬಹುದಾದ ಅನೇಕ ಸಂಕೀರ್ಣ ಸಮಸ್ಯೆಗಳಿಗೆ ಸಂಭಾವ್ಯ ಪರಿಹಾರಗಳನ್ನು ಒಳಗೊಂಡಂತೆ ಅವರು ಸಂವಿಧಾನವನ್ನು ರಚಿಸಿದರು. ಪ್ರಜಾಪ್ರಭುತ್ವ ಎನ್ನುವುದು ಕಾಲದಿಂದ ಕಾಲಕ್ಕೆ ಪ್ರಗತಿಯಾಗುತ್ತಲೇ ಇರುತ್ತದೆ. ಪ್ರಜೆಗಳು ಅಸಡ್ಡೆ ಮಾಡಿದರೆ, ನಿರಾಸಕ್ತಿ ಹೊಂದಿದರೆ ಪ್ರಜಾಪ್ರಭುತ್ವದ ಅವನತಿ ಆರಂಭವಾಗುತ್ತದೆ. ಪುಸ್ತಕದಲ್ಲಿ ಹೇಳಿರುವಂತೆ "ಭಾರತವೆಂಬ ದೇಶದ ಸಂಸ್ಥಾಪನಾ ಕ್ಷಣದ ಸಾರವಿರುವುದು ಅದು ಗತಕಾಲದ ಹಳಹಳಿಕೆಗಳಿಗೆ ಜೋತುಬೀಳದೆ, ಈ ದೇಶದ ಜನರು ತಮಗೆ ತಾವೇ ಈ ಸಂವಿಧಾನವನ್ನು ಕೊಟ್ಟುಕೊಂಡಿದ್ದಾರೆ ಎಂಬ ವಿಚಾರದಲ್ಲಿದೆ". ಸಂವಿಧಾನ ರಚನಾ ಸಭೆಯು, ತಮಗೆ ತಾವೇ 'ಸಾರ್ವಭೌಮ, ಪ್ರಜಾಪ್ರಭುತ್ವವಾದಿ, ಗಣರಾಜ್ಯ'ವನ್ನು ಕೊಟ್ಟುಕೊಳ್ಳಲು ಪ್ರತಿಜ್ಞೆ ಮಾಡಿದ ಭಾರತದ "ಪ್ರಜೆಗಳ" ಪ್ರಾತಿನಿಧಿಕ ಸಭೆಯಾಗಿತ್ತು ಎನ್ನುವುದು ಪೀಠಿಕೆಯ ಪಠ್ಯ ಮತ್ತು ಧೋರಣೆಗಳಲ್ಲಿ ಸ್ಪಷ್ಟವಾಗಿ ತಿಳಿಯುತ್ತದೆ. ಅಧಿಕಾರದ ಮೂಲ ಪ್ರಜೆಗಳಾಗಿರುತ್ತಾರೆಯೇ ವಿನಾ ರಾಜನಲ್ಲ ಎಂಬ ಗಣರಾಜ್ಯದ ಚಿಂತನೆಯನ್ನು ಸಂವಿಧಾನವು ತನ್ನ ಮೂಲದಲ್ಲೇ ತಿಳಿಸುತ್ತದೆ. ಆಡಳಿತ ನಡೆಸುವ ವಿಚಾರಗಳನ್ನು ಮತ್ತು ನಮ್ಮ ಬದುಕನ್ನು ಆವರಿಸಿಕೊಂಡಿರುವ ಆಡಳಿತಾತ್ಮಕ ಸಂಸ್ಥೆಗಳನ್ನು ದೈವಿಕ ವಿಧಿವಿಧಾನಗಳು ನಿರ್ದೇಶಿಸಿಲ್ಲ, ಅವುಗಳನ್ನು 'ಪ್ರಜೆಗಳಾದ ನಾವು' ಗಳೇ ರೂಪಿಸಿಕೊಂಡಿದ್ದೇವೆ."

ನಮ್ಮ ಪ್ರಜಾಪ್ರಭುತ್ವದ ಸಮಸ್ಯೆಗಳಿಗೆ ರಾಜಕೀಯ ಪಕ್ಷಗಳು ಅಥವಾ ನಿರ್ದಿಷ್ಟ ಸಿದ್ಧಾಂತ ಅಥವಾ ನಿರ್ದಿಷ್ಟ ವ್ಯಕ್ತಿಗಳು ಕಾರಣವಲ್ಲ. ಈ ಸಮಸ್ಯೆಗಳಿಗೆ ಸ್ವತಃ 'ನಾವೇ' ಕಾರಣ. ಈ ಪ್ರಜಾಪ್ರಭುತ್ವವನ್ನು ಮಹತ್ತರಗೊಳಿಸುವುದು ಅಥವಾ ದುರ್ಬಲಗೊಳಿಸುವುದು ನಮ್ಮ ಕೈಯಲ್ಲಿಯೇ ಇದೆ.

●

# ಬೀಜದೊಳಗಿನ ಮರದಂತಹ ಸಂವಿಧಾನ ಪೀಠಿಕೆ

**ದು. ಸರಸ್ವತಿ**

ಪ್ರತಿಯೊಂದು ಜೀವವೂ ಅನನ್ಯ, ಸ್ವತಂತ್ರ ಅಸ್ತಿತ್ವದೊಂದಿಗೆಯೇ ಪರಸ್ಪರ ಬೆಸೆದುಕೊಂಡೂ ಇವೆ. ಉಣ್ಣುವ ಅನ್ನ, ಮಾಡುವ ಕೆಲಸ, ನಂಬುವ ದೈವ, ಪಂಥ, ಸಿದ್ಧಾಂತ, ಪ್ರೀತಿಸಿ ಒಟ್ಟಿಗಿರುವ/ಮದುವೆಯಾಗುವ ವ್ಯಕ್ತಿ ಎಲ್ಲವೂ ಪರಸ್ಪರ ಸಮ್ಮತಿ, ಇಚ್ಚೆ, ಒಲವಿನಂತೆ ನಡೆಯಬೇಕು. ಇವೆಲ್ಲವೂ ಹಕ್ಕಿನ ರೂಪದಲ್ಲಿ ಎಲ್ಲರಿಗೂ ದಕ್ಕಬೇಕೆಂಬ ಉದ್ದೇಶದಿಂದ ನಮ್ಮ ಸಂವಿಧಾನವು ಸರ್ವರಿಗೂ ಸ್ವಾತಂತ್ರ್ಯ, ಸಮಾನತೆ ಮತ್ತು ಬಂಧುತ್ವವನ್ನು ಮತ, ಧರ್ಮ, ಲಿಂಗತ್ವ, ವರ್ಗ ಇತ್ಯಾದಿ ಬೇಧವಿಲ್ಲದೆ ನೀಡುತ್ತದೆ. ಅಂಬೇಡ್ಕರ್ ಅವರ ಪ್ರಕಾರ ಬಂಧುತ್ವವಿಲ್ಲದೆ ಸ್ವಾತಂತ್ರ್ಯ ಮತ್ತು ಸಮಾನತೆಗೆ ಅರ್ಥವೇ ಇಲ್ಲ.

ಮನುಷ್ಯರ ಬದುಕಿನ ಅಗತ್ಯಗಳನ್ನು ಆಧರಿಸಿ ಕಟ್ಟಿರುವ ಸಂವಿಧಾನ, ಈ ನೆಲದ ಮೂಲ ಕಾನೂನು. ದಮನ, ಶೋಷಣೆಗಳಿಗೆಲ್ಲ ರಕ್ಷಾಕವಚವಾಗಿ ಸಂವಿಧಾನವನ್ನು ರಚಿಸಿದವರಲ್ಲಿ ಅಪ್ಪಟ ಪ್ರಜಾಪ್ರಭುತ್ವವಾದಿ ಬಾಬಾಸಾಹೇಬ್ ಅಂಬೇಡ್ಕರ್ ಪ್ರಮುಖರು. ಜನರೇ ಕೇಂದ್ರವಾದ ಸಂವಿಧಾನವನ್ನು 'ಭಾರತದ ಜನತೆಯಾದ ನಾವು' 'ನಮಗೆ ನಾವೇ ಅರ್ಪಿಸಿಕೊಂಡಿದ್ದೇವೆ'.

ಜಾತಿ,ಲಿಂಗ, ಲಿಂಗತ್ವ, ವರ್ಗ ಇತ್ಯಾದಿ ಹೆಸರಿನಲ್ಲಿ ತಾರತಮ್ಯ ಮತ್ತು ಶೋಷಣೆಯಲ್ಲಿ ನಲುಗಿರುವ ಸಮುದಾಯಗಳಿಗೆ ಆಸರೆಯಾಗಿರುವಂತೆಯೇ ಶಿಕ್ಷೆಗೊಳಗಾದ ಖೈದಿಗೂ ಘನತೆ ಇದೆ, ಅದನ್ನು ರಕ್ಷಿಸಬೇಕು ಎಂಬ ಆಶಯವನ್ನೂ ಸಂವಿಧಾನವು ಹೊಂದಿದೆ. ಒಟ್ಟು 395 ಪರಿಚ್ಛೇದಗಳಿರುವ ಸಂವಿಧಾನವು ವಿಶಾಲ ಮರದಂತೆ ಇದ್ದರೆ ಅದರ ಪೀಠಿಕೆಯು ಮರವನ್ನು ಹೊತ್ತ ಬೀಜದಂತಿದೆ. ಇಂತಹ ಪೀಠಿಕೆಯ ಕುರಿತು ವಕೀಲರಾದ ಅರವಿಂದ್ ನಾರಾಯಣ್ ಮತ್ತು ಪೂರ್ಣಾ ರವಿಶಂಕರ್ ಅವರು 'ಸಂವಿಧಾನ ಪೀಠಿಕೆ– ಒಂದು ಪುಟ್ಟ ಮುನ್ನುಡಿ' (ಮೂಲ: ಇಂಗ್ಲಿಷ್ ಭಾಷಾಂತರ: ಸತ್ಯಾ. ಎಸ್) ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ. 76 ಪುಟ್ಟಗಳ ಚಿಕ್ಕ ಪುಸ್ತಕಕ್ಕೆ 7 ಪುಟಗಳ ಕೊನೆಯ ಟಿಪ್ಪಣಿಗಳಿರುವುದು ಅಧ್ಯಯನದ ಆಳಕ್ಕೆ ಸಾಕ್ಷಿಯಾಗಿದೆ.

ಪುಸ್ತಕದ ವಿಶೇಷವೆಂದರೆ, ಸಾಂವಿಧಾನಿಕ ಮೌಲ್ಯಗಳಾದ ಸ್ವಾತಂತ್ರ್ಯ, ಸಮಾನತೆ ಮತ್ತು ಬಂಧುತ್ವವನ್ನು ಮನಗಾಣಿಸಲು ಉಲ್ಲೇಖಿಸಿರುವ ನ್ಯಾಯಾಲಯ ಪ್ರಕರಣಗಳು ಮತ್ತು ವಿಶ್ಲೇಷಣೆಗಳು. ಪ್ರಕರಣಗಳು ಸಂವಿಧಾನದ ಆಶಯಗಳು ವಾಸ್ತವವಾಗುವುದಕ್ಕೆ ಸಾಕ್ಷಿಯಾದರೆ ವಿಶ್ಲೇಷಣೆಗಳು, ಎಚ್ಚೆತ್ತ ಜನರ ಹೋರಾಟಗಳಿಂದಾಗಿ ಸಾಂವಿಧಾನಿಕ ಮೌಲ್ಯಗಳ ಅರ್ಥವು ವಿವಿಧ ಕಾಲಘಟ್ಟದಲ್ಲಿ ಪಡೆದುಕೊಂಡ ವಿಭಿನ್ನ ಆಯಾಮಗಳಿಗೆ ಕನ್ನಡಿ ಹಿಡಿಯುತ್ತವೆ.

ಲೇಖಕರು ಸ್ವತಃ ವಕೀಲರೂ ಆದ್ದರಿಂದ ಪುಸ್ತಕಕ್ಕೆ ಅಧಿಕೃತತೆ ದೊರೆತಿದೆ. ಕಾನೂನನ್ನು ಜನ ಸ್ನೇಹಿಯಾಗಿಸುವ ಉದ್ದೇಶದಿಂದ ಹುಟ್ಟುಹಾಕಿದ 'ಪರ್ಯಾಯ ಕಾನೂನು ವೇದಿಕೆ'ಯ ಸಂಸ್ಥಾಪಕರಲ್ಲಿ ಈ ಕೃತಿಯ ಲೇಖಕರಾದ ಅರವಿಂದ್ ನಾರಾಯಣ್ ಅವರು ಒಬ್ಬರು. ಜೊತೆಗೇ ಸೆಕ್ಷನ್ 377 ರದ್ಧತಿ ಕುರಿತ ಕಾನೂನು ಹೋರಾಟದಲ್ಲಿಯೂ ಸಕ್ರಿಯವಾಗಿದ್ದವರು. ಪೂರ್ಣ ರವಿಶಂಕರ್ ಅವರು ಅದೇ ವೇದಿಕೆಯಲ್ಲಿ ಕೆಲಸ ಮಾಡುತ್ತಿರುವ ಸಾಮಾಜಿಕ ಕಳಕಳಿ ಇರುವ ಉತ್ಸಾಹಿ, ಯುವ ವಕೀಲೆ.

**ಪುಸ್ತಕದಲ್ಲಿ ಉಲ್ಲೇಖಿಸಿರುವ ಕೆಲವು ಪ್ರಕರಣಗಳು ಗಮನಾರ್ಹವಾಗಿವೆ–**

ಮರಣದಂಡನೆಗೆ ಗುರಿಯಾದ ಖೈದಿಗಳನ್ನು ಒಂಟಿಯಾಗಿ ಪ್ರತ್ಯೇಕಿಸಿ ಇಡುವುದನ್ನು ಪ್ರಶ್ನಿಸಿದ ಪ್ರಕರಣದಲ್ಲಿ ನ್ಯಾಯಾಲಯವು "ಸಂವಿಧಾನದ ವ್ಯಕ್ತಿಗಳಿಗೆ ನೀಡುವ ಹಕ್ಕು ಮತ್ತು ರಕ್ಷಣೆಗಳು ಜೈಲಿನ ಗೇಟಿಗೆ ಕೊನೆಯಾಗದೆ ಜೈಲಿನೊಳಗೂ ಖೈದಿಗಳ ಜೊತೆಗಿರುತ್ತವೆ. ಅವರ ಹಕ್ಕುಗಳನ್ನು ಜೈಲಿನ ಅಧಿಕಾರಿಗಳು ನಿರಾಕರಿಸಿದರೆ ನ್ಯಾಯಾಂಗದ ಕಣ್ಗಾವಲು ರಕ್ಷಿಸುತ್ತದೆ. ಮರಣ ದಂಡನೆಗೆ ಗುರಿಯಾದ ಖೈದಿಗಳು ಇನ್ನೂ ಹೆಚ್ಚಿನ ನೋವನ್ನು ಅನುಭವಿಸಬೇಕೆ? ಹಾಗಾದಲ್ಲಿ ನ್ಯಾಯಶಾಸ್ತ್ರವು ರೂಪಿಸಿರುವ ರೀತಿ ನೀತಿ ಹಾಗೂ ಸ್ವಾತಂತ್ರ್ಯಗಳು ಕೇವಲ ಸಾಂವಿಧಾನಿಕ ಮುಖಸ್ತುತಿಗಳಾಗಿ ಊಸರವಳ್ಳಿಯಂತೆ ಬಣ್ಣ ಬದಲಾಯಿಸುವ ಪದಗಳಾಗಿ ಬಿಡುತ್ತವೆ" ಎಂದು ಹೇಳಿದೆ.

ಸಾಮಾಜಿಕ ನೈತಿಕತೆಯ ಮಾನದಂಡದಲ್ಲಿ ಲಿಂಗತ್ವ ಅಲ್ಪಸಂಖ್ಯಾತರನ್ನು ಕಳಂಕಿತರನ್ನಾಗಿಸುವ, ಅಪರಾಧಿಗಳನ್ನಾಗಿಸುವುದರ ಕುರಿತ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ "ಸಂವಿಧಾನಾತ್ಮಕ ನೈತಿಕತೆಯನ್ನು ಸಾಮಾಜಿಕ ನೈತಿಕತೆಯ ಪದತಲದಲ್ಲಿ ಬಲಿಕೊಡಲು ಸಾಧ್ಯವೇ ಇಲ್ಲ, ಸಾಮಾಜಿಕ ನೈತಿಕತೆಯ ಹೆಸರಿನಲ್ಲಿ ಒಬ್ಬ ವ್ಯಕ್ತಿಯ ಮೂಲಭೂತ ಹಕ್ಕುಗಳು ಉಲ್ಲಂಘನೆಯಾಗಬಾರದು" ಎಂದು ಹೇಳಿದೆ.

ಖಾಸಗಿತನದ ಹಕ್ಕನ್ನು ಕುರಿತ ಪ್ರಕರಣದಲ್ಲಿ ಸುಪ್ರಿಂಕೋರ್ಟ್ "...ಕುಟುಂಬ, ಮದುವೆ, ಪ್ರಜನನ ಮತ್ತು ಲೈಂಗಿಕ ಒಲವು ಎಲ್ಲವೂ ವ್ಯಕ್ತಿ ಘನತೆಯ ಅವಿಭಾಜ್ಯ ಅಂಗವಾಗಿವೆ.... ಘನತೆಯಿಂದ ಬದುಕಲು ಸಾಧ್ಯವಾದಾಗ ಮಾತ್ರ ಸ್ವಾತಂತ್ರ್ಯಕ್ಕೆ ಅರ್ಥ ಬರುವುದು. ಖಾಸಗಿತನದ ಹಕ್ಕು, ಬದುಕುವ ಹಕ್ಕು ಹಾಗೂ ಸ್ವಾತಂತ್ರ್ಯದ ಹಕ್ಕುಗಳು ಘನತೆಯನ್ನು ಖಚಿತ ಪಡಿಸುತ್ತವೆ"ಎಂದು ಹೇಳಿದೆ.

ಸಂಗಾತಿಗಳನ್ನು ಆಯ್ಕೆ ಮಾಡಿಕೊಳ್ಳುವುದರ ಕುರಿತ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ "...ಸರ್ಕಾರಕ್ಕಾಗಲಿ ಅಥವಾ ಕಾನೂನಿಗಾಗಲಿ ಸಂಗಾತಿಗಳನ್ನು ಆಯ್ಕೆಮಾಡಿಕೊಳ್ಳುವ ಪ್ರತಿ ವ್ಯಕ್ತಿಯ ಮುಕ್ತ ಸಾಮರ್ಥ್ಯವನ್ನು ಕುಂಠಿತಗೊಳಿಸುವ ಅಧಿಕಾರವಿಲ್ಲ" ಎಂದು ಹೇಳಿದೆ.

ಪುಸ್ತಕದಲ್ಲಿ ದಾಖಲಿಸಿರುವ ರಾಜದ್ರೋಹದ ಆರೋಪ ಕುರಿತ ವಿಚಾರಣೆಯಲ್ಲಿ ಗಾಂಧೀಜಿ ಮತ್ತು ನ್ಯಾಯಮೂರ್ತಿ ಜೆ.ಬ್ರೂಮಿಫೀಲ್ಡ್ ಅವರ ನಡುವಿನ ವಾದವು ನ್ಯಾಯಶಾಸ್ತ್ರ ಮತ್ತು ಪ್ರಭುತ್ವಕ್ಕೂ ಮಿಗಿಲಾದ  ಅಭಿವ್ಯಕ್ತಿ ಸ್ವಾತಂತ್ರ್ಯದ ಮಹತ್ವವನ್ನು ಸಾರುತ್ತದೆ.

ಇನ್ನೂ ಹಲವು ಪ್ರಮುಖ ತೀರ್ಪುಗಳ ಉಲ್ಲೇಖಗಳು ಇರುವ ಪುಸ್ತಕವನ್ನು ಸತ್ಯಾ ಎಸ್. ಅವರು ಸಮರ್ಥವಾಗಿ ಭಾಷಾಂತರಿಸಿದ್ದಾರೆ. ಕನ್ನಡದ ಖ್ಯಾತ ಸಾಹಿತಿಗಳು, ವಕೀಲರು ಆದ ಭಾನು ಮುಷ್ತಾಕ್, ಖ್ಯಾತ ಗಾಯಕಿ ಎಂ.ಡಿ. ಪಲ್ಲವಿ, ಖ್ಯಾತ ಲೇಖಕ ವಸುಧೇಂದ್ರ ಅವರುಗಳ ಹೇಳಿಕೆಗಳು ಪುಸ್ತಕದ ತೂಕ ಹೆಚ್ಚಿಸಿವೆ. ಪುಸ್ತಕ ಓದಿದ ಮೇಲೆ ಸಮಾನತೆ, ಬಂಧುತ್ವವನ್ನು ನಂಬುವವರಿಗೆಲ್ಲಾ ಭಾರತೀಯ ಸಂವಿಧಾನದ ಬಗ್ಗೆ ಹೆಮ್ಮೆ ಎನಿಸದೆ ಇರಲಾರದು.

●

# ಪ್ರಕಾಶಕರ ನುಡಿ

ಸಂವಿಧಾನದ ಆಶಯಗಳ ಸಾರವೇ ಸಂವಿಧಾನದ ಪೀಠಿಕೆಯಾಗಿದೆ. ಆ ಕಾರಣದಿಂದಲೇ ಅನೇಕ ರಾಜತಾಂತ್ರಿಕ ಪರಿಣಿತರು ಹಾಗೂ ಸಾಮಾಜಿಕ ಚಿಂತಕರು ಪೀಠಿಕೆಯನ್ನು ಸಂವಿಧಾನದ ಆತ್ಮ ಎಂದಿದ್ದಾರೆ.

ಪೀಠಿಕೆಯು ಭಾರತದ ಸಾರ್ವಭೌಮತ್ವವನ್ನು ಸರ್ವಕಾಲಕ್ಕೂ ತಿಳಿಸುವ ಶಾಸನದಂತೆ ನಮ್ಮ ಸಂವಿಧಾನದ ಮೊದಲ ಪುಟಗಳಲ್ಲಿ ರಾರಾಜಿಸುತ್ತಿದೆ. ಇದಕ್ಕೆ ಎಲ್ಲರಿಂದಲೂ ಪ್ರಾಶಸ್ತ್ಯ ಸಿಗಲು ಕಾರಣವೇ ಪೀಠಿಕೆಯಲ್ಲಿ ಅಡಕವಾಗಿರುವ ಅಂಶಗಳು. 'ಭಾರತವನ್ನು ಸಾರ್ವಭೌಮ, ಸಮಾಜವಾದಿ, ಜಾತ್ಯಾತೀತ, ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ರೂಪಿಸುತ್ತೇವೆ.' ಎಂಬ ಸಂವಿಧಾನದಕ್ಕೆ ದುಡಿದ ಎಲ್ಲ ಮಹನೀಯರ ಒಕ್ಕೊರಲ ಅಣತಿಯು ಭಾರತವಿರುವವರೆಗೆ ಚಿರಂತನವಾಗಿರುತ್ತದೆ.

ಆದರೆ ಇದೆಲ್ಲ ಮುದ್ರಿತ ಪುಸ್ತಕಗಳಲ್ಲಿ, ಓದಿದವರ ತಲೆಯಲ್ಲಿ, ಉಳ್ಳವರ ಊಳಿಗೆಯಲ್ಲಿ ಮಾತ್ರ ಕಂಡುಬರುತ್ತಿರುವುದು ನಿಜಕ್ಕೂ ಅಸಹನೀಯ ಸಂಗತಿ. ನಿಜಕ್ಕೂ ಸಂವಿಧಾನದ ಪೀಠಿಕೆ ಮುಟ್ಟಬೇಕಾದದ್ದು ಅಬಾಲವೃದ್ಧರನ್ನೂ, ದಮನಿತ–ದುಡಿಯುವ ವರ್ಗವನ್ನೂ, ಅಕ್ಷರಗಳನ್ನು ಕಾಣದೇ ಇರುವ ಹಳ್ಳಿಗಾಡಿನ ಜನರನ್ನೂ, ದೇಶದ ಆದಿವಾಸಿಗಳನ್ನೂ ಹಾಗೂ ಬಹು ಮುಖ್ಯವಾಗಿ ಮೇಲ್ಕಂಡ ಸಮಾಜವಾದಿ, ಜಾತ್ಯಾತೀತ ಎಂಬ ಪ್ರಜ್ಞೆಗಳನ್ನು ದೇಶದಿಂದ ದೂರಮಾಡಲು ಪ್ರಯತ್ನಿಸುತ್ತಿರುವ ಪಟ್ಟಭದ್ರರನ್ನು ಎಂಬುದು ಈ ಕಾಲಕ್ಕೆ ಜರುಗಲೇಬೇಕಾದ ಅನಿವಾರ್ಯ ಕಾರ್ಯವಾಗಿದೆ.

ನಮ್ಮ ಭಾರತದ ಜನಸಮೂಹ ಸಂವಿಧಾನದ ವಿಷಯದಲ್ಲೂ ಅಜ್ಞಾನವನ್ನು ಹೊಂದಿದ್ದಾರೆ, ಬಹುಪಾಲು ಜನರಿಗೆ ಸಂವಿಧಾನ ತಮ್ಮದೆಂಬ ಭಾವ ಬರಲೇ ಇಲ್ಲ ಕಾರಣ ಈ ಸಂವಿಧಾನವು ಅವರಿಗೆ ಸರಿಯಾಗಿ ಮನದಟ್ಟಾಗಿಲ್ಲ. ಈ ನಿಟ್ಟಿನಲ್ಲಿ ಸಂವಿಧಾನವನ್ನು ದೇಶದ ಮನೆಮನೆಗೆ

ಮುಟ್ಟಿಸಬೇಕೆಂಬ ಮಹದಾಲೋಚನೆಯನ್ನು ನಿಜರೂಪಕ್ಕೆ ತಂದು ಸಂವಿಧಾನ ಓದು ಪುಸ್ತಕದ ಮೂಲಕ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರು ಕಾರ್ಯಪ್ರವರ್ತರಾಗಿದ್ದಾರೆ. ಕರ್ನಾಟಕದಲ್ಲಿ 'ಸಂವಿಧಾನ ಓದು' ಅಭಿಯಾನ ಅಭೂತಪೂರ್ವ ಯಶಸ್ಸು ಕಂಡಿದೆ.

ಇದೇ ಹಾದಿಯಲ್ಲಿ ರಾಜ್ಯದ 'ಪರ್ಯಾಯ ಕಾನೂನು ವೇದಿಕೆ'ಯ ಗೆಳೆಯರು ಸಂವಿಧಾನದ ಪೀಠಿಕೆಯನ್ನು ಮತ್ತದರ ಅನಂತ ಆಶಯಗಳನ್ನು ದೇಶದ ಗಲ್ಲಿ–ಗಲ್ಲಿಗೆ, ಹಳ್ಳಿ ಹಳ್ಳಿಯಿಂದ ದಿಲ್ಲಿಗೆ ತಲುಪಿಸಲು 'ಸಂವಿಧಾನ ಪೀಠಿಕೆ ಒಂದು ಪುಟ್ಟ ಮುನ್ನುಡಿ' ಎಂಬ ಹೊತ್ತಿಗೆಯ ಮೂಲಕ ಈ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದಾರೆ.

ಇಂತಹ ಸಮಾಜಮುಖಿ ಕೆಲಸಕ್ಕೆ ಪೂರಕವಾಗಿ ಪರ್ಯಾಯ ಕಾನೂನು ವೇದಿಕೆಯು ಜನಪ್ರಕಾಶನದ ಮಡಿಲಿಗೆ ಇಂತಹ ವಿನೂತನ ಪುಸ್ತಕದ ಪ್ರಕಟಣೆಯ ಹೊಣೆಯನ್ನು ನೀಡಿದ್ದು, ಇದು ನಮ್ಮ ಸಂಸ್ಥೆಗೆ ಹೆಮ್ಮೆಯೂ, ಇನ್ನು ಹೆಚ್ಚಿನ ಹುರುಪಿಂದ ಮುನ್ನಡೆಯಲು ಸಿಕ್ಕ ಪ್ರೇರಣೆಯು ಆಗಿದೆ. ಆದ್ದರಿಂದ ಪರ್ಯಾಯ ಕಾನೂನು ವೇದಿಕೆಗೆ ನಮ್ಮನ್ನು ಪ್ರಕಾಶಕರಾಗಿ ಆಯ್ದುಕೊಂಡಿದ್ದಕ್ಕೆ ಮನಸಾ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ಪುಸ್ತಕದ ಲೇಖಕರಾದ ಪೂರ್ಣ ರವಿಶಂಕರ್ ಮತ್ತು ಅರವಿಂದ ನರೇನ್ ಅವರಿಗೂ ಪುಸ್ತಕದ ವಿನ್ಯಾಸಕಾರರಾದ ಕ್ಷೀರಜಾ ಕೃಷ್ಣನ್ ಅವರಿಗೂ ಹಾಗೂ ಸಂಪಾದಕೀಯ ಸಹಕಾರ ನೀಡಿದ ವಿನಯ್. ಕೆ. ಶ್ರೀನಿವಾಸರವರಿಗೂ ಜನ ಪ್ರಕಾಶನ ಧನ್ಯವಾದವನ್ನು ತಿಳಿಸುತ್ತದೆ, ಹಾಗೂ ಪುಸ್ತಕದ ಕರಡಚ್ಚು ಪರಿಶೀಲಿಸಿದ ಶ್ರೀಮತಿ ಲಕ್ಷ್ಮಿ ಜಿ.ಎಸ್, ಸಂಧ್ಯಾ ರೆಡ್ಡಿಯವರಿಗೂ ಮತ್ತು ಜನ ಪ್ರಕಾಶನದ ಯುವ ಶಕ್ತಿಯಾದ ನಿಖಿಲ್ ಆಸಾದಿ, ಶ್ರೀನಾಥ್ ಪಿ. ಅವರಿಗೂ ಈ ಈ ಪುಸ್ತಕವನ್ನು ಮುದ್ರಿಸಿದ ಮಂಜುನಾಥ್ ಎಸ್. (ತ್ರಿದಳ ಯೂನಿಪ್ರಿಂಟ್ಸ್) ಅವರಿಗೂ ಹೃತ್ಪೂರ್ವಕ ಧನ್ಯವಾದಗಳನ್ನು ಜನ ಪ್ರಕಾಶನ ಸಲ್ಲಿಸುತ್ತದೆ.

ಹಿಂದೆ ಬಂದಿರುವ ಕೃತಿಗಳಿಗೂ ಮುಂದೆ ಬರಲಿರುವ ಕೃತಿಗಳಿಗೂ ಸಂಗಾತಿಗಳಾಗಿ ಸಾಂಗತ್ಯ ತೋರಿ ಓದಿ ಹರಸಿ, ಹಾರೈಸಿದವರು ನಮ್ಮ ಓದುಗ ಗೆಳೆಯರಾದ ನೀವು ಎಂದಿನಂತೆ ಈ ಕೃತಿಯನ್ನೂ ಸ್ವಾಗತಿಸಿ, ಸ್ವೀಕರಿಸುತ್ತೀರೆಂಬ ಒತ್ತಾಸೆಯೊಂದಿಗೆ.

**ಬಿ. ರಾಜಶೇಖರಮೂರ್ತಿ**
ಜನ ಪ್ರಕಾಶನ

# ಪರಿವಿಡಿ


| | | |
|---|---|---|
| **1.** | **ಆರಂಭ** | **1** |
| **2.** | **ಹೋರಾಟದ ಫಲವಾಗಿ 'ಸ್ವಾತಂತ್ರ್ಯ'** | **5** |
| | 2.1 ರಾಜಕೀಯ ಸ್ವಾತಂತ್ರ್ಯ | |
| | 2.2 ಸಾಮಾಜಿಕ ಸ್ವಾತಂತ್ರ್ಯ | |
| | 2.3 ಆರ್ಥಿಕ ಸ್ವಾತಂತ್ರ್ಯ | |
| **3.** | **ಭಾರತ ಸಂವಿಧಾನದ ಪೀಠಿಕೆ** | **24** |
| | • ಪೀಠಿಕೆಯ ಪೂರ್ವಸೂಚಕಗಳು | 24 |
| | • ಭಾರತದ ಜನತೆಯಾದ ನಾವು | 29 |
| | • ಸಾರ್ವಭೌಮ ಪ್ರಜಾತಂತ್ರ ಗಣರಾಜ್ಯ | 30 |
| | • ಮತಧರ್ಮ ನಿರಪೇಕ್ಷತೆ | 34 |
| | • ಸಮಾಜವಾದಿ | 38 |
| | • ನ್ಯಾಯಪರತೆ | 39 |
| | • ಸ್ವಾತಂತ್ರ್ಯ | 41 |
| | • ಸಮಾನತೆ | 46 |
| **4.** | **ಬಂಧುತ್ವ** | **55** |
| **5.** | **ಘನತೆ** | **62** |
| **6.** | **ಕೊನೆಯ ಮಾತು** | **68** |
| **7.** | **ಕೊನೆಯ ಟಿಪ್ಪಣಿಗಳು** | **70** |

# 1

## ಆರಂಭ

ಇತ್ತೀಚಿನ ದಿನಗಳಲ್ಲಿ, ಭಾರತದ ಸಂವಿಧಾನವು ಜನರ ದಿನನಿತ್ಯದ ಚರ್ಚೆಯ, ಬಳಕೆಯ ವಿಷಯವಾಗಿದೆ. ಸಾಂವಿಧಾನಿಕ ದೃಷ್ಟಿಕೋನವನ್ನು ಪುನಃ ಪಡೆದುಕೊಳ್ಳುವ ಗುರಿಯೊಂದಿಗೆ ಉತ್ಸಾಹಭರಿತ ನಾಗರಿಕರು, ಕಾರ್ಯಕರ್ತರು ಸಂವಿಧಾನದ ಪೀಠಿಕೆ ಮತ್ತು ಇತರ ಭಾಗಗಳನ್ನು ಬಳಸುತ್ತಿರುವುದನ್ನು ನಾವು ನೋಡಿದ್ದೇವೆ. ಇದು ಪೀಠಿಕೆಯಲ್ಲಿ ಪ್ರತಿಪಾದಿಸಿರುವ ಮೌಲ್ಯಗಳನ್ನು ಉತ್ಸಾಹದಿಂದ ಚರ್ಚಿಸಲು ಕಾರಣವಾಗಿದೆ. ಈ ಮೂಲಕ ಜನರು ಸಂವಿಧಾನದಲ್ಲಿ ಪ್ರತಿಪಾದಿಸಿರುವ ಆದರ್ಶಗಳೊಂದಿಗೆ ಸ್ವತಂತ್ರವಾದ, ವೈಯಕ್ತಿಕ ಸಂಬಂಧವನ್ನು ಬೆಳೆಸಿಕೊಳ್ಳುತ್ತಿದ್ದಾರೆ.

2019ರ ಡಿಸೆಂಬರ್‌ನಲ್ಲಿ ಪ್ರಾರಂಭವಾದ ಪೌರತ್ವ ಕಾಯಿದೆ (ಸಿಎಎ) ವಿರೋಧಿ ಪ್ರತಿಭಟನೆಗಳ ಸಂದರ್ಭದಲ್ಲಿ ಸಂವಿಧಾನವು ಎಲ್ಲ ಭಾರತೀಯರನ್ನು ಒಂದುಗೂಡಿಸುವ ಸಾಧನವಾಗಿ, ಸಮಗ್ರ ಭಾರತದ ಸಶಕ್ತ ಸಂಕೇತವಾಗಿ ಎದ್ದು ನಿಂತಿತು. ಪ್ರತಿಭಟನೆಯ ಸ್ಥಳಗಳಲ್ಲಿ ನಿರಂತರವಾಗಿ ರಾಷ್ಟ್ರೀಯ ಧ್ವಜವನ್ನು ಬೀಸುತ್ತಿದ್ದ ಪ್ರತಿಭಟನಾಕಾರರು ಗಾಂಧೀಜಿ ಮತ್ತು ಡಾ. ಅಂಬೇಡ್ಕರ್ ಅವರ ಪೋಸ್ಟರ್‌ಗಳ ಜೊತೆ ಜೊತೆಗೆ ಸಂವಿಧಾನದ ಪೀಠಿಕೆಯನ್ನೂ ಪ್ರದರ್ಶಿಸುತ್ತಿದ್ದರು. ಈ ಹೊಸ ಬೆಳವಣಿಗೆಯಿಂದಾಗಿ ನಾಗರಿಕರು ತಮ್ಮ ಜೀವನದಲ್ಲಿ ಸಂವಿಧಾನಕ್ಕೆ

ಇರುವ ಪಾತ್ರವನ್ನು ಕಲ್ಪಿಸಿಕೊಳ್ಳುವ ವಿಧಾನವು ಮರುರೂಪಿತಗೊಂಡಿತು. ಈ ಸ್ವಯಂಪ್ರೇರಿತವಾದ ಮತ್ತು ತೀವ್ರವಾದ ಆಸಕ್ತಿಯು ಸಂವಿಧಾನ ಕುರಿತಾದ ಈ ಹಿಂದಿನ ಎಲ್ಲ ಸಂಬಂಧಗಳಿಗಿಂತಲೂ ಭಿನ್ನವಾಗಿದೆ. ಈಗಿನ ಈ ಆಸಕ್ತಿ ಮತ್ತು ಸಂಬಂಧಗಳು ಕೇವಲ ಸಾಂವಿಧಾನಿಕ ಹಕ್ಕುಗಳನ್ನು ಪಡೆದುಕೊಳ್ಳುವುದಕ್ಕೆ ಸೀಮಿತವಾಗಿಲ್ಲ. ಬದಲಿಗೆ ಸಂವಿಧಾನ ಕುರಿತಾದ ಅರಿವನ್ನು ಹೆಚ್ಚಿಸುವುದು ಹಾಗೂ ಸಂವಿಧಾನಾತ್ಮಕ ಆಶಯಗಳನ್ನು ಮೈಗೂಡಿಸಿಕೊಳ್ಳುವುದು ಇದರ ಉದ್ದೇಶವಾಗಿದೆ.

ಈ ಪ್ರತಿಭಟನೆಗಳ ಪರಿಣಾಮವಾಗಿ ಸಂವಿಧಾನದ ಮೂಲಭೂತ ಮೌಲ್ಯಗಳನ್ನು ಸಾರ್ವಜನಿಕರ ಕಲ್ಪನೆಯಲ್ಲಿ ಹೆಚ್ಚು ಆಳವಾಗಿ ಬೇರೂರಿಸಲಾಗಿದೆ. ಪೌರತ್ವ ಕಾಯಿದೆಯ ವಿರುದ್ಧ ನಿರರ್ಗಳವಾಗಿ ಮಾತನಾಡಲು ತೊಡಗಿದ ಸಾಮಾನ್ಯ ನಾಗರಿಕರು ಕೂಡ ಸಂವಿಧಾನದ ಮೌಲ್ಯಗಳಾದ ಸಮಾನತೆ, ಬಂಧುತ್ವ ಮತ್ತು ಧರ್ಮನಿರಪೇಕ್ಷತೆಯ ಬಗ್ಗೆ ಅತ್ಯಂತ ಉತ್ಸಾಹದಿಂದ, ಸಹಜತೆಯಿಂದ ಮಾತನಾಡುತ್ತಿದ್ದುದು ಅದಕ್ಕೆ ಸಾಕ್ಷಿಯಾಗಿದೆ. ಈ ಅವಧಿಯಲ್ಲಿ ನಾವು ಕಲಿತ ಒಂದು ಪ್ರಮುಖ ಪಾಠವೆಂದರೆ, ವ್ಯಕ್ತಿಗಳಾಗಿ ನಾವು ಅನುಭವಿಸುವ ಎಲ್ಲಾ ಹಕ್ಕುಗಳೂ ವಿವಿಧ ಹೋರಾಟಗಳ ಫಲವಾಗಿಯೇ ನಮಗೆ ದಕ್ಕಿವೆ ಎನ್ನುವುದು. ಮಾನವ ಹಕ್ಕುಗಳ ಪ್ರಸಿದ್ಧ ಕಾರ್ಯಕರ್ತ ಬಾಲಗೋಪಾಲ್[1] ಹೇಳುವಂತೆ, '[..] *ಯಾವುದೇ ರೀತಿಯ ಹೋರಾಟ ಅಥವಾ ಆಂದೋಲನವಿಲ್ಲದೆ ಹಕ್ಕುಗಳು ಒದಗಿಬರುವುದಿಲ್ಲ. ಯಾವುದೇ ಒಂದು ಹಕ್ಕು ಮೊದಲು ಕೆಲವು ಜನರ ಮನಸ್ಸಿನಲ್ಲಿ ಮತ್ತು ಆಲೋಚನೆಗಳಲ್ಲಿ ಆಕಾರ ಪಡೆಯುತ್ತದೆ. ಅದು ನಂತರ ಜನರ ಸಾಮಾಜಿಕ ಪ್ರಜ್ಞೆಯಲ್ಲಿ ಹರಡುತ್ತದೆ ಮತ್ತು ತರುವಾಯ ರಾಜಕೀಯ ಆಚರಣೆಯಲ್ಲಿ ಮಾನ್ಯತೆ ಪಡೆಯುತ್ತದೆ. ಮುಂದಿನ ಹಂತದಲ್ಲಿ ಅದು ರಾಜಕೀಯ ವಿಜಯವನ್ನು ದಾಖಲಿಸುತ್ತದೆ. ಇದರ ಅರ್ಥ ಕಾನೂನು, ಸಂವಿಧಾನ, ಸಂಪ್ರದಾಯಗಳು ಮತ್ತು ಸಂಸ್ಕೃತಿ – ಇವೆಲ್ಲವೂ ಕಾನೂನುಬದ್ಧವಾಗಿ ಮತ್ತು ಸಾಮಾಜಿಕವಾಗಿ ಈ ಹಕ್ಕನ್ನು ಅಂಗೀಕರಿಸುತ್ತವೆ ಮತ್ತು ಮೌಲ್ಯೀಕರಿಸುತ್ತವೆ.'*[2]

ಸಂವಿಧಾನವು 'ನಿರ್ಜೀವ ಪದಗಳ' ಮೊತ್ತವಲ್ಲ; ಅದು ಮಹನ್ನತ ಹೋರಾಟದ ಪ್ರತಿಫಲ ಎನ್ನುವುದನ್ನು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯ. ಹೆಸರಾಂತ ಮಾನವ ಹಕ್ಕುಗಳ ವಕೀಲರಾದ ಕೆ.ಜಿ. ಕನ್ನಬೀರನ್ ಹೇಳುತ್ತಾರೆ:

> *ಸಂವಿಧಾನ ಎಂದರೆ, ಜನರ ರಾಜಕೀಯ ಹೋರಾಟಗಳ ಪ್ರತಿಫಲವಾಗಿ ಪಡೆದುಕೊಂಡ ಹಕ್ಕುಗಳಿಗೆ ಕಾನೂನಿನ ಸ್ವರೂಪ ನೀಡುವ ಒಂದು ರಾಜಕೀಯ ದಸ್ತಾವೇಜು. ಹಕ್ಕುಗಳನ್ನು ಯಾವಾಗಲೂ ಪಡೆದುಕೊಳ್ಳಲಾಗಿದೆಯೇ ಹೊರತು ಎಂದಿಗೂ ನೀಡಲಾಗಿಲ್ಲ.*

*ಭಾರತೀಯರು ಬ್ರಿಟಿಷರಿಂದ ಸ್ವಾತಂತ್ರ್ಯವನ್ನು ಪಡೆದುಕೊಂಡರೇ ಹೊರತು 1947ರ ಭಾರತೀಯ ಸ್ವಾತಂತ್ರ್ಯ ಕಾಯ್ದೆಯ ಮೂಲಕ ಸ್ವಾತಂತ್ರ್ಯವನ್ನು ನೀಡಲಾಗಿಲ್ಲ.* [3]

ಭಾರತೀಯರಿಗೆ ತಮ್ಮದೇ ಆದ ಸಂವಿಧಾನವನ್ನು ಕೊಡಮಾಡಿದ ಸ್ವಾತಂತ್ರ್ಯ ಹೋರಾಟವನ್ನು ನಾವು ಈ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕು. ಹಾಗೆಯೇ, ಇಂದಿನ ಹೋರಾಟಗಳಿಗೆ ಸ್ಫೂರ್ತಿ ನೀಡುತ್ತಿರುವ ಸಂವಿಧಾನವು ಅಂದಿನ ಸ್ವಾತಂತ್ರ್ಯ ಹೋರಾಟವು ಪ್ರತಿನಿಧಿಸಿದ ಮೌಲ್ಯಗಳಿಗೆ ಕೊಂಡಿಯಾಗಿ ನಿಂತಿರುವುದನ್ನೂ ಗಮನಿಸಬೇಕು. ಹಾಗಾಗಿ ಸಂವಿಧಾನದ ಪೀಠಿಕೆಯಲ್ಲಿ ಪ್ರಸ್ಥಾಪಿಸಿರುವ ಆದರ್ಶಗಳು ಮತ್ತು ಮೌಲ್ಯಗಳು ಈ ಕಿರುಪುಸ್ತಕದ ಕೇಂದ್ರ ವಿಷಯವಾಗಿದೆ. ಯಾಕೆಂದರೆ, ಪ್ರೊಫೆಸರ್ ಉಪೇಂದ್ರ ಬಕ್ಷಿ ಅವರು ಹೇಳುವಂತೆ, *'ಸಂವಿಧಾನವು ಪೀಠಿಕೆಯ ಅಡಿಟಿಪ್ಪಣಿಯಷ್ಟೇ'.*

ಈ ಕಿರುಪುಸ್ತಕವು ಭಾರತದ ಸಂವಿಧಾನವು ಎತ್ತಿಹಿಡಿಯುವ ಮೌಲ್ಯಗಳ ಮೂಲವನ್ನು ಮತ್ತು ವಿವರಗಳನ್ನು ಈ ಕೆಳಗಿನ ಎರಡು ದೃಷ್ಟಿಕೋನಗಳ ಮೂಲಕ ಅರ್ಥಮಾಡಿಸಲು ಪ್ರಯತ್ನಿಸುತ್ತದೆ: (1) ಸ್ವಾತಂತ್ರ್ಯ ಹೋರಾಟದ ಹಿನ್ನೆಲೆ ಹಾಗೂ (2) ಸರ್ವೋಚ್ಚ ನ್ಯಾಯಾಲಯ ಮತ್ತು ಜನಪರ ಚಳವಳಿಗಳು ವ್ಯಾಖ್ಯಾನಿಸಿದಂತೆ ಮತ್ತು ಅರ್ಥಮಾಡಿಕೊಂಡಂತೆ ಭಾರತೀಯ ಸಂವಿಧಾನದ ಪೀಠಿಕೆ.

ಭಾರತೀಯ ಸಂವಿಧಾನದ ಆದರ್ಶಗಳು ಸ್ವಾತಂತ್ರ್ಯ ಹೋರಾಟದ ಬೆಂಕಿಯಲ್ಲಿ ಅರಳಿವೆ. ಭಾರತದ ಸ್ವಾತಂತ್ರ್ಯ ಹೋರಾಟವು ರಾಜಕೀಯ ಸ್ವಾತಂತ್ರ್ಯ, ಸಾಮಾಜಿಕ ಸ್ವಾತಂತ್ರ್ಯ ಮತ್ತು ಆರ್ಥಿಕ ಸ್ವಾತಂತ್ರ್ಯ ಎಂಬ ಮೂರು ಪರಿಕಲ್ಪನೆಗಳನ್ನು ನಿರೂಪಿಸುವ ಅನೇಕ ಚಿಂತನೆಗಳು ಮತ್ತು ಕ್ರಿಯೆಗಳನ್ನು ಒಳಗೊಂಡ ಒಂದು ವಿಶಾಲ ಹೋರಾಟವಾಗಿದೆ. ಸ್ವಾತಂತ್ರ್ಯದ ಈ ಪರಿಕಲ್ಪನೆಯು ಪೀಠಿಕೆಯಲ್ಲಿ ಅಭಿವ್ಯಕ್ತಿಗೊಂಡಿದೆ. ಜವಹರಲಾಲ್ ನೆಹರು ಅವರು ಪೀಠಿಕೆಯನ್ನು ಸಂವಿಧಾನ ಸಭೆಯಲ್ಲಿ ಮಂಡಿಸುವಾಗ, 'ಇದನ್ನು ವಕೀಲರಂತೆ ನೋಡಬೇಡಿ' ಎಂದು ಸದಸ್ಯರಲ್ಲಿ ಬೇಡಿಕೊಂಡರು. ಹಾಗೆ ನೋಡಿದಾದಲ್ಲಿ *'ನೀವು ನಿರ್ಜೀವ ವಸ್ತುವನ್ನು ಮಾತ್ರ ಉತ್ಪಾದಿಸುವಿರಿ'* ಎಂದರು. ಸ್ವಾತಂತ್ರ್ಯ ಚಳವಳಿಯ ಆದರ್ಶಗಳನ್ನು ಸಾಕಾರಗೊಳಿಸುವ ಪ್ರಯತ್ನವಾಗಿ ಈ ನಿರ್ಣಯವನ್ನು ಗ್ರಹಿಸಬೇಕೆಂದೂ ಅವರು ಆಗ್ರಹಿಸಿದರು. ಅವರು ಹೇಳಿದಂತೆ, *'ಪದಗಳು ಚಮತ್ಕಾರಿಯಾಗಬಲ್ಲವು. ಆದರೆ ಚಮತ್ಕಾರಿ ಪದಗಳು ಕೂಡ ಅನೇಕ ಸಲ ಮಾನವ ಚೇತನದ ವಿಸ್ಮಯವನ್ನು ಹಾಗೂ ದೇಶದ ಉತ್ಸಾಹವನ್ನು ಸಮರ್ಥವಾಗಿ ಹಿಡಿದಿಡಲು ಸಾಧ್ಯವಿಲ್ಲ'.* [4]

ನೆಹರೂ ಅವರ ಈ ಮಾತುಗಳ ಮೂಲಕ ನೋಡುವುದಾದರೆ, ಸಂವಿಧಾನದ ಪದಗಳು ಸ್ವಾತಂತ್ರ್ಯ ಹೋರಾಟದ ಚೈತನ್ಯವನ್ನು ಸಂಪೂರ್ಣವಾಗಿ ಸೆರೆಹಿಡಿದಿಲ್ಲ ಹಾಗೂ ಸ್ವಾತಂತ್ರ್ಯ ಹೋರಾಟ ಎಂಬ ಕಾವ್ಯವು ಸಂವಿಧಾನ ಎಂಬ ಗದ್ಯದಲ್ಲಿ ಕಳೆದುಹೋಗಿದೆ ಎನ್ನಬಹುದು. ಆದಾಗ್ಯೂ, ಸಂವಿಧಾನದ ಪಠ್ಯವು ಸಮಕಾಲೀನ ಜನಚಳವಳಿಗಳ ಮೂಲಕ ಮತ್ತು ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳ ಮೂಲಕ ಸ್ವಾತಂತ್ರ್ಯ ಹೋರಾಟದ ಉತ್ಸಾಹವನ್ನು ಪುನಃ ತುಂಬಿಕೊಳ್ಳುತ್ತಿದೆ. ಅಂದರೆ, 'ಹೋರಾಟಗಳು ಸಂವಿಧಾನಕ್ಕೆ ಜೀವ ತುಂಬುತ್ತವೆ'.

ಸ್ವಾತಂತ್ರ್ಯ ಹೋರಾಟದಿಂದ ಆರಂಭಿಸಿ, ಸಂವಿಧಾನದ ಪೀಠಿಕೆ, ಸ್ವಾತಂತ್ರ್ಯಾ ನಂತರದ ಭಾರತ, ಇತ್ತೀಚಿನ ಸಾಮಾಜಿಕ ಚಳವಳಿಗಳು, ನ್ಯಾಯಾಂಗ ಮತ್ತು ನಾಗರಿಕ ಸಂಘ–ಸಂಸ್ಥೆಗಳ ಅರ್ಥ ವಿವರಣೆಗಳನ್ನೆಲ್ಲ ಗಮನಿಸಿದರೆ ಸ್ವಾತಂತ್ರ್ಯ ಕುರಿತು ಒಂದು ಸ್ಥಿರವಾದ ದೃಷ್ಟಿಕೋನವು ಉದ್ದಕ್ಕೂ ಹಾದು ಬಂದಿರುವುದನ್ನು ನಾವು ಕಾಣಬಹುದು. ಸ್ವಾತಂತ್ರ್ಯದ ಈ ಪರಿಕಲ್ಪನೆಯು ಭಾರತದ ಸಾಂವಿಧಾನಿಕ ಪ್ರಜಾಪ್ರಭುತ್ವಕ್ಕೆ ಸುಭದ್ರವಾದ ನೆಲೆಗಟ್ಟನ್ನು ಒದಗಿಸಿದೆ.

●

# 2

# ಹೋರಾಟದ ಫಲವಾಗಿ ಸ್ವಾತಂತ್ರ್ಯ

## 2.1 ರಾಜಕೀಯ ಸ್ವಾತಂತ್ರ್ಯ

ಸ್ವಾತಂತ್ರ್ಯ ಎಂದ ಕೂಡಲೆ ಸಾಧಾರಣವಾಗಿ ಮನಸ್ಸಿಗೆ ಬರುವುದು ರಾಜಕೀಯ ಸ್ವಾತಂತ್ರ್ಯದ ಪರಿಕಲ್ಪನೆ. ಭಾರತದ ರಾಷ್ಟ್ರೀಯ ಚಳವಳಿಯ ಮುಖ್ಯ ಗುರಿಯೂ ಬ್ರಿಟನ್‌ನ ವಸಾಹತುಶಾಹಿ ಶೋಷಣೆಯಿಂದ ರಾಜಕೀಯ ವಿಮೋಚನೆ ಪಡೆಯುವುದೇ ಆಗಿತ್ತು. ರಾಜಕೀಯ ಸ್ವಾತಂತ್ರ್ಯವನ್ನು ಅರ್ಥಮಾಡಿಕೊಳ್ಳಲು ನಾವು ಆದರ್ಶಪ್ರಾಯ ವ್ಯಕ್ತಿಗಳಲ್ಲಿ ಒಬ್ಬರಾದ ಮಹಾತ್ಮ ಗಾಂಧಿಯವರ ಕಡೆಗೆ ನೋಡಬಹುದು. ರಾಜಕೀಯ ಸ್ವಾತಂತ್ರ್ಯಕ್ಕೆ ಇರುವ ಹಲವು ಪ್ರಮುಖ ಆಯಾಮಗಳನ್ನು ಅವರು ಅರ್ಥಮಾಡಿಕೊಂಡಿದ್ದರು.

### 2.1.1 ಮಾತಿನ ಸ್ವಾತಂತ್ರ್ಯ ಮತ್ತು ಸಂಘಟನೆಯ ಸ್ವಾತಂತ್ರ್ಯದ ಹಕ್ಕು

ಮಹಾತ್ಮ ಗಾಂಧಿಯವರ ಪ್ರಕಾರ ಮಾತಿನ ಮತ್ತು ಅಭಿವ್ಯಕ್ತಿಯ ಸ್ವಾತಂತ್ರ್ಯವು ರಾಜಕೀಯ ಸ್ವಾತಂತ್ರ್ಯದ ಅತ್ಯಗತ್ಯ ಆಯಾಮವಾಗಿದೆ. ಅವರು ಹೇಳುತ್ತಾರೆ:

> ನಮ್ಮ ಗುರಿಯತ್ತ ನಾವು ಮತ್ತಷ್ಟು ಮುಂದುವರೆಯುವ ಮೊದಲು ಮಾತಿನ ಸ್ವಾತಂತ್ರ್ಯ ಮತ್ತು ಸಂಘಟನೆಯ ಸ್ವಾತಂತ್ರ್ಯದ ಹಕ್ಕುಗಳನ್ನು ದೃಢಪಡಿಸಿಕೊಳ್ಳಬೇಕು. [...] *ಈ ಪ್ರಾಥಮಿಕ ಹಕ್ಕುಗಳನ್ನು ನಮ್ಮ ಜೀವ*

*ಕೊಟ್ಟಾದರೂ ರಕ್ಷಿಸಿಕೊಳ್ಳಬೇಕು. ಆಡಿದ ಮಾತು ನೋವುಂಟು ಮಾಡಿದರೂ ಆಡಿದವರ ಮೇಲೆ ಆಕ್ರಮಣ ನಡೆಸದೆ ಇರುವುದು ಮಾತಿನ ಸ್ವಾತಂತ್ರ್ಯ; ಪತ್ರಿಕಾ ಮಾಧ್ಯಮವು ಕಟುವಾದ ಪದಗಳಲ್ಲಿ ಪ್ರತಿಕ್ರಿಯೆ ವ್ಯಕ್ತಪಡಿಸಲು ಮತ್ತು ವಿಷಯಗಳನ್ನು ತಪ್ಪಾಗಿ ನಿರೂಪಿಸಲು ಸಾಧ್ಯವಾದಾಗ ಮಾತ್ರ ಅಲ್ಲಿ ಪತ್ರಿಕಾ ಸ್ವಾತಂತ್ರ ಇದೆ ಎನ್ನಬಹುದು... ಜನರ ಸಭೆಗಳು ಕ್ರಾಂತಿಕಾರಿ ಯೋಜನೆಗಳನ್ನು ಚರ್ಚಿಸಲು ಆಸ್ಪದವಿದ್ದಾಗ ಮಾತ್ರ ಸಂಘಟನೆಯ ಸ್ವಾತಂತ್ರ್ಯಕ್ಕೆ ಗೌರವ ಇದೆ ಎನ್ನಬಹುದು.*

*'ಸ್ವರಾಜ್ಯದ ಮೊದಲ ಹೆಜ್ಜೆಯೇ ಅಹಿಂಸೆಯನ್ನು ಪ್ರತಿಪಾದಿಸುವ ನಾಗರಿಕ ಸ್ವಾತಂತ್ರ್ಯಗಳು. ಇದು ರಾಜಕೀಯ ಮತ್ತು ಸಾಮಾಜಿಕ ಜೀವನದ ಉಸಿರು. ಇದುವೇ ಸ್ವಾತಂತ್ರ್ಯದ ಅಡಿಪಾಯ. ಇದನ್ನು ದುರ್ಬಲಗೊಳಿಸಲು ಅಥವಾ ರಾಜಿ ಮಾಡಿಕೊಳ್ಳಲು ಇಲ್ಲಿ ಆಸ್ಪದವಿಲ್ಲ. ಯಾಕೆಂದರೆ ಇದು ಜೀವಜಲ'.* [5]

ಮಾತಿನ ಮತ್ತು ಅಭಿವ್ಯಕ್ತಿಯ ಸ್ವಾತಂತ್ರ್ಯಗಳು ಒಟ್ಟು ಸ್ವಾತಂತ್ರ್ಯದ ಪ್ರಮುಖ ಮತ್ತು ಅವಿಭಾಜ್ಯ ಅಂಗ ಎನ್ನುವ ಕಾರಣಕ್ಕೆ ಗಾಂಧೀಜಿ ಆ ಕುರಿತು ನಿರರ್ಗಳವಾಗಿ ಬರೆದಿದ್ದರು. ಹಾಗೂ, ಆ ಪರಿಕಲ್ಪನೆಗಳ ರಕ್ಷಣೆಗಾಗಿ ಜೈಲಿಗೆ ಹೋಗಲೂ ಸಿದ್ಧರಾಗಿದ್ದರು. ರೌಲಟ್ ಮಸೂದೆಯನ್ನು ಜಾರಿಗೆ ತಂದ ನಂತರ ಮತ್ತು ಜನರಲ್ ಡಯರ್‌ನ ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡದ ನಂತರ ಗಾಂಧೀಜಿ ತಮ್ಮ ಪತ್ರಿಕೆಯಲ್ಲಿ ವಸಾಹತುಶಾಹಿ ಆಡಳಿತವನ್ನು ವಿರೋಧಿಸಿ, ಬ್ರಿಟಿಷ್ ಕ್ರಮದ ಅನ್ಯಾಯಗಳನ್ನು ತೀವ್ರವಾಗಿ ಖಂಡಿಸಿ ಬರೆದಿದ್ದರು.

'ಟ್ಯಾಂಪರಿಂಗ್ ವಿತ್ ಲಾಯಲ್ಟಿ' (ನಿಷ್ಠೆಗೆ ಧಕ್ಕೆ ಉಂಟುಮಾಡುವುದು) ಎಂಬ ಲೇಖನದಲ್ಲಿ, ಅವರು ಹೀಗೆ ಬರೆದಿದ್ದಾರೆ: '

*ಹೀಗೆ ಹೇಳುವುದರಿಂದ ನನಗೆ ಗುಂಡೇಟು ಬಿದ್ದರೂ ಬೀಳಬಹುದು, ಆದರೂ ಹಿಂಜರಿಯದೆ ಪ್ರತಿಯೊಬ್ಬ ಭಾರತೀಯ ಸೈನಿಕನಿಗೂ ವೈಯಕ್ತಿಕವಾಗಿ ಹೇಳುತ್ತೇನೆ, ಸೇನೆ ತೊರೆದು ಬನ್ನಿ, ನೇಕಾರರಾಗಿ ಕೆಲಸ ಮಾಡಿರಿ. ಯಾಕೆಂದರೆ ಭಾರತವನ್ನು ಅಧೀನದಲ್ಲಿಟ್ಟುಕೊಳ್ಳಲು ಸಿಪಾಯಿಗಳನ್ನು ಬಳಸಲಾಗುತ್ತಿದೆ. ಜಲಿಯನ್‌ವಾಲಾ ಬಾಗ್‌ನಲ್ಲಿ ಅಮಾಯಕ ಜನರನ್ನು ಕೊಲ್ಲಲು ಸಿಪಾಯಿಗಳನ್ನು ಬಳಸಲಾಗಿದೆ. ಮೆಸೊಪೊಟೇಮಿಯಾದ ಹೆಮ್ಮೆಯ ಅರಬ್ಬರನ್ನು ವಶಪಡಿಸಿಕೊಳ್ಳಲೂ ಅವರನ್ನು*

*ಬಳಸಲಾಗುತ್ತಿದೆ. [..] ದುರ್ಬಲರು ಮತ್ತು ಅಸಹಾಯಕರ ಸ್ವಾತಂತ್ರ್ಯವನ್ನು ರಕ್ಷಿಸುವುದಕ್ಕೆ ಬದಲಾಗಿ ಸಿಪಾಯಿಗಳನ್ನು ಬಾಡಿಗೆ ಹಂತಕರಂತೆ ಬಳಸಲಾಗುತ್ತಿದೆ. [..]'*

ಮುಂದುವರೆದು ಅವರು ಹೀಗೆ ಹೇಳುತ್ತಾರೆ:

*[..] ರಾಜದ್ರೋಹವು ಕಾಂಗ್ರೆಸ್‌ನ ಧರ್ಮವಾಗಿದೆ. ಅಸಹಕಾರ ಚಳವಳಿಯಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯು ಕಾನೂನು ರೀತ್ಯಾ ಸ್ಥಾಪಿಸಲ್ಪಟ್ಟ ಸರ್ಕಾರದ ವಿರುದ್ಧ ಅಸಮಾಧಾನವನ್ನು ಹರಡಲು ಪ್ರತಿಜ್ಞೆ ಮಾಡಿದ್ದಾರೆ. ಅಸಹಕಾರ ಎನ್ನುವುದು ಕಟ್ಟುನಿಟ್ಟಾದ ನೈತಿಕ ಮತ್ತು ಧಾರ್ಮಿಕ ಚಳವಳಿಯಾಗಿದ್ದರೂ, ಭಾರತೀಯ ದಂಡ ಸಂಹಿತೆಯ ಪ್ರಕಾರ ಉದ್ದೇಶಪೂರ್ವಕವಾಗಿ ಸರ್ಕಾರವನ್ನು ಉರುಳಿಸುವ ಕ್ರಿಯೆಯಾಗಿದೆ; ಆ ಕಾರಣ ಕಾನೂನು ರೀತ್ಯಾ ರಾಜದ್ರೋಹವಾಗಿದೆ.'* [6]

'ಒಗಟು ಮತ್ತು ಅದರ ಪರಿಹಾರ' ಎಂಬ ಲೇಖನದಲ್ಲಿ ಗಾಂಧಿ ಹೀಗೆ ಬರೆಯುತ್ತಾರೆ:

*'ಈ ಸರ್ಕಾರದ ಚಟುವಟಿಕೆಗಳನ್ನು ಸಂಪೂರ್ಣವಾಗಿ ದುಷ್ಟವೆಂದು ಪರಿಗಣಿಸುವ ಕಾರಣ ನಾವು ಈ ಅಧಿಕಾರಕ್ಕೆ ಸವಾಲು ಹಾಕುತ್ತಿದ್ದೇವೆ. ಸರ್ಕಾರವನ್ನು ಉರುಳಿಸಲು ಬಯಸುತ್ತೇವೆ. ಈ ಸರ್ಕಾರವು ಜನರ ಇಚ್ಛೆಗೆ ತಲೆಬಾಗಬೇಕೆಂದು ಆಗ್ರಹಿಸುತ್ತೇವೆ. ಸರ್ಕಾರ ಇರುವುದು ಜನರಿಗೆ ಸೇವೆ ಸಲ್ಲಿಸುವುದಕ್ಕಾಗಿಯೇ ಹೊರತು ಜನರು ಸರ್ಕಾರಕ್ಕೆ ಸೇವೆ ಸಲ್ಲಿಸುವಂತೆ ಆಗಬಾರದು. ಇದನ್ನು ಸರ್ಕಾರಕ್ಕೆ ಮನದಟ್ಟು ಮಾಡಲು ಬಯಸುತ್ತೇವೆ. ಈ ಸರ್ಕಾರದ ಅಡಿಯಲ್ಲಿ ಸ್ವತಂತ್ರ ಜೀವನವು ಅಸಹನೀಯವಾಗಿದ್ದು, ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ತೆರಬೇಕಾದ ಬೆಲೆಯು ಮನಸ್ಸಾಕ್ಷಿಗೆ ಒಪ್ಪಿಗೆಯಾಗದಷ್ಟು ದುಬಾರಿಯಾಗಿದೆ. ನಾವು ಒಬ್ಬರಿರಲಿ ಅಥವಾ ಹಲವರಿರಲಿ, ನಮ್ಮ ಸ್ವಾಭಿಮಾನವನ್ನು ಅಡವಿಟ್ಟು ಅಥವಾ ನಮ್ಮ ನಂಬಿಕೆಗಳಿಗೆ ವಿರುದ್ಧವಾಗಿ ನಡೆದುಕೊಂಡು ಸ್ವಾತಂತ್ರ್ಯವನ್ನು ಖರೀದಿ ಮಾಡುವುದನ್ನು ನಿರಾಕರಿಸಬೇಕು.'* [7]

ಗಾಂಧಿಯವರ ಈ ಟೀಕೆಯನ್ನು ಬ್ರಿಟಿಷ್ ಸರ್ಕಾರವು ಭಾರತೀಯ ದಂಡ ಸಂಹಿತೆಯ ಸೆಕ್ಷನ್ 124–ಎ ಅನುಸಾರ ರಾಜದ್ರೋಹವೆಂದು ಪರಿಗಣಿಸಿ

ಅವರ ಮೇಲೆ ಮೊಕದ್ದಮೆಯನ್ನು ಹೂಡಿತು. *'ಕಾನೂನುರೀತ್ಯಾ ಸ್ಥಾಪಿತವಾದ ಸರ್ಕಾರದ ವಿರುದ್ಧ ಅಸಮಾಧಾನವನ್ನು ಹುಟ್ಟುಹಾಕುತ್ತಿರುವ'* ಆರೋಪವನ್ನು ಹೊರಿಸಿ ವಿಚಾರಣೆಗೆ ಗುರಿಪಡಿಸಿತು.

ಗಾಂಧಿಯನ್ನು ಬಂಧಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿದಾಗ ಅವರು ತಾನು 'ತಪ್ಪಿತಸ್ಥನಲ್ಲ' ಎಂದು ಹೇಳುವ ಬದಲಿಗೆ ತಪ್ಪೊಪ್ಪಿಕೊಂಡರು ಮತ್ತು ಇಡೀ ವಸಾಹತುಶಾಹಿ ವ್ಯವಸ್ಥೆಯನ್ನು ವಿಚಾರಣೆಗೆ ಒಳಪಡಿಸುವಂತಹ ಸುದೀರ್ಘ ಹೇಳಿಕೆ ನೀಡಿದರು. ಲಕ್ಷಾಂತರ ಜನರನ್ನು ಬಡವರನ್ನಾಗಿ ಮಾಡಿದ್ದ ಬ್ರಿಟಿಷ್ ಆರ್ಥಿಕನೀತಿ, ರೌಲಟ್ ಕಾಯಿದೆ, ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡಗಳ ದೋಷಾರೋಪಣೆಯನ್ನು ಸರ್ಕಾರದ ಮೇಲೆ ಹೊರಿಸಿದರು. ನಂತರ, ಅವರು ಮಾತಿನ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆಯ ಪರವಾಗಿ ಅತ್ಯಂತ ಬಲವಾದ ವಾದವನ್ನು ಮುಂದಿಟ್ಟರು.

> *"ನನ್ನ ಮೇಲೆ ಆರೋಪ ಹೊರಿಸಿರುವ ಸೆಕ್ಷನ್ 124–ಎ ಇದೆಯಲ್ಲ, ಇದು ನಾಗರಿಕರ ಸ್ವಾತಂತ್ರ್ಯವನ್ನು ನಿಗ್ರಹಿಸಲು ವಿನ್ಯಾಸಗೊಳಿಸಲಾದ ಭಾರತೀಯ ದಂಡ ಸಂಹಿತೆಯ ರಾಜಕೀಯ ಪ್ರೇರಿತ ವಿಭಾಗದಲ್ಲಿ ಅತ್ಯಂತ ವಿಶಿಷ್ಟವಾದ, ಬಹುಶಃ ರಾಜಕುಮಾರನಂತಹ ಸ್ಥಾನ ಹೊಂದಿರಬಹುದು. ವಾತ್ಸಲ್ಯವನ್ನು ಕಾನೂನಿನಿಂದ ತಯಾರಿಸಲು ಅಥವಾ ನಿಯಂತ್ರಿಸಲು ಸಾಧ್ಯವಿಲ್ಲ. ಒಬ್ಬ ವ್ಯಕ್ತಿಯ ಬಗ್ಗೆ ಅಥವಾ ಒಂದು ವ್ಯವಸ್ಥೆಯ ಬಗ್ಗೆ ಯಾರಿಗಾದರೂ ಪ್ರೀತಿ ಇಲ್ಲದಿದ್ದರೆ ಅವರು ತಮ್ಮ ಅಸಮಾಧಾನಕ್ಕೆ ಪೂರ್ಣ ಅಭಿವ್ಯಕ್ತಿ ನೀಡಲು ಸ್ವಾತಂತ್ರ್ಯ ಇರಬೇಕು. ಏನೆಂದರೆ ಆ ಅಭಿವ್ಯಕ್ತಿಯು ಹಿಂಸೆಯನ್ನು ಉತ್ತೇಜಿಸುವುದಾಗಲಿ, ಪ್ರಚೋದಿಸುವುದಾಗಲಿ ಮಾಡಬಾರದು... ನನಗೆ ಯಾವುದೇ ಒಬ್ಬ ಆಡಳಿತಗಾರರ ವಿರುದ್ಧ ವೈಯಕ್ತಿಕ ದ್ವೇಷ ಇಲ್ಲ; ರಾಜನ ಪ್ರತಿನಿಧಿಯ ಬಗ್ಗೆಯೂ ಯಾವುದೇ ಅಸಮಾಧಾನವಿಲ್ಲ. ಆದರೆ, ಭಾರತಕ್ಕೆ ಈ ಹಿಂದಿನ ಎಲ್ಲ ಆಡಳಿತಗಳಿಗಿಂತಲೂ ಹೆಚ್ಚಿನ ಹಾನಿಯನ್ನು ಉಂಟುಮಾಡಿರುವ ಈ ಸರ್ಕಾರದ ಬಗ್ಗೆ ಅಸಮಾಧಾನವನ್ನು ಹೊಂದುವುದು ಒಂದು ಸದ್ಗುಣ ಎಂದು ನಾನು ಭಾವಿಸುತ್ತೇನೆ".* [8]

ನ್ಯಾಯಾಧೀಶರು ಗಾಂಧಿಯನ್ನು ಶಿಕ್ಷೆಗೊಳಪಡಿಸಿದರೂ, ಗಾಂಧಿ ನ್ಯಾಯಾಧೀಶರ ಮೇಲೆ ಬೀರಿದ್ದ ಪರಿಣಾಮವು ಅವರ ಹೇಳಿಕೆಯಲ್ಲಿ ವ್ಯಕ್ತಗೊಂಡಿದೆ. ನ್ಯಾಯಮೂರ್ತಿ ಜೆ. ಬ್ರೂಮ್‌ಫೀಲ್ಡ್ ಹೇಳುತ್ತಾರೆ:

*'ಕಾನೂನು ವ್ಯಕ್ತಿಗಳನ್ನು ಗೌರವಿಸುವುದಿಲ್ಲ. ಆದಾಗ್ಯೂ, ನಾನು ಈವರೆಗೆ ವಿಚಾರಣೆ ನಡೆಸಿರುವ ಅಥವಾ ಇನ್ನು ಮುಂದೆ ನಡೆಸಬಹುದಾದ ಎಲ್ಲ ವ್ಯಕ್ತಿಗಳಿಗಿಂತಲೂ ನೀವು ಬಹಳವೇ ವಿಭಿನ್ನವಾಗಿದ್ದೀರಿ ಎನ್ನುವುದನ್ನು ನಿರ್ಲಕ್ಷಿಸಲು ಅಸಾಧ್ಯ. ನಿಮ್ಮ ದೇಶದ ಲಕ್ಷಾಂತರ ಜನರ ದೃಷ್ಟಿಯಲ್ಲಿ ನೀವು ಮಹಾನ್ ದೇಶಭಕ್ತ ಮತ್ತು ಮಹಾನ್ ನಾಯಕ ಎಂಬ ಅಂಶವನ್ನೂ ನಿರ್ಲಕ್ಷಿಸಲಾಗುವುದಿಲ್ಲ. ರಾಜಕೀಯವಾಗಿ ನಿಮ್ಮ ಜೊತೆ ಭಿನ್ನಾಭಿಪ್ರಾಯ ಹೊಂದಿರುವವರೂ ಸಹ ನಿಮ್ಮನ್ನು ಉನ್ನತ, ಉದಾತ್ತ ಮತ್ತು ಸಂತನಂತಹ ವ್ಯಕ್ತಿ ಎಂದು ನೋಡುತ್ತಾರೆ. ಈಗ ನಾನು ನಿಮ್ಮ ವ್ಯಕ್ತಿತ್ವದ ಒಂದು ಪಾತ್ರದೊಂದಿಗೆ ಮಾತ್ರ ವ್ಯವಹರಿಸಬೇಕು. ನಿಮ್ಮ ವ್ಯಕ್ತಿತ್ವದ ಇತರೆ ಮಗ್ಗಲುಗಳ ಬಗ್ಗೆ ನಿರ್ಣಯಿಸುವುದು ಅಥವಾ ಟೀಕಿಸುವುದು ನನ್ನ ಕೆಲಸವಲ್ಲ. ಕಾನೂನಿಗೆ ಒಳಪಟ್ಟ ಒಬ್ಬ ವ್ಯಕ್ತಿಯಾಗಿ ಮಾತ್ರ ನಿಮ್ಮ ವಿಚಾರಣೆ ನಡೆಸುವುದು ನನ್ನ ಕರ್ತವ್ಯವಾಗಿದೆ. ನಿಮ್ಮದೇ ತಪ್ಪೊಪ್ಪಿಗೆಯ ಪ್ರಕಾರ ಕಾನೂನನ್ನು ಉಲ್ಲಂಘಿಸಿರುವ ವ್ಯಕ್ತಿಯಾಗಿ ಹಾಗೂ ಹೀಗೆ ಉಲ್ಲಂಘನೆ ಮಾಡುವುದು ಪ್ರಭುತ್ವದ ವಿರುದ್ಧ ಮಾಡುವ ಅಪರಾಧ ಎಂದು ಸಾಮಾನ್ಯ ಜನರಿಗೆ ಮನವರಿಕೆ ಮಾಡಿಕೊಡುವ ರೀತಿಯಲ್ಲಿ ನಾನು ನಿಮ್ಮನ್ನು ವಿಚಾರಣೆ ಮಾಡಬೇಕಿದೆ.'* [9]

ಇದೇ ವಿಚಾರಣೆ ಬಗೆಗಿನ ಮತ್ತೊಂದು ಸಮಕಾಲೀನ ವರದಿಯಲ್ಲಿ ಹೀಗೆ ಬರೆಯಲಾಗಿದೆ:

*'ಇಲ್ಲಿ ಯಾರ ವಿಚಾರಣೆ ನಡೆಯುತ್ತಿದೆ ಎಂದು ಎಲ್ಲರೂ ಒಂದು ನಿಮಿಷ ಗೊಂದಲಕ್ಕೆ ಒಳಗಾದರು. ಬ್ರಿಟಿಷ್ ನ್ಯಾಯಾಧೀಶನ ಎದುರು ಮಹಾತ್ಮಗಾಂಧಿಯ ವಿಚಾರಣೆ ನಡೆಯುತ್ತಿದೆಯೋ ಅಥವಾ ದೇವರ ನ್ಯಾಯಾಲಯದಲ್ಲಿ ಬ್ರಿಟಿಷ್ ಸರ್ಕಾರದ ವಿಚಾರಣೆ ನಡೆಯುತ್ತಿದೆಯೋ ಎಂದು ಅಚ್ಚರಿಪಟ್ಟರು'.* [10]

*'ಸರ್ಕಾರದ ವಿರುದ್ಧ ಜನರಲ್ಲಿ ಅಸಮಾಧಾನವನ್ನು ಉಂಟುಮಾಡಿದರು'* ಎಂಬ ತಮ್ಮ ಮೇಲಿನ ಆರೋಪವನ್ನು ಗಾಂಧಿಯು ಸರ್ಕಾರದ ವಿರುದ್ಧ *'ಅಸಮಾಧಾನವನ್ನು ಉಂಟುಮಾಡುವುದು' 'ನಾಗರಿಕರ ಪರಮೋಚ್ಚ ಕರ್ತವ್ಯ'* ಎಂಬಂತೆ ಪರಿವರ್ತಿಸಿದರು. ಸುದೀಪ್ತಾ ಕವಿರಾಜ್ ಅವರು ಹೇಳುವಂತೆ, *ಬಂಡಾಯಗಾರನೊಬ್ಬನ ವಿಚಾರಣೆಯು ಪ್ರಭುತ್ವದ ವಿಚಾರಣೆಯಂತೆ ಕಂಡುಬಂದಿತು.*[11] ಈ ವಿಚಾರಣೆಯಲ್ಲಿ ಪ್ರಭುತ್ವ ಮತ್ತು ನ್ಯಾಯದ ನಡುವಿನ

ಸಂಬಂಧವು ತೀಕ್ಷ್ಣವಾದ ಪ್ರಶ್ನೆಗೆ ಗುರಿಯಾಯಿತು. ಗಾಂಧಿಯವರು ನಿರರ್ಗಳವಾಗಿ ಮಂಡಿಸಿದ ತಮ್ಮ ವಾದದಲ್ಲಿ *'ಕಾನೂನನ್ನು ಶೋಷಕನಿಗೆ ವೇಶ್ಯಾವಾಟಿಕೆ ಮಾಡಲಾಗಿದೆ. ಅಷ್ಟೇ ಅಲ್ಲ, ಬ್ರಿಟಿಷರ ಆರ್ಥಿಕ ನೀತಿಯು ಗ್ರಾಮೀಣ ಭಾರತದ ಜನರನ್ನು ಬರಿದೆ ಅಸ್ಥಿಪಂಜರಗಳನ್ನಾಗಿ ಮಾಡಿವೆ. ಜನರು ನಿರ್ಜೀವದಿಂದ ಕುಸಿಯುತ್ತಿದ್ದಾರೆ. ಇದು ಮಾನವತೆಯ ವಿರುದ್ಧ ಎಸಗಿರುವ ಘೋರ ಅಪರಾಧವಾಗಿದೆ'* ಎಂದು ಹೇಳಿದರು. ಆರ್ಥಿಕ ನ್ಯಾಯ ಮತ್ತು ರಾಜಕೀಯ ನ್ಯಾಯಗಳೆರಡೂ ಅಪಾಯದಲ್ಲಿವೆ ಎನ್ನುವುದನ್ನು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡುವ ಗಾಂಧಿಯವರು, ಬ್ರಿಟಿಷ್ ಸರ್ಕಾರವು ಭಾರತದ ಜನತೆಗೆ ನೀಡಿದ್ದ ವಚನವನ್ನು ಸಂಪೂರ್ಣವಾಗಿ ಉಲ್ಲಂಘಿಸಿರುವ ಕಾರಣ, ಆ ಸರ್ಕಾರವು ತನ್ನ ವಿಶ್ವಾಸ ಮತ್ತು ವಾತ್ಸಲ್ಯದಿಂದ ವಂಚಿತವಾಗಿದೆ ಎಂದು ನಿರೂಪಿಸಿದರು.

**“ಬಂಡಾಯಗಾರನೊಬ್ಬನ ವಿಚಾರಣೆಯು ಕೊನೆಗೆ ಪ್ರಭುತ್ವದ ವಿಚಾರಣೆಯಂತೆ ಕಂಡುಬಂದಿತು”**

ರಾಜದ್ರೋಹದ ಆಪಾದನೆಯ ಮೇರೆಗೆ ನಡೆದ ಗಾಂಧಿಯವರ ಈ ವಿಚಾರಣೆಯ ನಂತರವಾದರೂ ಸ್ವತಂತ್ರ ಭಾರತದ ಕಾನೂನು ಪುಸ್ತಕದಲ್ಲಿ ರಾಜದ್ರೋಹದ ಈ ಕಾಯಿದೆಗೆ ಅವಕಾಶ ನೀಡಬಾರದಿತ್ತು. ನಮಗೆ ಇತಿಹಾಸ ಪ್ರಜ್ಞೆ ಇದ್ದಿದ್ದರೆ ಮತ್ತು ಗಾಂಧಿಯವರ ಬಗ್ಗೆ ಗೌರವ ಇದ್ದಿದ್ದರೆ ನಾವು ಈ ಬಗ್ಗೆ ಯೋಚಿಸುತ್ತಿದ್ದೇವೇನೋ! ಸಂವಿಧಾನವನ್ನು ಅಳವಡಿಸಿಕೊಳ್ಳುವಾಗಲೆ ಈ ಕಾಯಿದೆಯು ಸಹಜ ಸಾವನ್ನು ಕಾಣಬೇಕಿತ್ತು. ಇಲ್ಲವೇ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಈ ಕಾಯಿದೆಯನ್ನು ರದ್ದು ಪಡಿಸಬೇಕಿತ್ತು. ಆದರೆ, ಸ್ವಾತಂತ್ರ್ಯಾನಂತರ ಆಡಳಿತ ನಡೆಸಿರುವ ಎಲ್ಲ ಸರ್ಕಾರಗಳು ಈ ಕಾಯಿದೆಯನ್ನು ಉಳಿಸಿಕೊಂಡು, ತನ್ನ ಆಡಳಿತವನ್ನು ವಿಮರ್ಶೆ ಮಾಡುವ, ಟೀಕೆ ಮಾಡುವ ಜನರ ವಿರುದ್ಧ ಇದನ್ನು ಬಳಸಿಕೊಂಡು ಬರುತ್ತಿವೆ.

### 2.1.2 ವಿಚಾರಣೆ ಪೂರ್ವ ಬಂಧನದಿಂದ ಮುಕ್ತಿ ಮತ್ತು ಆರೋಪಿಗೆ ಕಾನೂನು ನೆರವಿನ ಹಕ್ಕು

ಸರ್ಕಾರವು ತನ್ನ ವಿರೋಧಿಗಳನ್ನೆಲ್ಲ ಬಂಧಿಸುತ್ತಾ ಹೋದರೆ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥವೇ ಇರುವುದಿಲ್ಲ. ರಾಜಕೀಯ ವಿರೋಧಿಗಳಿಗೆ ವಿಚಾರಣೆ ಪೂರ್ವ ಬಂಧನದಿಂದ ಮುಕ್ತಿ ದೊರಕಿಸಲು ಹಾಗೂ ಆರೋಪಿಗಳಿಗೆ ಕಾನೂನು ನೆರವಿನ ಹಕ್ಕು ಒದಗಿಸಲು ಗಾಂಧಿ ಹೋರಾಟ ಮಾಡಿದರು. ಅತ್ಯಂತ

ಕ್ರೂರವಾದ ರೌಲಟ್ ಕಾಯಿದೆಯ ವಿರುದ್ಧ ದೇಶಾದ್ಯಂತ ನಡೆದ ಅಸಹಕಾರ ಚಳವಳಿಗೆ ಪ್ರೇರಣೆ ನೀಡಿದ ವಿಷಯ ಇದೇ ಆಗಿತ್ತು.

1919ರ ರೌಲಟ್ ಕಾಯಿದೆಯು (ಅರಾಜಕತೆ ಮತ್ತು ಕ್ರಾಂತಿಕಾರಿ ಅಪರಾಧಗಳ ಕಾಯಿದೆ) ಅದಕ್ಕೆ ಮೊದಲಿನ ಅಪರಾಧ ನಿಯಂತ್ರಣ ಕಾಯಿದೆಗಳಲ್ಲಿ ಆರೋಪಿಗಳಿಗೆ ಒದಲಾಗಿಸಲಾಗಿದ್ದ ರಕ್ಷಣೆಗಳನ್ನು ತೆಗೆದುಹಾಕಿತು. ವಿಚಾರಣೆ ಪೂರ್ವ ಬಂಧನದಿಂದ ಮುಕ್ತಿ, ಆರೋಪಿಗೆ ಕಾನೂನು ನೆರವಿನ ಹಕ್ಕು, ತೆರೆದ ನ್ಯಾಯಾಲಯದಲ್ಲಿ ವಿಚಾರಣೆ ನಡೆಸುವುದು– ಈ ಅಂಶಗಳನ್ನು ತೆಗೆದು ಹಾಕಿ ಮರಣ ದಂಡನೆಯನ್ನು ಸೇರಿಸಲಾಯಿತು.

ಈ ಕಾಯಿದೆಯ ಕಠಿಣ ಮತ್ತು ಕ್ರೂರ ಅಂಶಗಳಿಂದ ಸಿಟ್ಟಿಗೆದ್ದ ಭಾರತದ ಜನತೆ ದೇಶಾದ್ಯಂತ ಸಿಡಿದೆದ್ದರು. ಕಾಯಿದೆಯನ್ನು ವಿರೋಧಿಸಿ ನಿರಂತರವಾಗಿ ಪ್ರತಿಭಟನೆ, ಮೆರವಣಿಗೆಗಳು ನಡೆದವು. ಈ ಕಾಯಿದೆಯ ಕುರಿತು ಬರೆದ ಪತ್ರಿಕಾ ವರದಿಯೊಂದರಲ್ಲಿ ಗಾಂಧಿ ಹೀಗೆ ಹೇಳುತ್ತಾರೆ: *'ಭಾರತದಲ್ಲಿ ಇದುವರೆಗೆ ಕಂಡಿಲ್ಲದೆ ಇದ್ದಂತಹ ಪ್ರತಿಭಟನೆಯ ಅಲೆಯನ್ನು ಈ ಕಾಯಿದೆ ಹುಟ್ಟುಹಾಕಿತು [...] ನನ್ನ ಅಭಿಪ್ರಾಯದಲ್ಲಿ, ಆತ್ಮಗೌರವ ಇರುವ ಯಾವ ವ್ಯಕ್ತಿಯೂ ತನ್ನ ಸಮಾಜಕ್ಕೆ ಆಗುತ್ತಿರುವ ಘಾಸಿಯನ್ನು ಸಹಿಸಿಕೊಂಡು ಸುಮ್ಮನಿರುವುದಿಲ್ಲ.'* [12]

ಯಾವ ಕಾರಣಗಳಿಗೆ ಆ ರೌಲಟ್ ಕಾಯಿದೆಯ ವಿರುದ್ಧ ದೇಶಾದ್ಯಂತ ಚಳವಳಿ ನಡೆಯಿತೋ ಆ ಕಾರಣಗಳು ಇಂದು ಮತ್ತೆ ಅನುರಣನಗೊಳ್ಳುತ್ತಿವೆ. ಕಾನೂನಿನ ನೆರವು ನೀಡದೆ (ವಕೀಲರನ್ನು ಒದಗಿಸಿದೆ) ಯಾವ ವ್ಯಕ್ತಿಯನ್ನೂ ಅಪರಾಧಿ ಎಂದು ಘೋಷಿಸುವಂತಿಲ್ಲ ಎಂದು ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚನ್ಯಾಯಾಲಯದ ನ್ಯಾಯಮೂರ್ತಿಗಳು ಬೇರೆ ಬೇರೆ ಸಂದರ್ಭಗಳಲ್ಲಿ ತೀರ್ಪು ನೀಡಿದ್ದಾರೆ. ಈ ತೀರ್ಪುಗಳಿಗೆ ಆಧಾರವಾಗಿ ಅವರುಗಳು ರೌಲಟ್ ಕಾಯಿದೆಯ ವಿರುದ್ಧ ನಡೆದ ಚಳವಳಿಯನ್ನು ಹಾಗೂ ಆ ಕಾಯಿದೆಯು ಹೇರಿದ್ದ *'ನ ವಕೀಲ್, ನ ದಲೀಲ್ ನ ಅಪೀಲ್' (ವಕೀಲರಿಲ್ಲ, ವಿಚಾರಣೆ ಇಲ್ಲ, ಮೇಲ್ಮನವಿ ಇಲ್ಲ) ಸೂತ್ರವನ್ನು ಸ್ಮರಿಸಿದ್ದಾರೆ.* [13] ಈ ಬಗ್ಗೆ 2011ರಲ್ಲಿ ಸರ್ವೋಚ್ಚ ನ್ಯಾಯಾಲಯ ಹೀಗೆ ಹೇಳಿದೆ:

> *'ಸ್ವತಃ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಸಂವಿಧಾನದ ರಚನಾಕಾರರು, ವಿದೇಶೀಯರ ಆಡಳಿತವು ನಮ್ಮ ಜನರ ನಾಗರಿಕ ಹಕ್ಕುಗಳನ್ನು ಹೇಗೆ ಹೊಸಕಿ ಹಾಕಿದ್ದವು ಎನ್ನುವುದನ್ನು ಕಣ್ಣಾರೆ ಕಂಡಿದ್ದರು ಮತ್ತು 'ನ ವಕೀಲ್, ನ ದಲೀಲ್, ನ ಅಪೀಲ್' ಎಂಬ ಸೂತ್ರದಡಿಯಲ್ಲಿ ದೀರ್ಘಕಾಲ ಸೆರೆವಾಸಕ್ಕೊಳಗಾಗಿದ್ದರು.*

*ಅವರಲ್ಲಿ ಹಲವರು ವೃತ್ತಿಯಲ್ಲಿ ವಕೀಲರಾಗಿದ್ದರು ಮತ್ತು ವಿಶೇಷವಾಗಿ ಅಪರಾಧ ಪ್ರಕರಣಗಳಲ್ಲಿ ವಕೀಲರ ನೆರವಿನ ಮಹತ್ವವನ್ನು ಚೆನ್ನಾಗಿ ಅರಿತಿದ್ದರು. ಈ ಕಾರಣಕ್ಕಾಗಿಯೇ ಅವರು ಅನುಚ್ಛೇದ 22(1)ರ 14 ಅಡಿಯಲ್ಲಿ ಆರೋಪಿಗಳಿಗೆ ಕಾನೂನು ನೆರವಿನ (ವಕೀಲರ ನೆರವು) ಹಕ್ಕನ್ನು ಸೇರಿಸಿದರು. ಸಂವಿಧಾನ ರಚನಾಕಾರರ ಈ ಆಶಯವನ್ನು ಕಾರ್ಯಗತಗೊಳಿಸಲು ಹೆಚ್ಚಿನ ಮಹತ್ವವನ್ನು ನೀಡಬೇಕು'.*

ಕೊಲೆ, ಲೈಂಗಿಕ ದೌರ್ಜನ್ಯ, ರಾಜದ್ರೋಹ, ಭಯೋತ್ಪಾದನೆ ಮುಂತಾದ ಅಪರಾಧ ಪ್ರಕರಣಗಳ ಆರೋಪಿಗಳ ಪರವಾಗಿ ವಕಾಲತ್ತು ವಹಿಸದಂತೆ ತನ್ನ ಸದಸ್ಯರನ್ನು ನಿಯಂತ್ರಿಸುವ ಬಾರ್ ಅಸೋಸಿಯೇಷನ್‌ಗಳ ವರ್ತನೆಯ ಬಗ್ಗೆ ಸರ್ವೋಚ್ಚ ನ್ಯಾಯಾಲಯವು ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. ಹಾಗೂ *ಈ ವರ್ತನೆಯು ಸಂವಿಧಾನವು ಪ್ರತಿಯೊಬ್ಬ ವ್ಯಕ್ತಿಗೆ ನೀಡಿರುವ ಮೂಲಭೂತ ಹಕ್ಕುಗಳ, ಸಂವಿಧಾನಾತ್ಮಕ ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ಹೇಳಿದೆ.*[15]

ಇತ್ತೀಚೆಗೆ ಧಾರವಾಡದ ಕಾಲೇಜೊಂದರಲ್ಲಿ ಕಲಿಯುತ್ತಿದ್ದ ಕಾಶ್ಮೀರದ ಮೂವರು ಯುವಕರು ಪಾಕಿಸ್ಥಾನದ ಪರವಾಗಿ ಘೋಷಣೆ ಕೂಗಿದ್ದಾರೆ ಎನ್ನಲಾದ ವಿಡಿಯೋ ಒಂದು ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿತ್ತು. ಆ ಸಂದರ್ಭದಲ್ಲಿ ಹುಬ್ಬಳ್ಳಿ–ಧಾರವಾಡದ ವಕೀಲರು ಈ ಯುವಕರ ಪರವಾಗಿ ವಕಾಲತ್ತು ಹಾಕದಿರಲು ನಿರ್ಧರಿಸಿದರು ಹಾಗೂ ಯಾವ ವಕೀಲರೂ ಈ ಯುವಕರಿಗೆ ಕಾನೂನು ನೆರವು ಒದಗಿಸಬಾರದೆಂದು ನಿರ್ಣಯ ಹೊರಡಿಸಿದರು.[16] ಆದರೆ ಕರ್ನಾಟಕ ಉಚ್ಚ ನ್ಯಾಯಾಲಯವು ವಕೀಲರನ್ನು ಹೊಂದಲು ಆರೋಪಿಗಳಿಗೆ ಇರುವ ಹಕ್ಕನ್ನು ಉಲ್ಲಂಘಿಸಲು ಸಾಧ್ಯವಿಲ್ಲ ಎಂದಿತು.

*'ಆರೋಪಿಗಳ ಸಾಂವಿಧಾನಿಕ ಹಕ್ಕನ್ನು ರಕ್ಷಣೆ ಮಾಡುವುದು ಪೊಲೀಸರ ಕರ್ತವ್ಯವಾಗಿದೆ. ವಕೀಲರನ್ನು ನೇಮಕ ಮಾಡಿಕೊಳ್ಳಲು ಅವಕಾಶ ಕೊಡದಿದ್ದರೆ ಅದು ಆರೋಪಿಗಳ ಸಾಂವಿಧಾನಿಕ ಹಕ್ಕಿನ ಉಲ್ಲಂಘನೆಯಾಗುತ್ತದೆ' ಎಂದಿತು ನ್ಯಾಯಾಲಯ.*[17]

'ವಕೀಲರ ನೆರವು ಪಡೆಯುವ ಹಕ್ಕನ್ನು ನಿರಾಕರಿಸಿದಲ್ಲಿ ಅದು ನ್ಯಾಯಾಂಗದ ಕೆಲಸಕ್ಕೆ ಅಡಚಣೆ ಉಂಟುಮಾಡಿದಂತೆ ಆಗುತ್ತದೆ' ಎಂದೂ ನ್ಯಾಯಾಲಯ ಹೇಳಿತು. ಈ ಹಕ್ಕನ್ನು ರಕ್ಷಿಸುವ ಸಲುವಾಗಿ, ಕಾಶ್ಮೀರದ ಯುವಕರ ಪರವಾಗಿ ವಕಾಲತ್ತು ವಹಿಸುವ ವಕೀಲರಿಗೆ ರಕ್ಷಣೆ ಒದಗಿಸುವಂತೆಯೂ ನ್ಯಾಯಾಲಯ ಪೊಲೀಸರಿಗೆ ಆದೇಶಿಸಿತು.

*'ಸಂವಿಧಾನದ ಅನುಚ್ಛೇದ 22(1)ನ್ನು ಹಾಗೂ ಆರೋಪಿಗಳ ಕಾನೂನು ನೆರವು ಪಡೆಯುವ ಹಕ್ಕನ್ನು ವಕೀಲರು ರಕ್ಷಿಸದೆ ಹೋದಲ್ಲಿ, ನ್ಯಾಯಾಂಗ ವ್ಯವಸ್ಥೆಯನ್ನು ಮತ್ತಾರು ರಕ್ಷಿಸುತ್ತಾರೆ?' ಎಂದೂ ನ್ಯಾಯಾಲಯ ಹೇಳಿರುವುದಾಗಿ ವರದಿಯಾಗಿದೆ.* [18]

### 2.1.3 ಪ್ರಭುತ್ವದ ಹಿಂಸಾಚಾರದಿಂದ ರಕ್ಷಣೆ

ರೌಲಟ್ ಮಸೂದೆಯ ವಿರುದ್ಧ ಹಾಗೂ ರಾಜದ್ರೋಹದ ಆಪಾದನೆಯ ವಿರುದ್ಧ ಗಾಂಧೀಜಿ ನಡೆಸಿದ ಹೋರಾಟಗಳು ವಸಾಹತುಶಾಹಿ ಆಡಳಿತದ ನ್ಯಾಯಸಮ್ಮತೆಯನ್ನೇ ಪ್ರಶ್ನೆಗೆ ಒಡ್ಡಿದ್ದವು. ಗಾಂಧಿ ಪ್ರಭುತ್ವಕ್ಕೇ ಸವಾಲು ಹಾಕಿದ್ದರು.

ಈ ಕುರಿತು ಒಂದು ಕಡೆ ಅವರು ಹೀಗೆ ಬರೆದಿದ್ದಾರೆ:

*'ಪ್ರಭುತ್ವವು ಸಂಘಟಿತವಾದ ಮತ್ತು ಸಾಂದ್ರವಾದ ಹಿಂಸೆಯನ್ನು ಪ್ರತಿನಿಧಿಸುತ್ತದೆ. ವ್ಯಕ್ತಿಗಳಿಗೆ ಮನಸ್ಸು, ಆತ್ಮ ಇರುತ್ತದೆ. ಆದರೆ, ಪ್ರಭುತ್ವವು ಆತ್ಮ-ಮನಸ್ಸುಗಳಿಲ್ಲದ ಯಂತ್ರದಂತೆ. ಹಿಂಸೆಯಿಂದಲೇ ಜನ್ಮತಳೆದ ಪ್ರಭುತ್ವವನ್ನು ಅದರಿಂದ ದೂರಪಡಿಸುವುದು ಸಾಧ್ಯವಿಲ್ಲದ ಮಾತು.'*

*'ಪ್ರಭುತ್ವದ ಶಕ್ತಿಯು ಹೆಚ್ಚಾಗುತ್ತಲೇ ಇರುವುದನ್ನು ನಾನು ಭೀತಿಯಿಂದಲೇ ಗಮನಿಸುತ್ತಿರುವೆ. ಶೋಷಣೆಯನ್ನು ಕಡಿಮೆ ಮಾಡಿ ಒಳಿತನ್ನು ಮಾಡುತ್ತೇವೆ ಎಂದು ಹೇಳುತ್ತಿರುವಾಗಲೂ ಅಭಿವೃದ್ಧಿಯ ಹೆಸರಿನಲ್ಲಿ ಜನರ ವೈಯಕ್ತಿಕತೆ ಮತ್ತು ಪ್ರತ್ಯೇಕ ಅಸ್ತಿತ್ವಗಳು ನಾಶವಾಗುತ್ತಿರುವುದು ಮಾನವ ಜನಾಂಗಕ್ಕೆ ಎಸಗುತ್ತಿರುವ ಅತಿದೊಡ್ಡ ಹಾನಿ.'* [19]

**“ಪ್ರಭುತ್ವವು ಸಂಘಟಿತವಾದ ಮತ್ತು ಸಾಂದ್ರವಾದ ಹಿಂಸೆಯನ್ನು ಪ್ರತಿನಿಧಿಸುತ್ತದೆ. ವ್ಯಕ್ತಿಗಳಿಗೆ ಮನಸ್ಸು, ಆತ್ಮ ಇರುತ್ತದೆ. ಆದರೆ, ಪ್ರಭುತ್ವವು ಆತ್ಮ-ಮನಸ್ಸುಗಳಿಲ್ಲದ ಯಂತ್ರದಂತೆ. ಹಿಂಸೆಯಿಂದಲೇ ಜನ್ಮತಳೆದ ಪ್ರಭುತ್ವವನ್ನು ಅದರಿಂದ ದೂರಪಡಿಸುವುದು ಸಾಧ್ಯವಿಲ್ಲದ ಮಾತು.”**

ಇತ್ತೀಚಿನ ದಿನಗಳಲ್ಲಿ ಪ್ರಭುತ್ವವು ಹಿಂಸೆಯೊಂದಿಗಿನ ತನ್ನ ಸಂಬಂಧವನ್ನು ಮತ್ತೆ ಮತ್ತೆ ದೃಢಪಡಿಸುತ್ತಿದೆ ಹಾಗೂ ಹೆಚ್ಚು ಹೆಚ್ಚು ಹೊಣೆಗೇಡಿಯಾಗುತ್ತಿದೆ. ತನ್ನದೇ ನಾಗರಿಕರ ವಿರುದ್ಧ ಹಿಂಸೆಯನ್ನು ಹರಿಬಿಡುವ ಪ್ರಭುತ್ವದ ಈ

ಗುಣವು ಮುಂದಿನ ದಿನಗಳಲ್ಲಿ ಗಂಭೀರ ಸವಾಲಾಗಲಿದೆ. ರಾಷ್ಟ್ರವಾದಿಗಳ ನಡುವೆ ಇದ್ದೂ ಪ್ರಭುತ್ವದ ಹಿಂಸೆಯನ್ನು ಬಲವಾಗಿ ವಿರೋಧಿಸುತ್ತಿದ್ದ ವ್ಯಕ್ತಿ ಗಾಂಧಿ. ಅವರು ಈಗ ಇದ್ದಿದ್ದರೆ ಹಿಂದಿಗಿಂತಲೂ ಹೆಚ್ಚು ಹಿಂಸಾತ್ಮಕವಾಗಿರುವ, ಮಿಲಿಟರೀಕರಣಗೊಂಡಿರುವ ಭಾರತದ ಪ್ರಭುತ್ವವನ್ನು ನೋಡಿ ಖಂಡಿತ ಮರುಗುತ್ತಿದ್ದರು

ಟೀಕೆ ಮತ್ತು ಭಿನ್ನಾಭಿಪ್ರಾಯಗಳನ್ನು ಎಳ್ಳಷ್ಟೂ ಸಹಿಸದ ಇಂದಿನ ಪ್ರಭುತ್ವದ ನಡೆಗಳು ಹೇಬಿಯಸ್ ಕಾರ್ಪಸ್ ರಿಟ್ ಅರ್ಜಿಗೆ ಹೆಚ್ಚಿನ ಮಹತ್ವವನ್ನು ತಂದುಕೊಟ್ಟಿದೆ. ತನ್ನ ಟೀಕಾಕಾರರನ್ನು ಮನಸೋಇಚ್ಛೆ ಬಂಧಿಸಿ, ಬಂಧನದಲ್ಲಿ ಇಡುವ ಪ್ರಭುತ್ವದ ನಿರಂಕುಶ ನಡವಳಿಕೆಗೆ ತಡೆಯೊಡ್ಡುವ ಸಾಮರ್ಥ್ಯ ಇರುವುದು ನ್ಯಾಯಾಂಗಕ್ಕೆ ಮಾತ್ರ. ಪ್ರಭುತ್ವದ ನಿರಂಕುಶ ಮತ್ತು ಅಕ್ರಮ ಬಂಧನದಿಂದ ನಾಗರಿಕರನ್ನು ರಕ್ಷಿಸುವುದು ನ್ಯಾಯಾಂಗದ ಪ್ರಮುಖ ಕರ್ತವ್ಯವಾಗಿದೆ. ಪ್ರಭುತ್ವವು ಮಾಡಿರುವ ರಾಜಕೀಯ ಬಂಧನಗಳು ಅಕ್ರಮವೋ ಸಕ್ರಮವೋ ಎಂಬುದನ್ನು ಪರೀಕ್ಷಿಸಲು ಸರ್ವೋಚ್ಚ ನ್ಯಾಯಾಲಯ ಹಾಗೂ ರಾಜ್ಯಗಳ ಉಚ್ಚನ್ಯಾಯಾಲಯಗಳು ಪ್ರಭುತ್ವಕ್ಕೆ ಹೇಬಿಯಸ್ ಕಾರ್ಪಸ್ ರಿಟ್ ನೀಡುವ ಅಧಿಕಾರ ಹೊಂದಿದೆ. ಈ ಅಧಿಕಾರವೇ ನಾಗರಿಕರ ರಾಜಕೀಯ ಸ್ವಾತಂತ್ರ್ಯವನ್ನು ಕಾಪಾಡಲು ಇರುವ ಮೂಲ ಅಸ್ತ್ರವಾಗಿದೆ.

## 2.2 ಸಾಮಾಜಿಕ ಸ್ವಾತಂತ್ರ್ಯ

ಸಂವಿಧಾನವು ಕೇವಲ ರಾಜಕೀಯ ಸ್ವಾತಂತ್ರ್ಯವನ್ನು ದೃಢಪಡಿಸುವ ದಸ್ತಾವೇಜಲ್ಲ. ಬದಲಿಗೆ, ಜಾತಿ ಮತ್ತು ಲಿಂಗ ತಾರತಮ್ಯದಂತಹ ದಮನಕಾರಿ ಆಚರಣೆಗಳ ವಿರುದ್ದ ನಡೆದ ಹೋರಾಟಗಳ ಫಲಿತಾಂಶವೂ ಹೌದು. ಗೌತಮ್ ಭಾಟಿಯಾ ಅವರ ಮಾತಿನಲ್ಲಿ ಹೇಳುವುದಾದರೆ:

> *ಅಂಬೇಡ್ಕರ್ ಅವರ ಕ್ರಾಂತಿಕಾರಿ ಚಿಂತನೆ(ಯ ಪ್ರಕಾರ): ವೈಯಕ್ತಿಕ ಗೌರವ ಮತ್ತು ಘನತೆಯ ನಿರಾಕರಣೆಯು, ನಿಜ ರೂಪದಲ್ಲಿ ಹಾಗೂ ಸಾಂಕೇತಿಕವಾಗಿ, ಕೇವಲ ಸರ್ಕಾರದಿಂದ ಮಾತ್ರವಲ್ಲ ಖಾಸಗಿ ಶಕ್ತಿಗಳಿಂದಲೂ ನಡೆಯುತ್ತದೆ– ಹಾಗಾಗಿ ವ್ಯಕ್ತಿಯ ಸ್ವಾತಂತ್ರ್ಯವನ್ನು ರಕ್ಷಿಸಲು, ಸರ್ಕಾರದ ನಡೆಗಳನ್ನು ನಿಯಂತ್ರಿಸಿದರೆ ಮಾತ್ರ ಸಾಲದು, ಖಾಸಗಿ ಶಕ್ತಿಗಳನ್ನೂ ಸಂವಿಧಾನಕ್ಕೆ ಬದ್ಧವಾಗಿರುವಂತೆ ಮಾಡಬೇಕು; ಅವರ ಅತಿಕ್ರಮಣಗಳನ್ನೂ ನಿಯಂತ್ರಿಸಬೇಕು.* [20]

ಸ್ವಾತಂತ್ರ್ಯದ ಪರಿಕಲ್ಪನೆಯಲ್ಲಿ ರಾಜಕೀಯ ಸ್ವಾತಂತ್ರ್ಯ ಮಾತ್ರವಲ್ಲ ಸಾಮಾಜಿಕ ಸ್ವಾತಂತ್ರ್ಯವೂ ಅಡಗಿದೆ ಎನ್ನುವ ಮಹತ್ವದ ಅರಿವು ಬಹುಶಃ ಡಾ. ಅಂಬೇಡ್ಕರ್ ಅವರು ಮುನ್ನಡೆಸಿದ ಮಹಾಡ್ ಚಳವಳಿಯ ಐತಿಹಾಸಿಕ ಸಂದರ್ಭದಲ್ಲಿ ಮೂಡಿರಬೇಕು. ತೀವ್ರ ಜಾತಿವಾದಿಯಾಗಿದ್ದ ಸ್ವಾತಂತ್ರ್ಯಪೂರ್ವದ ಭಾರತೀಯ ಸಮಾಜವು ಕೆರೆ, ಬಾವಿ, ರಸ್ತೆ, ಊಟದ ವ್ಯವಸ್ಥೆಗಳನ್ನು ಬಳಸುವಲ್ಲಿ ಕಟ್ಟುನಿಟ್ಟಿನ ಜಾತಿ ಆಧರಿತ ಪ್ರತ್ಯೇಕತೆಯನ್ನು, ಸಾಮಾಜಿಕ ಅಸ್ಪೃಶ್ಯತೆಯನ್ನು ಅನುಸರಿಸುತ್ತಿತ್ತು. ಭಕ್ತಿ ಚಳವಳಿಕಾರರು ಹಾಗೂ ಕಬೀರ್‌ನಂತಹ ಸಂತರು ತೋರಿದ ಪ್ರಗತಿಪರ ಚಿಂತನೆಗಳು ಭಾರತೀಯ ಪರಂಪರೆಯಲ್ಲಿಯೇ ಇದ್ದರೂ, ಸಮಾನತೆ ಬೋಧಿಸಿದ ಬೌದ್ಧ ಧರ್ಮವು ಇಲ್ಲೇ ಜನ್ಮತಾಳಿದ್ದರೂ, ಜಾತಿ ತಾರತಮ್ಯವು ಈ ದೇಶದಲ್ಲಿ ಸಾಮಾಜಿಕ ಮನ್ನಣೆಯನ್ನು ಪಡೆದಿತ್ತು.

1927ರ ಮಾರ್ಚ್ 19ರಂದು ನಡೆದ, ಸುಮಾರು 3000 ಜನರು ಬಾಗವಹಿಸಿದ್ದ ಮಹಾಡ್ ಸಮಾವೇಶದಲ್ಲಿ ಡಾ. ಅಂಬೇಡ್ಕರ್ ಹೀಗೆ ಹೇಳುತ್ತಾರೆ–

> *ಬ್ರಿಟಿಷರು ಭಾರತಕ್ಕೆ ಬರುವ ಮೊದಲು ಅಸ್ಪೃಶ್ಯರಿಗೆ ಭಾರತೀಯ ಸಮಾಜದಲ್ಲಿ ತಮ್ಮ ಬದುಕಿನ ಗುರಿ ಸಾಧಿಸಲು ಯಾವ ಅವಕಾಶಗಳಿದ್ದವು ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಆದರೆ, ಆ ದಿನಗಳಲ್ಲಿ ಸ್ಪೃಶ್ಯ–ಅಸ್ಪೃಶ್ಯರೆಂಬ ಭೇದ–ಭಾವ ಬಲವಾಗಿ ಬೇರೂರಿತ್ತು. ಸ್ಪೃಶ್ಯರ ಮೇಲೆ ಅಸ್ಪೃಶ್ಯರ ನೆರಳು ಸಹ ಬೀಳಬಾರದೆಂಬ ಕಟ್ಟಳೆ ಇತ್ತು. ಸ್ಪೃಶ್ಯರನ್ನು ಕಂಡಕೂಡಲೆ ಅಸ್ಪೃಶ್ಯರು ಬೇರೆ ದಾರಿ ಹಿಡಿದು ಹೋಗಬೇಕಿತ್ತು. ಅವರ ಉಗುಳು ನೆಲದ ಮೇಲೆ ಬೀಳದಂತೆ ಕುತ್ತಿಗೆಯಲ್ಲಿ ಮಣ್ಣಿನ ಕುಡಿಕೆ ಕಟ್ಟಿಕೊಳ್ಳಬೇಕಿತ್ತು. ಸ್ಪೃಶ್ಯರು ಮತ್ತು ಅಸ್ಪೃಶ್ಯರನ್ನು ಸುಲಭವಾಗಿ ಗುರುತಿಸುವಂತಾಗಲು ಇವರು ಕೈಗಳಿಗೆ ಕಪ್ಪು ದಾರವನ್ನು ಕಟ್ಟಿಕೊಳ್ಳಬೇಕಿತ್ತು.* [21]

ದಲಿತ ಸಮುದಾಯದ ಕಷ್ಟಗಳಿಗೆ ಕಾರಣಗಳನ್ನು ಗುರುತಿಸುತ್ತಾ ಹೋದ ಅಂಬೇಡ್ಕರ್ ಅವರು, ದಲಿತರು ಸೇನೆಗೆ ಸೇರದಂತೆ ವಿಧಿಸಿರುವ ನಿರ್ಬಂಧವು ಅಂತಹ ಒಂದು ಮುಖ್ಯ ಕಾರಣ ಎಂದರು. ಈ ನಿರ್ಬಂಧವನ್ನು ತೆಗೆಸಲು ದಲಿತ ಸಮುದಾಯವು ಒಟ್ಟಾಗಿ ಹೋರಾಟ ಮಾಡಬೇಕು. ಜೊತೆಗೆ ಕೃಷಿ ಸೌಲಭ್ಯ ಮತ್ತು ಸರ್ಕಾರಿ ಕಚೇರಿಯ ಕೆಲಸಗಳನ್ನೂ ಪಡೆದುಕೊಳ್ಳಬೇಕು ಎಂದು ಕರೆ ನೀಡಿದರು.

ಅಂಬೇಡ್ಕರ್ ಅವರ ಭಾಷಣದ ನಂತರ ಎ.ವಿ. ಚಿತ್ರೆ ಅವರು ಹೇಳುತ್ತಾರೆ:

> *ಮಹಾಡ್‌ನ ಮುನಿಸಿಪಾಲಿಟಿಯು ತನ್ನೆಲ್ಲ ನೀರಿನ ಸೌಲಭ್ಯಗಳನ್ನು ಜಾತಿ ಬೇಧವಿಲ್ಲದೆ ಎಲ್ಲ ಜನರೂ ಬಳಸಿಕೊಳ್ಳಲು ಮುಕ್ತಗೊಳಿಸಿದೆ. ಈ ಬಗ್ಗೆ ಮುನಿಸಿಪಾಲಿಟಿಯಲ್ಲಿ ನಿರ್ಣಯವಾಗಿದೆ. ಆದರೆ ಅಸ್ಪೃಶ್ಯ ಸಮುದಾಯವು ಇದನ್ನು ಇನ್ನೂ ಆಚರಣೆಗೆ ತಂದಿಲ್ಲ. ಹಾಗಾಗಿ ಇಂದು ಈ ಮಹಾಸಭೆಯ ಅಧ್ಯಕ್ಷರೂ ಸೇರಿದಂತೆ ನಾವೆಲ್ಲರೂ ಚವ್ದಾರ್ ಕೆರೆಗೆ ನಡೆದು ಆ ನೀರನ್ನು ಕುಡಿಯೋಣ.* [22]

ಮಹಾಡ್‌ನ ಮಾರುಕಟ್ಟೆ ಪ್ರದೇಶದ ಮೂಲಕ ಶಿಸ್ತಿನ ಮೆರವಣಿಗೆಯಲ್ಲಿ ನಡೆದ ಜನರು ದಾರಿಯುದ್ದಕ್ಕೂ ಮಹಾತ್ಮಾ ಗಾಂಧಿಗೆ, ಶಿವಾಜಿಗೆ ಮತ್ತು ಸಮಾನತೆಗೆ ಜೈಕಾರ ಹಾಕುತ್ತಿದ್ದರು. ಚವ್ದಾರ್ ಕೆರೆ ತಲುಪಿದ ಮೆರವಣಿಗೆಗಾರರು ಮೊದಲು ಅಂಬೇಡ್ಕರ್ ಅವರು ಕೆರೆಗೆ ಇಳಿದು ನೀರು ಕುಡಿಯಲು ಅನುವು ಮಾಡಿಕೊಟ್ಟರು. ಅಂಬೇಡ್ಕರ್ ಅವರು ಬಟ್ಟಲಿನಂತೆ ಹಿಡಿದ ಬೊಗಸೆಯಲ್ಲಿ ಕೆರೆಯ ನೀರನ್ನು ಮೊಗೆದುಕೊಂಡು ಕುಡಿದರು. ಜನರ *'ಹರಹರ ಮಹದೇವ'* ಘೋಷಣೆ ಮುಗಿಲು ಮುಟ್ಟಿತ್ತು. ಜನರೂ ಕೆರೆಯ ನೀರನ್ನು ಮುಟ್ಟಿ ಕುಡಿದರು. ಇದಾದ ನಂತರ ಅಂದಿನ ಸಭೆಯನ್ನು ಮುಕ್ತಾಯಗೊಳಿಸಲಾಯಿತು.[23]

ಸಂಭ್ರಮದಿಂದ ಮನೆಗೆ ತೆರಳುತ್ತಿದ್ದ ಜನರ ಮೇಲೆ ಮೇಲ್ಜಾತಿಯವರೆಂದು ಕರೆದುಕೊಳ್ಳುವವರು ದಾಳಿ ನಡೆಸಿದರು. ಕೆರೆಯ ನೀರನ್ನು ಮುಟ್ಟುವ ಧೈರ್ಯ ತೋರಿದ್ದಲ್ಲದೆ ನೀರನ್ನು ಅಪವಿತ್ರಗೊಳಿಸಿದರು ಎಂದು ಆಪಾದನೆ ಮಾಡಲಾಯಿತು. ಜಾತಿ ಕಟ್ಟಳೆಗಳನ್ನು ಮುರಿಯುವ ಇಂತಹ ಸಾರ್ವಜನಿಕ ನಡೆಗಳ ಬಗ್ಗೆ ಪತ್ರಿಕೆಗಳು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದವು. *'ಒಂದು ಸರಳ ನಡೆಯು ಕಂಡರಿಯದಂತಹ ಪರಿಣಾಮಗಳಿಗೆ ಕಾರಣವಾಯಿತು'* ಎನ್ನುತ್ತಾರೆ *ಆನಂದ ತೇಲ್ತುಂಬ್ಡೆ.*[24] ಅವರು ಹೇಳುತ್ತಾರೆ:

> *ಮಹಾಡ್ ಸತ್ಯಾಗ್ರಹವು ಅಸ್ಪೃಶ್ಯರಲ್ಲಿ ಎಚ್ಚರವನ್ನು ಉಂಟುಮಾಡಿತು. ತಮ್ಮ ಬಿಡುಗಡೆಗಾಗಿ ಹೋರಾಟ ಮಾಡಲು ಅವರಲ್ಲಿ ಶಕ್ತಿ ಮತ್ತು ಆತ್ಮಸ್ಥೈರ್ಯವನ್ನು ತುಂಬಿತು. ಹಿಂದು ಧಾರ್ಮಿಕ ಗ್ರಂಥಗಳು ಶತಮಾನಗಳಿಂದ ಬಂಧಿಸಿದ್ದ ಅವರ ಅಸ್ತಿತ್ವ ಸಿಡಿದೇಳಲು ಆರಂಭಿಸಿತು. ಅವರ ಮೇಲೆ ಹೇರಿದ್ದ ನೀಚರೆಂಬ ಭಾವನೆ ಮುರಿದು ಬೀಳಲು ತೊಡಗಿತು. ಅವರ ಆತ್ಮಸ್ಥೈರ್ಯ ಬಿಡುಗಡೆ ಪಡೆದಿತ್ತು.*[25]

ಮಹಾಡ್ ಸತ್ಯಾಗ್ರಹದ ನಂತರ ಅಂಬೇಡ್ಕರ್ ಅವರು ಅಸ್ಪೃಶ್ಯರನ್ನು, ಮೇಲುಜಾತಿಯವರನ್ನು ಹಾಗೂ ಸರ್ಕಾರವನ್ನು ಉದ್ದೇಶಿಸಿ ಮೂರು ಪ್ರತ್ಯೇಕ ಲೇಖನಗಳನ್ನು ಬರೆದರು. ಸ್ಪೃಶ್ಯರನ್ನು ಉದ್ದೇಶಿಸಿ ಬರೆದ ಲೇಖನದಲ್ಲಿ ಅವರು ಅಸ್ಪೃಶ್ಯತೆಯ ನಿವಾರಣೆಯು ದಲಿತರಿಗೆ ಆತ್ಮಗೌರವದ ಪ್ರಶ್ನೆ ಎಂದು ಕರೆದರು.

> *'ಮಹಾತ್ಮಾಗಾಂಧಿಯವರ ಹಾಗೆ ನಾವೂ ಕೂಡ ಇಷ್ಟು ಕಾಲವೂ ಅಸ್ಪೃಶ್ಯತೆಯು ಹಿಂದು ಧರ್ಮದ ಮೇಲಿನ ಬಹುದೊಡ್ಡ ಕಪ್ಪುಚುಕ್ಕೆ ಎಂದು ಭಾವಿಸಿದ್ದೆವು. ಆದರೆ ಈಗ ನಮ್ಮ ಅಭಿಪ್ರಾಯ ಬದಲಾಗಿದೆ; ಅದು ನಮ್ಮ ದೇಹದ ಮೇಲಿನ ಕಪ್ಪುಚುಕ್ಕೆ. ಅದು ಹಿಂದು ಧರ್ಮದ ಸಮಸ್ಯೆ ಎಂದು ಭಾವಿಸಿದ್ದಾಗ ಅದರ ನಿವಾರಣೆಯ ಜವಾಬ್ದಾರಿಯನ್ನು ನಾವು ನಿಮ್ಮ ಮೇಲೆ ಬಿಟ್ಟಿದ್ದೆವು. ಈಗ ಇದು ನಮ್ಮ ಮೇಲಿನ ಕಪ್ಪುಚುಕ್ಕೆ ಎನ್ನುವುದು ಅರಿವಾಗಿರುವುದರಿಂದ ಇದನ್ನು ತೊಳೆದುಕೊಳ್ಳುವ ಕೆಲಸವನ್ನು ನಾವೇ ಮಾಡುತ್ತೇವೆ'* [26]
>
> *'ಹಿಂದು ಧರ್ಮಕ್ಕೆ ನೀವು ಅಂಟಿಸಿದ ಕಳಂಕವನ್ನು ನಮ್ಮ ರಕ್ತದಿಂದ ತೊಡೆದು ಹಾಕಬೇಕು ಎನ್ನುವುದಾದರೆ ಅದನ್ನು ನಮ್ಮ ಅದೃಷ್ಟ ಎಂದು ಭಾವಿಸುತ್ತೇವೆ. ಈ ಉನ್ನತ ಕಾರ್ಯವನ್ನು ಮಾಡುವ ಕಾರ್ಯಕರ್ತರು ನಾವು ಎನ್ನುವ ಅರಿವು ನಮ್ಮಲ್ಲಿ ಅಪರಿಮಿತ ಧೈರ್ಯವನ್ನು ಬೆಳೆಸಿದೆ. ...ಆದರೆ ನಾವು ಎಂದಿಗೂ ಈ ವಿಷಯವನ್ನು ಒಂದು ದಂಗೆ, ಗಲಭೆಯ ಹಾಗೆ ಭಾವಿಸಿಲ್ಲ. ನಮ್ಮ ಪಾಲಿಗೆ ಇದು ಸಮಾನತೆಯ ಹಾದಿಯಲ್ಲಿನ ಮೊದಲ ಯುದ್ಧವಾಗಿದೆ.'* [27]

ಈ ಘಟನೆಯ ನಂತರ ಅಂಬೇಡ್ಕರ್ ಅವರು *ಬಹಿಷ್ಕೃತ ಹಿತಕಾರಿಣಿ ಸಭಾದ ಅಡಿಯಲ್ಲಿ ಬಹಿಷ್ಕೃತ ಭಾರತ* ಎಂಬ ಮರಾಠಿ ಪತ್ರಿಕೆಯನ್ನು ಆರಂಭಿಸಿದರು. ಎರಡನೆಯ ಮಹಾಸಮ್ಮೇಳನಕ್ಕೆ ಜನರನ್ನು ಸಂಘಟಿಸುವಲ್ಲಿ ಬಹಿಷ್ಕೃತ ಭಾರತ ಮಹತ್ತರ ಪಾತ್ರ ವಹಿಸಿತು.[28] ಮುಂಬೈ ಮತ್ತು ಮರಾಠಿ ಭಾಷಿಕರಿರುವ ಪ್ರದೇಶಗಳಲ್ಲಿ ಬಹಿರಂಗ ಸಭೆಗಳು, ಕರಪತ್ರಗಳು, ಗೋಡೆಬರಹ, ಪೋಸ್ಟರ್ ಮೊದಲಾದ ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರ ನಡೆಸಲಾಯಿತು. ಜನರು ಉದಾರವಾಗಿ ದೇಣಿಗೆ ನೀಡಲು ಆರಂಭಿಸಿದರು. ಇದು ಭಾರತದ ಇತಿಹಾಸದಲ್ಲಿ ಅತ್ಯಂತ ವ್ಯವಸ್ಥಿತವಾಗಿ ಆಯೋಜಿಸಿದ ಅಸ್ಪೃಶ್ಯರ ಮೊದಲ ಸಮ್ಮೇಳನವಾಗಿತ್ತು.[29]

ದಲಿತ ಸಮುದಾಯದೊಳಗಿನ ಈ ಎಚ್ಚರಕ್ಕೆ ಪ್ರತಿಯಾಗಿ ಪ್ರಭುತ್ವವು ವಿರೋಧಾತ್ಮಕ ಪ್ರತಿಕ್ರಿಯೆಯನ್ನು ನೀಡಿತು. ಮಹಾಡ್‌ನ ಮುನಿಸಿಪಾಲಿಟಿಯು ಈ ಮೊದಲಿನ ನಿರ್ಣಯವನ್ನು ಹಿಂತೆಗೆದುಕೊಂಡು ಚವ್ದಾರ್ ಕೆರೆಯ ನೀರನ್ನು ಅಸ್ಪೃಶ್ಯರು ಮುಟ್ಟದಂತೆ ನಿರ್ಬಂಧಿಸಿತು. ಮೇಲ್ಜಾತಿಯ ಕೆಲವರು ಅಸ್ಪೃಶ್ಯರಿಗೆ ತಡೆಯೊಡ್ಡಲು ಜಿಲ್ಲಾ ನ್ಯಾಯಾಲಯದ ಮೊರೆ ಹೊಕ್ಕರು.

ಅದೇ ವರ್ಷ ಡಿಸೆಂಬರ್‌ನಲ್ಲಿ ನಡೆದ ಎರಡನೇ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದ ಅಂಬೇಡ್ಕರ್ ಹೇಳಿದರು:

> *'ಅಸ್ಪೃಶ್ಯರು ಚವ್ದಾರ್ ಕೆರೆಯ ನೀರನ್ನು ಮುಟ್ಟದಂತೆ ತಡೆಯಲು ಮುಖ್ಯಕಾರಣ ನೀರು ಗಲೀಜಾಗುತ್ತದೆ, ಅಪವಿತ್ರಗೊಳ್ಳುತ್ತದೆ ಅಥವಾ ಆವಿಯಾಗಿ ಹೋಗುತ್ತದೆ ಎನ್ನುವುದಲ್ಲ. ಧರ್ಮಶಾಸ್ತ್ರಗಳು ನೀಚರೆಂದು ಗುರುತಿಸಿರುವ ಅಸ್ಪೃಶ್ಯರು, ಸ್ಪೃಶ್ಯರಿಗೆ ಸರಿಸಮಾನರಾದವರು ಎನ್ನುವುದನ್ನು ಒಪ್ಪಿಕೊಳ್ಳಲು ಅವರು ಸಿದ್ಧರಿಲ್ಲದೆ ಇರುವುದೇ ನಾವು ಈ ನೀರನ್ನು ಮುಟ್ಟದಂತೆ ತಡೆಯಲು ಪ್ರದಾನ ಕಾರಣ.'*

> *'ಈ ಕೆರೆಯ ನೀರನ್ನು ಕುಡಿಯುವುದರಿಂದ ನಾನಾಗಲಿ ಅಥವಾ ನೀವಾಗಲಿ ಚಿರಂಜೀವಿಗಳಾಗುವುದಿಲ್ಲ. ಈ ಕೆರೆಯ ನೀರನ್ನು ಕುಡಿಯದೆ ಇರುವುದರಿಂದ ನಾವು ಯಾರೂ ಸಾವಿಗೆ ಈಡಾಗಿಲ್ಲ. ನಾವು ಚವ್ದಾರ್ ಕೆರೆಗೆ ಮೆರವಣಿಗೆಯಲ್ಲಿ ಹೋಗುತ್ತಿರುವುದು ಆ ನೀರನ್ನು ಕುಡಿಯುವುದಕ್ಕೆ ಮಾತ್ರವಲ್ಲ, ಬದಲಿಗೆ ನಾವೂ ಎಲ್ಲರಂತೆ ಮನುಷ್ಯರು ಎನ್ನುವುದನ್ನು ಸಾಬೀತುಪಡಿಸುವುದಕ್ಕೆ ಹೋಗುತ್ತಿದ್ದೇವೆ. ಸಮಾನತೆಯನ್ನು ಸಾಧಿಸುವ ನಿಟ್ಟಿನಲ್ಲಿ ಹೆಜ್ಜೆಗಳನ್ನು ಇಡಲು ನಾವು ಈ ಸಮ್ಮೇಳನವನ್ನು ನಡೆಸುತ್ತಿದ್ದೇವೆ ಎನ್ನುವುದು ಈಗ ನಿಮಗೆ ಸ್ಪಷ್ಟವಾಗಿರಬಹುದು. ಇದನ್ನು ಅರಿತುಕೊಂಡಾಗ ಇದೊಂದು ಅಭೂತಪೂರ್ವ ಸಮ್ಮೇಳನ ಎನ್ನುವುದರಲ್ಲಿ ಯಾರಿಗೂ ಸಂಶಯ ಇರುವುದಿಲ್ಲ. ಭಾರತದ ಇತಿಹಾಸದಲ್ಲಿ ಇಂತಹ ಮಹತ್ವದ ದಿನ ಮತ್ತೊಂದು ಬರಲಿಕ್ಕಿಲ್ಲ. ಜಾಗತಿಕ ಇತಿಹಾಸದಲ್ಲಿ ಇಂತಹ ದಿನವನ್ನು ಹುಡುಕುವುದಾದರೆ ಯುರೋಪ್ ಖಂಡದ ಫ್ರಾನ್ಸ್ ದೇಶದ ಇತಿಹಾಸವನ್ನು ಹುಡುಕಬೇಕು. [30] [...] ಫ್ರೆಂಚ್ ಸಮಾಜವನ್ನು ಪುನರ್‌ರಚಿಸುವ ಸಲುವಾಗಿ ಫ್ರಾನ್ಸ್ ಜನತೆಯ ಮಹಾಸಮ್ಮೇಳನವನ್ನು ನಡೆಸಲಾಗಿತ್ತು.*

*ಅದೇ ರೀತಿ ಹಿಂದು ಸಮಾಜವನ್ನು ಪುನರ್‌ರಚಿಸುವ ಸಲುವಾಗಿ ಈ ನಮ್ಮ ಸಮ್ಮೇಳನವನ್ನು ಆಯೋಜಿಸಲಾಗಿದೆ.* [31]

1789ರಲ್ಲಿ ಫ್ರಾನ್ಸ್‌ನಲ್ಲಿ ನಡೆದ ರಾಷ್ಟ್ರೀಯ ಸಮಾವೇಶಕ್ಕೂ ಮಹಾಡ್‌ನ ಸಮಾವೇಶಕ್ಕೂ ಇರುವ ಸಾಮ್ಯತೆಗಳನ್ನು ಗುರುತಿಸಿದ ಅಂಬೇಡ್ಕರ್ ಅವರು, *'ಆರ್ಥಿಕ, ನಾಗರಿಕ, ಧಾರ್ಮಿಕ ಮತ್ತು ಸಾಮಾಜಿಕ ವಿಷಯಗಳಲ್ಲಿ ಅದೇ ರೀತಿಯ ಸಾಧನೆಗಳನ್ನು ಮಾಡಬೇಕೆನ್ನುವುದು ಈ ಸಮಾವೇಶದ ಉದ್ದೇಶ. ಜಾತಿ ಪದ್ಧತಿಯ ಈ ಉಕ್ಕಿನ ಸರಳುಗಳನ್ನು ಮುರಿಯಲು ನಾವು ಸ್ವಯಂ ನಿರ್ಧಾರ ಮಾಡಿದ್ದೇವೆ' ಎಂದರು. 'ಈ ನಮ್ಮ ಆಂದೋಲನವು ಶಕ್ತಿ ಹಾಗೂ ಐಕ್ಯತೆಗೆ, ಸಮಾನತೆ, ಸ್ವಾತಂತ್ರ್ಯ ಹಾಗೂ ಬಂಧುತ್ವಕ್ಕಾಗಿ' ಎಂದು ನುಡಿದರು.* [32]

ದಲಿತ ಸಮುದಾಯವನ್ನು ಶೋಷಣೆಯ ಸಂಕೋಲೆಯಲ್ಲಿ ಬಂಧಿಸುವಂತೆ ಸೂಚಿಸುವ ಮನುಸ್ಮೃತಿಯನ್ನು ಈ ಸಮಾವೇಶದ ಅಂತ್ಯದಲ್ಲಿ, ಡಿಸೆಂಬರ್ 25ರಂದು ದಹಿಸಲಾಯಿತು. ಈ ದಹನವು ಹಿಂದು ಧರ್ಮದ ಸಾಮಾಜಿಕ ಕಟ್ಟಳೆಗಳನ್ನು ನಿರಾಕರಿಸುವುದರ ಸಂಕೇತವಾಗಿತ್ತು. ಮಹಾಡ್ ಸತ್ಯಾಗ್ರಹವು ಸಾಮಾಜಿಕ ಸ್ವಾತಂತ್ರ್ಯದ ಹೋರಾಟಗಳಿಗೆ ಪ್ರೇರಣೆಯಾಗಿದೆ. ಹೀಗೆ ಅಂಬೇಡ್ಕರ್ ಅವರು ಪ್ರಸ್ತುತಪಡಿಸಿದ ಪರಿಕಲ್ಪನೆಗಳು ಸಮಾನತೆ, ಘನತೆ, ಸ್ವಾಯತ್ತತೆ ಮತ್ತು ಜಾತಿವಾದಿ ಸಮಾಜದಿಂದ ಮುಕ್ತಿಪಡೆಯಲು ನಡೆಸುವ ಸ್ವಾತಂತ್ರ್ಯ ಹೋರಾಟದ ಪರಿಕಲ್ಪನೆಗಳೇ ಆಗಿದ್ದವು. ಈ ಎಲ್ಲ ಪರಿಕಲ್ಪನೆಗಳು ಸಂವಿಧಾನದ ಪೀಠಿಕೆಯಲ್ಲಿ ಹಾಗೂ ಒಳಗಿನ ಪಠ್ಯದಲ್ಲಿ ಪ್ರಸ್ತಾಪವಾಗಿರುವುದನ್ನು ಕಾಣಬಹುದು.

## 2.3 ಆರ್ಥಿಕ ಸ್ವಾತಂತ್ರ್ಯ

ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದ ಮುಖ್ಯವಾಹಿನಿಯು ದೀರ್ಘಕಾಲದವರೆಗೆ ದುಡಿಯುವ ಜನರ ಹೋರಾಟಗಳಿಗೆ ಮನ್ನಣೆಯನ್ನೇ ನೀಡಿರಲಿಲ್ಲ. 19ನೇ ಶತಮಾನದ ಕೊನೆಯ ವೇಳೆಗೆ ಈ ಹೋರಾಟಗಳ ಕಡೆಗೆ ಸ್ವಾತಂತ್ರ್ಯ ಹೋರಾಟಗಾರರು ಗಮನ ನೀಡಲು ಆರಂಭಿಸಿದರು. ದುಡಿಯುವ ಜನರು ಮತ್ತು ಕಾರ್ಮಿಕರು ಆರ್ಥಿಕ ಸಮಸ್ಯೆಗಳನ್ನು ಇಟ್ಟುಕೊಂಡು ನಿರಂತರವಾಗಿ ಹೋರಾಟಗಳನ್ನು ನಡೆಸುತ್ತಲೇ ಬಂದಿದ್ದರೂ ಈ ಹೋರಾಟಗಳನ್ನು ಗಮನಿಸಿರಲಿಲ್ಲ.[33] ಇಂತಹ ಪರಿಸ್ಥಿತಿಯಲ್ಲಿ ಮೂಡಿಬಂದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಕರಾಚಿ ನಿರ್ಣಯವು ಐತಿಹಾಸಿಕ ಮಹತ್ವವನ್ನು ಪಡೆದುಕೊಂಡಿತು. ಇದೇ ಮೊದಲ ಬಾರಿಗೆ ಸಾಮಾಜಿಕ ಮತ್ತು ಆರ್ಥಿಕ ಹಕ್ಕುಗಳ ಬಗ್ಗೆ ಸ್ಪಷ್ಟವಾದ ಪರಿಕಲ್ಪನೆ ಮೂಡಿಬಂದ ಕಾರಣ ಇದು ಪರಿವರ್ತನೆಯ ಗಳಿಗೆ ಎನಿಸಿಕೊಂಡಿತು.

1931ರ ಕರಾಚಿ ನಿರ್ಣಯವು ಸ್ವಾತಂತ್ರ್ಯಕ್ಕೆ ಇರುವ ಆರ್ಥಿಕ ಮಗ್ಗುಲನ್ನು ಸ್ಪಷ್ಟಮಾತುಗಳಲ್ಲಿ ಹೀಗೆ ಹಿಡಿದಿಟ್ಟಿತು:

*'ಹಸಿವೆಯಿಂದ ಬಳಲಿದ ಕೋಟ್ಯಂತರ ಜನರ ಶೋಷಣೆಯನ್ನು ಕೊನೆಗೊಳಿಸಲು ರಾಜಕೀಯ ಸ್ವಾತಂತ್ರ್ಯವು ನಿಜಾರ್ಥದಲ್ಲಿ ಆರ್ಥಿಕ ಸ್ವಾತಂತ್ರ್ಯವನ್ನೂ ಒಳಗೊಂಡಿರಬೇಕು ಎಂದು ಈ ಕಾಂಗ್ರೆಸ್ ಮಹಾಸಭೆ ಭಾವಿಸುತ್ತದೆ. ಕಾಂಗ್ರೆಸ್ ಪ್ರತಿಪಾದಿಸುತ್ತಿರುವ ಸ್ವರಾಜ್ ಪರಿಕಲ್ಪನೆಯು ಜನಸಮುದಾಯಕ್ಕೆ ಹೇಗೆ ಅನ್ವಯವಾಗುತ್ತದೆ ಎನ್ನುವುದನ್ನು ಅವರಿಗೆ ಅರ್ಥವಾಗುವಂತೆ ಸರಳವಾಗಿ ಮಂಡಿಸಬೇಕು. ಆದ್ದರಿಂದ, ಮುಂದೆ ಪರಸ್ಪರ ಒಪ್ಪಿಗೆಯ ಮೇರೆಗೆ ಅಂಗೀಕರಿಸಬಹುದಾದ ಸಂವಿಧಾನದಲ್ಲಿ ಈ ಕೆಳಗಿನ ಅಂಶಗಳನ್ನು ಸೇರಿಸಬೇಕು ಅಥವಾ ಸ್ವರಾಜ್ ಸರ್ಕಾರವು ದುಡಿಯುವ ವರ್ಗಕ್ಕೆ ಈ ಅಂಶಗಳನ್ನು ಒದಗಿಸಿಕೊಡುವಂತಹ ಸಾಮರ್ಥ್ಯವನ್ನು ಬೆಳೆಸಬೇಕು:*

*[...]*

*3. ಕೈಗಾರಿಕಾ ಕಾರ್ಮಿಕರಿಗೆ ಜೀವನ ನಿರ್ವಹಣೆಗೆ ಸಾಕಾಗುವಷ್ಟು ವೇತನ, ನಿಗದಿತ ಅವಧಿಯ ಕೆಲಸ, ಕೆಲಸದ ಸ್ಥಳದಲ್ಲಿ ಆರೋಗ್ಯಕರ ಪರಿಸರ ಒದಗಿಸುವುದು; ವೃದ್ಧಾಪ್ಯ-ಅನಾರೋಗ್ಯ ಮತ್ತು ನಿರುದ್ಯೋಗದಿಂದ ಆರ್ಥಿಕ ಸಂಕಷ್ಟ ಒದಗದಂತೆ ರಕ್ಷಣೆ ಒದಗಿಸುವುದು*

*4. ಕಾರ್ಮಿಕರನ್ನು ಜೀತಪದ್ಧತಿಯಿಂದ ಅಥವಾ ಜೀತಪದ್ಧತಿಯಂತಹ ಯಾವುದೇ ವ್ಯವಸ್ಥೆಯಿಂದ ಮುಕ್ತಗೊಳಿಸುವುದು*

*5. ಮಹಿಳಾ ಕಾರ್ಮಿಕರಿಗೆ ರಕ್ಷಣೆ ಹಾಗೂ ಹೆರಿಗೆ ರಜೆ ಒದಗಿಸುವುದು*

*6. ಶಾಲೆಗೆ ಹೋಗುವ ವಯಸ್ಸಿನ ಮಕ್ಕಳನ್ನು ಕಾರ್ಖಾನೆಗಳ ದುಡಿಮೆಯಲ್ಲಿ ತೊಡಗಿಸುವುದನ್ನು ನಿಷೇಧಿಸುವುದು*

*7. ಕಾರ್ಮಿಕರ ಹಿತರಕ್ಷಣೆಗಾಗಿ ಕಾರ್ಮಿಕ ಸಂಘಟನೆಗಳ ರಚನೆಗೆ ಅನುವು ಮಾಡಿಕೊಡುವುದು ಹಾಗೂ ಕಾರ್ಮಿಕರ ಬೇಡಿಕೆಗಳ ಈಡೇರಿಕೆಗೆ ಸೂಕ್ತವಾದ ಆಂತರಿಕ ವ್ಯವಸ್ಥೆಯನ್ನು ರೂಪಿಸುವುದು*

*8. ಭೂಕಂದಾಯ ಮತ್ತು ಬಾಡಿಗೆಯನ್ನು ಕಡಿಮೆ ಮಾಡುವುದು; ಉತ್ಪಾದಕತೆ ಹೆಚ್ಚುವವರೆಗೆ ಅನುತ್ಪಾದಕ ಸ್ವತ್ತಿನ ಮೇಲಿನ ಬಾಡಿಗೆಯನ್ನು ರದ್ದುಪಡಿಸುವುದು*

*9. ಕೃಷಿಯಲ್ಲಿ ನಿಗದಿತ ಆದಾಯಕ್ಕಿಂತ ಹೆಚ್ಚಿನ ಗಳಿಕೆಗೆ ಅನುಕ್ರಮಿಕ (ಪ್ರೊಗ್ರೆಸಿವ್) ಆದಾಯ ತೆರಿಗೆ ಪದ್ಧತಿಯನ್ನು ಅಳವಡಿಸುವುದು*

*10. ಹಲವು ಸ್ತರದ ಅನುವಂಶಿಕ ತೆರಿಗೆ ವಿಧಿಸುವುದು (ಮೃತ ವ್ಯಕ್ತಿಗೂ ಮತ್ತು ಅನುವಂಶಿಕ ಆಸ್ತಿಯನ್ನು ಪಡೆದ ವ್ಯಕ್ತಿಗೂ ಇರುವ ಸಂಬಂಧವನ್ನು ಅವಲಂಬಿಸಿ ತೆರಿಗೆ ದರ ನಿರ್ಧಾರವಾಗುತ್ತದೆ. ಹತ್ತಿರದ ಸಂಬಂಧಿಗೆ ತೆರಿಗೆ ವಿನಾಯಿತಿ ಅಥವಾ ಅತ್ಯಂತ ಕಡಿಮೆ ದರದ ತೆರಿಗೆ ಹಾಗೂ ದೂರದ ಸಂಬಂಧಿಗೆ ಹೆಚ್ಚಿನ ದರದ ತೆರಿಗೆ ವಿಧಿಸಲಾಗುತ್ತದೆ.)*

*[...]*

*19. ಪ್ರಮುಖ ಕೈಗಾರಿಕೆಗಳು ಮತ್ತು ಖನಿಜ ಸಂಪತ್ತನ್ನು ಸರ್ಕಾರವು ನಿಯಂತ್ರಿಸುವುದು.*

ಕರಾಚಿ ನಿರ್ಣಯ ಎಂದು ಹೆಸರಾದ ಈ ಅಂಶಗಳು ಭಾರತದ ಕಾರ್ಮಿಕ ವರ್ಗದ ಇತಿಹಾಸದಲ್ಲಿ ಪ್ರಧಾನ ಘಟ್ಟವಾಗಿದೆ. ಹಾಗೆಯೇ, ಕಾರ್ಮಿಕರ ಹಕ್ಕುಗಳನ್ನು ಸದಾ ಬೆಂಬಲಿಸುತ್ತಿದ್ದ ಡಾ.ಅಂಬೇಡ್ಕರ್ ಅವರು ವೈಸರಾಯ್ ಕೌನ್ಸಿಲ್‌ನಲ್ಲಿ ಕಾರ್ಮಿಕರ ಪ್ರತಿನಿಧಿಯಾಗಿಯೂ ಮಹತ್ತರ ಕೊಡುಗೆ ನೀಡಿದ್ದಾರೆ. ಕಾರ್ಖಾನೆಗಳ ಮಸೂದೆ, ವೇತನ ಪಾವತಿ ಮಸೂದೆ, ಕಾರ್ಮಿಕರ ಸುರಕ್ಷತೆ ಮತ್ತು ಕಲ್ಯಾಣ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಸೂಕ್ಷ್ಮ ವಿಚಾರಗಳನ್ನು ವೈಸರಾಯ್ ಕೌನ್ಸಿಲ್‌ನಲ್ಲಿ ಪ್ರಸ್ತಾಪ ಮಾಡಿರುವುದಲ್ಲದೆ, ಎಂಟು ಗಂಟೆಗಳ ಕೆಲಸದ ಅವಧಿ, ಮಹಿಳಾ ಕಾರ್ಮಿಕರಿಗೆ ಹೆರಿಗೆ ರಜೆ, ಮೊದಲಾದ ಸೌಲಭ್ಯಗಳನ್ನು ಒದಗಿಸುವುದರಲ್ಲೂ ನಿರ್ಣಾಯಕ ಪಾತ್ರ ವಹಿಸಿದ್ದಾರೆ. ಕಾರ್ಮಿಕರ ಕೆಲಸದ ಅವಧಿಯನ್ನು ನಿರ್ದಿಷ್ಟ ಅವಧಿಗೆ ಗೊತ್ತುಪಡಿಸಬೇಕು ಎಂಬ ತತ್ವವನ್ನು ಬಲವಾಗಿ ಪ್ರತಿಪಾದಿಸಿದ ಅವರು, ಹಾಗಿದ್ದಾಗ ಮಾತ್ರ ದುಡಿಯುವ ಜನರು ಈ ದೇಶದ ಪ್ರಜೆಗಳೂ ಆಗುವುದು ಸಾಧ್ಯವಾಗುತ್ತದೆ ಎಂದಿದ್ದರು. *'ಕಾರ್ಮಿಕರಿಗೆ ಕಾರ್ಖಾನೆಯ ದುಡಿತದ ಹೊರತಾಗಿ ಬಿಡುವಿನ ಸಮಯ ನೀಡದಿರುವುದು ಅನ್ಯಾಯ ಮತ್ತು ಅವಿವೇಕದ ಕೆಲಸವಾಗುತ್ತದೆ. ಈ ಬಿಡುವಿನ ಸಮಯವು ಕಾರ್ಮಿಕರನ್ನು ಪ್ರಜೆಗಳನ್ನಾಗಿ ರೂಪಿಸಲು ಹಾಗೂ ಅವರ ದೈಹಿಕ ಕ್ಷಮತೆಯನ್ನು ಹೆಚ್ಚಿಸಲು ಅತ್ಯಂತ ಅಗತ್ಯವಾಗಿರುತ್ತದೆ ಎಂದು ಕಾರ್ಮಿಕರ ಇಲಾಖೆಯ ಟಿಪ್ಪಣಿಯಲ್ಲಿ ನಮೂದಿಸಲಾಗಿದೆ'* [34] ಎಂದೂ ಅಂಬೇಡ್ಕರ್ ಹೇಳಿದರು.

ಆರ್ಥಿಕ ಹಕ್ಕುಗಳ ವಿಷಯವು ಸಂವಿಧಾನದ ಮೂಲಭೂತ ಹಕ್ಕುಗಳ ಅಧ್ಯಾಯದಲ್ಲಿ ಪ್ರಸ್ತಾಪವಾಗಿದ್ದರೂ, ಇದನ್ನು ಮುಖ್ಯವಾಗಿ ರಾಜ್ಯ ನಿರ್ದೇಶಕ ತತ್ವಗಳ (ಡೈರೆಕ್ಟೀವ್ ಪ್ರಿನ್ಸಿಪಲ್ಸ್ ಆಫ್ ಸ್ಟೇಟ್ಸ್ ಪಾಲಿಸಿ) ಅಡಿಯಲ್ಲಿ ತರಲಾಗಿದೆ (ಅನುಚ್ಛೇದ 36ರಿಂದ 51). ಮೂಲಭೂತ ಹಕ್ಕುಗಳ ಅಧ್ಯಾಯದಲ್ಲಿ ನೀಡಲಾಗಿರುವ ಹಕ್ಕುಗಳು ಮಾತ್ರ ನ್ಯಾಯಾಧಿಕರಣದ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಅಂದರೆ, ಈ ಹಕ್ಕುಗಳಿಗೆ ಚ್ಯುತಿ ಬಂದಲ್ಲಿ ನಾಗರಿಕರು ಪ್ರಭುತ್ವದ ವಿರುದ್ಧ ಸರ್ವೋಚ್ಚ ಅಥವಾ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಬಹುದು. ಆದರೆ, ರಾಜ್ಯ ನಿರ್ದೇಶಕ ತತ್ವಗಳು ರಾಜ್ಯಗಳಿಗೆ ನೀಡಿರುವ ನಿರ್ದೇಶನಗಳ ಸ್ವರೂಪದಲ್ಲಿ ಇದ್ದು, ಇದರ ಅಡಿಯಲ್ಲಿ ಬರುವ ಸಂಗತಿಗಳ ಉಲ್ಲಂಘನೆಯಾದಲ್ಲಿ ಅದರ ವಿರುದ್ಧ ನ್ಯಾಯಾಲಯದ ಮೂಲಕ ನ್ಯಾಯ ಪರಿಹಾರ ಪಡೆದುಕೊಳ್ಳಲು ಆಸ್ಪದ ಇರುವುದಿಲ್ಲ. ನಿರ್ದೇಶಕ ತತ್ವಗಳ ಈ ಸ್ವರೂಪದಿಂದಾಗಿ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವುದು ಸವಾಲಿನ ಕೆಲಸವಾಗಿದೆ.

ಕಾರ್ಮಿಕರ ರಕ್ಷಣೆಗೆ ಸಂಬಂಧಿಸಿದ ಕೆಲವು ಮಹತ್ವದ ಅಂಶಗಳನ್ನು ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದ ಅನುಚ್ಛೇದ 23ರ ಅಡಿಯಲ್ಲಿ ತರಲಾಗಿದೆ. ಇದರಲ್ಲಿ ಜೀತವೂ ಸೇರಿದಂತೆ ಯಾವುದೇ ಬಗೆಯ 'ಒತ್ತಾಯದ' ದುಡಿಮೆಯನ್ನು ನಿಷೇಧಿಸಲಾಗಿದೆ.[35] 'ಒತ್ತಾಯದ ದುಡಿಮೆ' ಎಂದರೆ ಕೇವಲ ದೈಹಿಕವಾಗಿ ಒತ್ತಾಯ ಮಾಡುವುದಲ್ಲ; ದಮನಕಾರಿ ಸಮಾಜವು ಯಾವುದೇ ವ್ಯಕ್ತಿಯನ್ನು ಅವರ ಆಸಕ್ತಿಗೆ ವಿರುದ್ಧವಾಗಿ ಕೆಲಸ ಮಾಡುವಂತೆ ಸಾಮಾಜಿಕ ಮತ್ತು ಆರ್ಥಿಕ ಒತ್ತಡಗಳನ್ನು ಹೇರುವುದು ಕೂಡ ಒತ್ತಾಯದ ಕೆಲಸ ಎನ್ನುತ್ತದೆ ಸರ್ವೋಚ್ಚ ನ್ಯಾಯಾಲಯ.[36] ಸಂವಿಧಾನದ ಅನುಚ್ಛೇದ 2437 ಬಾಲ ಕಾರ್ಮಿಕ ಪದ್ಧತಿಯನ್ನು, 14 ವರ್ಷ ವಯಸ್ಸಿನೊಳಗಿನ ಮಕ್ಕಳು ದುಡಿಮೆ ಮಾಡುವುದನ್ನು ನಿಷೇಧಿಸುತ್ತದೆ. ಅನುಚ್ಛೇದ 19(1)(ಸಿ) ಅನುಸಾರ ಕಾರ್ಮಿಕರಿಗೆ ಸಂಘಟನೆಯನ್ನು ಕಟ್ಟಿಕೊಳ್ಳುವ ಹಾಗೂ ಸಂಘಟಿತರಾಗಿ ಹೋರಾಡುವ ಹಕ್ಕನ್ನು ನೀಡುತ್ತದೆ.

ಆರ್ಥಿಕ ಸ್ವಾತಂತ್ರ್ಯವನ್ನು ಕೊಡಮಾಡುವ ಮತ್ತು ರಕ್ಷಿಸುವ ಹಲವಾರು ಅಂಶಗಳು ರಾಜ್ಯ ನಿರ್ದೇಶಕ ತತ್ವಗಳ ಪಟ್ಟಿಯಲ್ಲಿ ಇವೆ:

ಅನುಚ್ಛೇದ 43–ಎ: ಕೈಗಾರಿಕೆಗಳ ಆಡಳಿತದಲ್ಲಿ ಕಾರ್ಮಿಕರು ಭಾಗವಹಿಸುವ ಹಕ್ಕು;

ಅನುಚ್ಛೇದ 42 : ದುಡಿಯುವ ಸ್ಥಳದಲ್ಲಿ ನ್ಯಾಯಸಮ್ಮತವಾದ ಹಾಗೂ ಮಾನವೀಯ ಪರಿಸರ ಒದಗಿಸುವುದು;

ಅನುಚ್ಛೇದ 43 : ಜೀವನ ನಿರ್ವಹಣೆಗೆ ಬೇಕಾಗುವಷ್ಟು ವೇತನ ನೀಡುವುದು;

ಅನುಚ್ಛೇದ 47 : ದುಡಿಯುವ ಜನರ ಜೀವನ ಮಟ್ಟವನ್ನು ಹೆಚ್ಚಿಸುವುದು ಹಾಗೂ ಆರೋಗ್ಯವನ್ನು ಸುಧಾರಿಸುವುದು;

ಅನುಚ್ಛೇದ 39 : ಸಮಾನ ಕೆಲಸಕ್ಕೆ ಸಮಾನ ವೇತನ ನೀಡುವುದು; ಇತ್ಯಾದಿ.

ನ್ಯಾಯಾಧಿಕರಣದ ವ್ಯಾಪ್ತಿಗೆ ಒಳಪಡದ ಕೆಲವು ನಿರ್ದೇಶಕ ತತ್ವಗಳನ್ನು ನ್ಯಾಯಾಲಯಗಳೇ ಮೂಲಭೂತ ಹಕ್ಕುಗಳನ್ನಾಗಿ ಮಾರ್ಪಡಿಸಿವೆ. ಆದರೆ, ಭಾರತದ ಬಹುಸಂಖ್ಯಾತ ದುಡಿಯುವ ಜನರ ಹಿತರಕ್ಷಣೆಗೆ ಇನ್ನೂ ಅನೇಕ ನಿರ್ದೇಶಕ ತತ್ವಗಳನ್ನು ಜ್ವಲಂತಗೊಳಿಸುವ ಕೆಲಸ ಬಾಕಿ ಇದೆ.

●

# 3

# ಭಾರತ ಸಂವಿಧಾನದ ಪೀಠಿಕೆ

## 3.1 ಪೀಠಿಕೆಯ ಪೂರ್ವಸೂಚಕಗಳು

ಭಾರತ ಸಂವಿಧಾನದ ಪೀಠಿಕೆಯು ಮೋತಿಲಾಲ್ ನೆಹರೂ ವರದಿ, ಪೂರ್ಣ ಸ್ವರಾಜ್ಯದ ಗೊತ್ತುವಳಿ, ಧ್ಯೇಯೋದ್ದೇಶ ಗೊತ್ತುವಳಿ ಹಾಗೂ ಅಂಬೇಡ್ಕರ್ ಅವರ *ಸ್ಟೇಟ್ಸ್ ಅಂಡ್ ಮೈನಾರಿಟಿಸ್ (ರಾಜ್ಯಗಳು ಮತ್ತು ಅಲ್ಪಸಂಖ್ಯಾತರು)* ಕೃತಿಯಲ್ಲಿ ಪ್ರಸ್ತಾಪವಾಗಿದ್ದ ಪೀಠಿಕೆ– ಈ ದಾಖಲೆಗಳಲ್ಲಿ ವ್ಯಕ್ತವಾಗಿದ್ದ ಭಾರತೀಯರ ಆಕಾಂಕ್ಷೆಗಳು ಮತ್ತು ದೃಷ್ಟಿಕೋನಗಳಿಂದ ಪ್ರೇರಣೆಯನ್ನು ಪಡೆದಿತ್ತು. ಹೀಗೆ ಸಂವಿಧಾನದ ಪೀಠಿಕೆಗೆ ಪ್ರೇರಣೆ ನೀಡಿದ ಪತ್ಯಗಳ ವಿವರಗಳು ಈ ಕೆಳಗಿನಂತಿವೆ.

### 3.1.1 ಪೂರ್ಣ ಸ್ವರಾಜ್ಯದ ಪರಿಕಲ್ಪನೆ

1919ರ ಭಾರತ ಸರ್ಕಾರ ಕಾಯಿದೆಯ[38] (Government of India Act, 1919) ಕಾರ್ಯವೈಖರಿಯನ್ನು ಪರಿಶೀಲಿಸಲು ಮತ್ತು ಸಾಂವಿಧಾನಿಕ ಸುಧಾರಣೆಗಳನ್ನು ಸೂಚಿಸಲು 1927ರಲ್ಲಿ ಬ್ರಿಟಿಷ್ ಸರ್ಕಾರವು ಸೈಮನ್ ಆಯೋಗವನ್ನು ನೇಮಿಸಿತು. ಈ ಆಯೋಗದಲ್ಲಿ ಭಾರತದ ಪ್ರತಿನಿಧಿಗಳು ಇಲ್ಲದ ಕಾರಣ ಸ್ವಾತಂತ್ರ್ಯ ಚಳವಳಿಯ ನೇತಾರರು ಸಿಟ್ಟಾಗಿದ್ದರು. ಈ ಬಗ್ಗೆ ಬ್ರಿಟಿಷರನ್ನು ಪ್ರಶ್ನಿಸಿದಾಗ ಅವರು ನ್ಯೂನತೆಯನ್ನು ಸರಿಪಡಿಸಲು ನಿರಾಕರಿಸಿದರು. ಅಲ್ಲದೆ, ಬ್ರಿಟಿಷರ

ಪ್ರಯತ್ನಗಳ ಬಗ್ಗೆ ಬೇಸರ ಇರುವುದಾದರೆ ತಮ್ಮದೇ ಸ್ವಂತ ಸಂವಿಧಾನದ ಕರಡನ್ನು ರೂಪಿಸಿಕೊಳ್ಳುವಂತೆ ಭಾರತದ ಮುಖಂಡರಿಗೆ ಸವಾಲೆಸೆದರು. ಇದಕ್ಕೂ ಮುನ್ನ, ಜನರ ಬೆಂಬಲವನ್ನು ಗಳಿಸುವ ಸಾಂವಿಧಾನಿಕ ಸುಧಾರಣೆಗಳ ಸಮಗ್ರ ಯೋಜನೆಯೊಂದನ್ನು ರೂಪಿಸಲು ಭಾರತೀಯರು ಅಸಮರ್ಥರು[39] ಎಂಬ ಮಂತ್ರವನ್ನು ಸೈಮನ್ ಆಯೋಗದ ರಚನೆಗೆ ಕಾರಣರಾಗಿದ್ದ ಕನ್ಸರ್ವೇಟಿವ್ ಪಕ್ಷದ ನಾಯಕ ಮತ್ತು ವಿದೇಶಾಂಗ ಸಚಿವ ಲಾರ್ಡ್ ಬರ್ಕೆನ್‌ಹೆಡ್ ಆಗಾಗ್ಗೆ ಜಪಿಸುತ್ತಲೇ ಇದ್ದ. ಈ ಸವಾಲುಗಳಿಗೆ ಉತ್ತರವಾಗಿಯೇ ಮೋತಿಲಾಲ್ ನೆಹರು ವರದಿಯನ್ನು ಹೊರತರಲಾಗಿದ್ದು, ಆ ವರದಿಯೇ ಮುಂದೆ ಸ್ಥಾಪನೆಗೊಳ್ಳಲಿದ್ದ ಭಾರತ ಗಣರಾಜ್ಯದ ಕರಡು ಸಂವಿಧಾನವಾಗಿತ್ತು. 'ಭಾರತೀಯ ಸಂವಿಧಾನದ ಬುನಾದಿಯು ಮೂಲಭೂತ ಹಕ್ಕುಗಳ ಘೋಷಣೆಯಾಗಿರತಕ್ಕದ್ದು ಹಾಗೂ ಖಚಿತವಾದ ಸಮಾನತೆಯ ಹಕ್ಕು, ಬದುಕಿನ ಹಕ್ಕು, ವಿಚಾರ ಮತ್ತು ಧಾರ್ಮಿಕ ಆಯ್ಕೆಯ ಸ್ವಾತಂತ್ರ್ಯದ ಹಕ್ಕು ಮತ್ತು ತಾರತಮ್ಯಗಳ ವಿರುದ್ಧ ರಕ್ಷಣಾತ್ಮಕ ಖಾತ್ರಿಗಳನ್ನು ಒಳಗೊಂಡಿರಬೇಕು' ಎಂದು ಆ ವರದಿಯಲ್ಲಿ ತಿಳಿಸಲಾಗಿತ್ತು. ಅಲ್ಲದೆ ಅದು ಭಾರತವನ್ನು ಮತಧರ್ಮ ನಿರಪೇಕ್ಷ ರಾಷ್ಟ್ರವೆಂದು ಚಿತ್ರಿಸಿತ್ತು. ಆದರೆ ಆ ವರದಿಯು ರಾಜಾಡಳಿತದ ಅಡಿಯಲ್ಲಿ ಸ್ವತಂತ್ರ ರಾಜ್ಯಾಧಿಕಾರವನ್ನು (Dominion Status) ಆಯ್ಕೆ ಮಾಡಿಕೊಂಡಿತ್ತು. ಅಂದರೆ ಭಾರತವು ಬ್ರಿಟಿಷ್ ಅರಸೊತ್ತಿಗೆಗೆ ನಿಷ್ಠೆ ತೋರಬೇಕಿತ್ತು.

ಆದರೆ ಈ ಕ್ರಮದ ಬಗ್ಗೆ ಅಸಂತೋಷಗೊಂಡ ಜವಹರಲಾಲ್ ನೆಹರು, ಹಸರತ್ ಮೋಹನಿ ಮತ್ತು ಸುಭಾಷ್ ಬೋಸ್‌ರಂತಹ ನಾಯಕರು ಪೂರ್ಣ ಸ್ವರಾಜ್ಯ ಇಲ್ಲವೇ ಪೂರ್ಣ ಸ್ವಾತಂತ್ರ್ಯಕ್ಕಾಗಿ ಆಗ್ರಹಿಸಿದರು. ಈ ದಿಶೆಯಲ್ಲಿ 1929ರ ಡಿಸೆಂಬರ್ 19ರಂದು ಕಾಂಗ್ರೆಸ್ ತನ್ನ ಲಾಹೋರ್ ಅಧಿವೇಶನದಲ್ಲಿ ಪೂರ್ಣ ಸ್ವರಾಜ್ಯದ ಘೋಷಣೆಯನ್ನು ಅಂಗೀಕರಿಸಿತು. ಸಂಕ್ಷಿಪ್ತವಾಗಿ ಬರೆಯಲಾಗಿದ್ದ ನಿರ್ಣಯದ ಆರಂಭಿಕ ವಾಕ್ಯಗಳು ಹೀಗಿವೆ:

> *'ಜಗತ್ತಿನ ಬೇರಾವುದೇ ಜನಸಮುದಾಯದಂತೆ ಭಾರತೀಯರು ಕೂಡ ಪ್ರಗತಿಯ ಎಲ್ಲ ಅವಕಾಶಗಳನ್ನು ತಮ್ಮದಾಗಿಸಿಕೊಳ್ಳಲು ಸ್ವತಂತ್ರರಾಗುವ, ತಮ್ಮ ಶ್ರಮದ ಪ್ರತಿಫಲವನ್ನು ಅನುಭವಿಸುವ ಹಾಗೂ ಬದುಕಿನ ಅವಶ್ಯಕತೆಗಳನ್ನು ಹೊಂದುವ ಅವಿಚ್ಛಿನ್ನ ಹಕ್ಕುಗಳನ್ನು ಹೊಂದಿದ್ದಾರೆ ಎಂದು ನಾವು ನಂಬಿದ್ದೇವೆ. ಅಲ್ಲದೆ ಯಾವುದೇ ಜನತೆಯನ್ನು ಯಾವುದೇ ಸರ್ಕಾರವು ಈ ಹಕ್ಕುಗಳಿಂದ ವಂಚಿತರನ್ನಾಗಿಸಿ ಅವರ ಮೇಲೆ ದಬ್ಬಾಳಿಕೆ ಮಾಡಿದ್ದೇ ಆದಲ್ಲಿ ಆ ಸರ್ಕಾರವನ್ನು ಬದಲಿಸಲು ಅಥವಾ*

*ಕೊನೆಗಾಣಿಸಲು ಜನರಿಗೆ ಅಧಿಕಾರವಿರುತ್ತದೆ ಎಂದೂ ನಾವು ನಂಬಿದ್ದೇವೆ. ಬ್ರಿಟಿಷ್ ಸರ್ಕಾರವು ಭಾರತದ ಜನತೆಯಿಂದ ಅವರ ಸ್ವಾತಂತ್ರ್ಯವನ್ನು ಕಸಿದುಕೊಂಡಿರುವುದಷ್ಟೇ ಅಲ್ಲ, ಜನರನ್ನು ಶೋಷಣೆ ಮಾಡುವುದರ ಮೂಲಕ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಂಡಿದೆ ಹಾಗೂ ಭಾರತವನ್ನು ಆರ್ಥಿಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ನಾಶಮಾಡಿದೆ. ಆದ್ದರಿಂದ ಭಾರತವು ಬ್ರಿಟಿಷರೊಂದಿಗಿನ ಸಂಪರ್ಕವನ್ನು ಕಡಿದುಹಾಕಿ ಪೂರ್ಣ ಸ್ವರಾಜ್ಯ ಅಥವಾ ಪೂರ್ಣ ಸ್ವಾತಂತ್ರ್ಯವನ್ನು ಗಳಿಸತಕ್ಕದ್ದು."*

ಇನ್ನು ಮುಂದೆ ಜನವರಿ 26ರಂದು ಪೂರ್ಣ ಸ್ವಾತಂತ್ರ್ಯದ ದಿನವೆಂದು ಆಚರಿಸಬೇಕಾಗಿ ಅಧಿವೇಶನವು ತೀರ್ಮಾನಿಸಿತು. ಅದರಂತೆ 1930ರ ಜನವರಿ 26ರಂದು ದೇಶಾದ್ಯಂತ ಬೃಹತ್ ಸಮಾವೇಶಗಳನ್ನು ಮತ್ತು ಸಭೆಗಳನ್ನು ಹಮ್ಮಿಕೊಳ್ಳಲಾಯಿತು. ಅಲ್ಲಿ ಸಂಪೂರ್ಣ ಸ್ವರಾಜ್ಯ ಘೋಷಣೆಯನ್ನು ಸಾಮೂಹಿಕವಾಗಿ ಓದಿ, ಹೋರಾಟ ನಡೆಸಲು ಪೂರ್ಣ ಸ್ವರಾಜ್ಯ ಅಥವಾ ಸಂಪೂರ್ಣ ಸ್ವಾತಂತ್ರ್ಯವೇ ಏಕೈಕ ಗೌರವಾನ್ವಿತ ಗುರಿ ಎಂದು ಪ್ರಮಾಣೀಕರಿಸಲಾಯಿತು. ಭಾರತದ ಸ್ವಾತಂತ್ರ್ಯ ಚಳವಳಿಯ ಚರಿತ್ರೆಯಲ್ಲಿ ಇದೊಂದು ಮಹತ್ವಪೂರ್ಣ ಸಂದರ್ಭವಾಗಿದೆ, ಏಕೆಂದರೆ ಮೊಟ್ಟಮೊದಲ ಬಾರಿಗೆ ದೇಶದ ಜನತೆ ಸ್ವತಂತ್ರ ಭಾರತದ ತಮ್ಮ ಕಣ್ಣೋಟವನ್ನು ಚಿತ್ರಿಸಿದ್ದರಲ್ಲದೇ ಅದನ್ನು ಬಹಿರಂಗವಾಗಿ ಘೋಷಿಸಿದ್ದರು.

1947ರಲ್ಲಿ ಅಧಿಕಾರ ಹಸ್ತಾಂತರ ಪೂರ್ಣಗೊಳ್ಳುವವರೆಗೂ ಕಾಂಗ್ರೆಸ್ ಈ ದಿನವನ್ನು ಸಂಪೂರ್ಣ ಸ್ವಾತಂತ್ರ್ಯ ದಿನವೆಂದು ಆಚರಿಸುತ್ತಿತ್ತು. ಈ ದಿನದಂದು ಪೂರ್ಣ ಸ್ವರಾಜ್ಯ ಘೋಷಣೆಯನ್ನು ಸಾರ್ವಜನಿಕಗೊಳಿಸಿದ ನೆನಪಿನಲ್ಲಿ ಭಾರತದ ಸಂವಿಧಾನವನ್ನು 1950ರ ಜನವರಿ 26ರಂದೇ ಅಂಗೀಕರಿಸಲಾಯಿತು.

### 3.1.2. ಧ್ಯೇಯೋದ್ದೇಶ ಗೊತ್ತುವಳಿ

1946ರ ಡಿಸೆಂಬರ್ 13ರಂದು ಸಂವಿಧಾನ ರಚನಾ ಸಭೆಯಲ್ಲಿ ಐತಿಹಾಸಿಕ ಧ್ಯೇಯೋದ್ದೇಶ ಗೊತ್ತುವಳಿಯನ್ನು ಮಂಡಿಸಿದ ಜವಹರಲಾಲ್ ನೆಹರು, ಸಂವಿಧಾನ ರಚನಾ ಸಭೆಯು ಯಾವ ಮೌಲ್ಯಗಳನ್ನಾಧರಿಸಿ ಭಾರತದ ಸಂವಿಧಾನವನ್ನು ರಚಿಸಬೇಕಿದೆ ಎನ್ನುವುದನ್ನು ವಿವರಿಸಿದರು. ಭಾರತವು ಸ್ವತಂತ್ರವಾದ ಸಾರ್ವಭೌಮ ಗಣರಾಜ್ಯವಾಗಲಿದೆ ಮತ್ತು ಈ ಗಣರಾಜ್ಯದೊಳಗೆ ಬರುವ ಎಲ್ಲಾ ಪ್ರದೇಶಗಳೂ ಸ್ವಾಯತ್ತ ಘಟಕಗಳಾಗಿರಲಿವೆ ಎಂದು ಆ

ಗೊತ್ತುವಳಿಯಲ್ಲಿ ತಿಳಿಸಲಾಗಿತ್ತು. ಅದು ಭಾರತದ ಜನತೆಗೆ ***ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯದ ಭರವಸೆಯನ್ನು; ಸ್ಥಾನಮಾನ, ಅವಕಾಶಗಳು ಮತ್ತು ಕಾನೂನಿನ ಸಮಾನತೆಯನ್ನು; ಕಾನೂನು ಮತ್ತು ಸಾರ್ವಜನಿಕ ನೈತಿಕತೆಯ ಷರತ್ತಿಗೆ ಒಳಪಟ್ಟಂತೆ ವಿಚಾರ, ಅಭಿವ್ಯಕ್ತಿ, ನಂಬಿಕೆ, ಶ್ರದ್ಧೆ ಮತ್ತು ಪೂಜಿಸುವ ಸ್ವಾತಂತ್ರ್ಯದ ಭರವಸೆಯನ್ನು;*** ವೃತ್ತಿ ಆಯ್ಕೆಯ, ಸಂಘ ಕಟ್ಟಿಕೊಂಡು ಕೆಲಸ ಮಾಡುವ ಸ್ವಾತಂತ್ರ್ಯದ ಭರವಸೆಯನ್ನು ನೀಡಿತು.

ಈಗ ಸಂವಿಧಾನದ ಒಂದು ಭಾಗವಾಗಿರುವ ಪೀಠಿಕೆಯ ಪ್ರಾಥಮಿಕ ಪಠ್ಯವು ನೆಹರು ಅವರ ಧ್ಯೇಯೋದ್ದೇಶ ಗೊತ್ತುವಳಿಯಿಂದ ಪ್ರೇರಣೆ ಪಡೆದಿತ್ತು ಎನ್ನುವುದು ಗೊತ್ತುವಳಿಯನ್ನು ಒಮ್ಮೆ ಓದಿದರೆ ತಿಳಿಯುತ್ತದೆ.

ಗೊತ್ತುವಳಿಯಲ್ಲಿ ಹೀಗೆ ಹೇಳಲಾಗಿದೆ:

> *(1) "ಭಾರತವನ್ನು ಸ್ವತಂತ್ರ ಸಾರ್ವಭೌಮ ಗಣರಾಜ್ಯವನ್ನಾಗಿ ಘೋಷಣೆ ಮಾಡಲು ಮತ್ತು ಭಾರತದ ಭವಿಷ್ಯತ್ತಿನ ಆಡಳಿತಕ್ಕಾಗಿ ಒಂದು ಸಂವಿಧಾನವನ್ನು ರಚಿಸಲು ಈ ಸಂವಿಧಾನ ರಚನಾ ಸಭೆಯು ತನ್ನ ಅಚಲವಾದ ದೃಢ ನಿಶ್ಚಯವನ್ನು ಘೋಷಿಸುತ್ತದೆ;*
>
> *[...]*
>
> *(4) ಸಾರ್ವಭೌಮ ಸ್ವತಂತ್ರ ಭಾರತವನ್ನು, ಅದರ ಅಧಿಕಾರವನ್ನು ಹಾಗೂ ಸಾಂವಿಧಾನಿಕ ವಿಭಾಗಗಳು ಮತ್ತು ಸರ್ಕಾರದ ಅಂಗಗಳನ್ನು, ಜನರಿಂದ ಪಡೆಯಲಾಗಿದೆ ಮತ್ತು*
>
> *(5) ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು; ಸ್ಥಾನಮಾನದ ಸಮಾನತೆಯನ್ನು, ಅವಕಾಶಗಳಲ್ಲಿನ ಸಮಾನತೆಯನ್ನು ಮತ್ತು ಕಾನೂನಿನಲ್ಲಿ ಸಮಾನತೆಯನ್ನು; ಕಾನೂನು ಮತ್ತು ಸಾರ್ವಜನಿಕ ನೈತಿಕತೆಯ ಷರತ್ತಿಗೆ ಒಳಪಟ್ಟಂತೆ ವಿಚಾರ ಸ್ವಾತಂತ್ರ್ಯವನ್ನು, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು, ನಂಬಿಕೆ, ಶ್ರದ್ಧೆ ಮತ್ತು ಪೂಜಿಸುವ ಸ್ವಾತಂತ್ರ್ಯವನ್ನು, ವೃತ್ತಿ ಆಯ್ಕೆಯ ಮತ್ತು ಸಂಘ ಕಟ್ಟಿಕೊಂಡು ಕೆಲಸ ಮಾಡುವ ಸ್ವಾತಂತ್ರ್ಯವನ್ನು ಭಾರತದ ಎಲ್ಲ ಜನರಿಗೂ ಖಾತ್ರಿಪಡಿಸಲಾಗುವುದು ಮತ್ತು ಭದ್ರಪಡಿಸಲಾಗುವುದು; ಹಾಗೂ*
>
> *(6) ಅಲ್ಪಸಂಖ್ಯಾತರಿಗೆ, ಹಿಂದುಳಿದ ಮತ್ತು ಬುಡಕಟ್ಟು ಪ್ರದೇಶಗಳಿಗೆ ಹಾಗೂ ದಮನಿತ ಮತ್ತಿತರ ಹಿಂದುಳಿದ ವರ್ಗಗಳಿಗೆ ಸಾಕಷ್ಟು ಸುರಕ್ಷತಾ ಕ್ರಮಗಳನ್ನು ಕಲ್ಪಿಸಲಾಗುವುದು; ಮತ್ತು*

*(7) ನಾಗರಿಕ ರಾಷ್ಟ್ರಗಳ ನ್ಯಾಯ ಮತ್ತು ಕಾನೂನಿಗೆ ಅನ್ವಯವಾಗುವಂತೆ ಗಣರಾಜ್ಯದ ಪ್ರಾದೇಶಿಕ ಸಮಗ್ರತೆಯನ್ನೂ ಮತ್ತು ಭೂಪ್ರದೇಶ, ಸಮುದ್ರ ಮತ್ತು ವಾಯುಪ್ರದೇಶದ ಮೇಲೆ ಅದರ ಸಾರ್ವಭೌಮ ಹಕ್ಕುಗಳನ್ನು ಕಾಯ್ದುಕೊಳ್ಳಲಾಗುವುದು; ಹಾಗೂ*

*(8) ಈ ಪುರಾತನ ಭೂಮಿಯು ವಿಶ್ವದಲ್ಲೇ ತನಗೆ ಯೋಗ್ಯವಾದ ಮತ್ತು ಗೌರವಯುತವಾದ ಸ್ಥಾನವನ್ನು ಗಳಿಸಿ ವಿಶ್ವ ಶಾಂತಿ ಮತ್ತು ಮಾನವಕುಲದ ಕಲ್ಯಾಣವನ್ನು ಉತ್ತೇಜಿಸಲು ಇಚ್ಛಾಪೂರ್ವಕವಾಗಿ ತನ್ನ ಪೂರ್ಣ ಕೊಡುಗೆ ನೀಡುತ್ತದೆ."*

## 3.1.3. ರಾಜ್ಯಗಳು ಮತ್ತು ಅಲ್ಪಸಂಖ್ಯಾತರು: ಡಾ. ಬಿ. ಆರ್. ಅಂಬೇಡ್ಕರ್

ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಕಾರ್ಯಕಾರಿ ಸಮಿತಿಯು ಪರಿಶಿಷ್ಟ ಜಾತಿಗಳಿಗೆ ಒದಗಿಸಬೇಕಾದ ರಕ್ಷಣಾತ್ಮಕ ಕ್ರಮಗಳ ಬಗ್ಗೆ ಸಂವಿಧಾನ ರಚನಾ ಸಭೆಗೆ ನಿವೇದನಾ ಪತ್ರವೊಂದನ್ನು ಸಲ್ಲಿಸಬೇಕಿದ್ದು ಅದನ್ನು ಬರೆದುಕೊಡುವಂತೆ ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನು ಕೇಳಿಕೊಂಡಾಗ ಅವರು *ಸ್ಟೇಟ್ಸ್ ಅಂಡ್ ಮೈನಾರಿಟೀಸ್ (ರಾಜ್ಯಗಳು ಮತ್ತು ಅಲ್ಪಸಂಖ್ಯಾತರು)*[40] ಕೃತಿಯನ್ನು ರಚಿಸಿದರು. ಈ ಕೃತಿಯನ್ನು ಸಂವಿಧಾನದ ಅನುಚ್ಛೇದಗಳ ರೂಪದಲ್ಲಿ ಬರೆಯಲಾಗಿದ್ದು, ಇದು ಬಹುತೇಕ *'ಭಾರತ ಸಂಯುಕ್ತ ಸಂಸ್ಥಾನಕ್ಕಾಗಿ'* ರೂಪಿಸಲಾದ ಕಿರು-ಸಂವಿಧಾನದಂತಿತ್ತು.

ಈ ನಿವೇದನಾ ಪತ್ರವು ಕೇವಲ ಅಲ್ಪಸಂಖ್ಯಾತರಿಗೆ ಕಲ್ಪಿಸಬೇಕಾದ ರಕ್ಷಣಾತ್ಮಕ ಕ್ರಮಗಳಿಗೆ ಸೀಮಿತವಾದ ದಸ್ತಾವೇಜಾಗಿರಲಿಲ್ಲ. ಅದು ಪ್ರಜೆಗಳ ಮೂಲಭೂತ ಹಕ್ಕುಗಳು ಹಾಗೂ ಈ ಹಕ್ಕುಗಳ ಮೇಲೆ ನಡೆಯುವ ದಾಳಿಗಳಿಗೆ (ಅಸಮಾನವಾಗಿ ನಡೆಸಿಕೊಳ್ಳುವುದು, ತಾರತಮ್ಯ ಮಾಡುವುದು, ಆರ್ಥಿಕ ಶೋಷಣೆ, ಇತ್ಯಾದಿ ಸೇರಿದಂತೆ) ಪರಿಹಾರಗಳನ್ನು ಸೂಚಿಸುವ ಬಗ್ಗೆ ವಿಸ್ತೃತವಾಗಿ ಗಮನ ಹರಿಸಿತ್ತು. ಹಾಗೂ, ಇತರ ಹಕ್ಕುಗಳೊಂದಿಗೆ ಬದುಕುವ ಹಕ್ಕು, ಮಾತಿನ ಸ್ವಾತಂತ್ರ್ಯದ ಹಕ್ಕು ಮತ್ತು ಸಮಾನತೆಯ ಹಕ್ಕುಗಳನ್ನು ಕಲ್ಪಿಸಿತು. ಭಾರತ ಸಂಯುಕ್ತ ಸಂಸ್ಥಾನವು ಈ ಕೆಳಗಿನ ನೋಟಗಳನ್ನು ಹೊಂದಿರಬೇಕು ಎಂದು ಅದರಲ್ಲಿ ಹೇಳಲಾಗಿತ್ತು:

*i) ಭಾರತ ಸಂಯುಕ್ತ ಸಂಸ್ಥಾನದಾದ್ಯಂತ ನಮಗೂ ಮತ್ತು ನಮ್ಮ ಮುಂದಿನ ತಲೆಮಾರುಗಳಿಗೂ ಸ್ವಯಂ-ಆಡಳಿತ ಮತ್ತು ಒಳ್ಳೆಯ ಆಡಳಿತದ ಅನುಗ್ರಹವನ್ನು ಪಡೆಯಬೇಕು,*

*ii) ಪ್ರತಿಯೊಬ್ಬ ಪ್ರಜೆಯ ಬದುಕಿನ ಹಕ್ಕು, ಸ್ವಾತಂತ್ರ್ಯದ ಹಕ್ಕು, ಸಂತೋಷದ ಹಕ್ಕು ಹಾಗೂ ಮಾತಿನ ಸ್ವಾತಂತ್ರ್ಯ ಮತ್ತು ಧರ್ಮಾಚರಣೆಯ ಸ್ವಾತಂತ್ರ್ಯದ ಹಕ್ಕನ್ನು ಕಾಯ್ದುಕೊಳ್ಳಬೇಕು,*

*iii) ತುಳಿತಕ್ಕೊಳಗಾದ ವರ್ಗಗಳಿಗೆ ಉತ್ತಮ ಅವಕಾಶಗಳನ್ನು ಒದಗಿಸಿ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಅಸಮಾನತೆಯನ್ನು ತೊಡೆದುಹಾಕಬೇಕು,*

*iv) ಪ್ರತಿಯೊಬ್ಬ ಪ್ರಜೆಯೂ ಯಾವುದೇ ಕೊರತೆಯಿಂದ ಮತ್ತು ಭೀತಿಯಿಂದ ವಿಮುಕ್ತರಾಗಲು ಸಾಧ್ಯವಾಗಬೇಕು; ಹಾಗೂ*

*v) ಆಂತರಿಕ ಅವ್ಯವಸ್ಥೆಯ ಮತ್ತು ಬಾಹ್ಯ ಆಕ್ರಮಣದ ವಿರುದ್ಧ ಕ್ರಮ ಕೈಗೊಳ್ಳುವ ಸಲುವಾಗಿ ಭಾರತ ಸಂಯುಕ್ತ ಸಂಸ್ಥಾನಕ್ಕಾಗಿ ಈ ಸಂವಿಧಾನವನ್ನು ಅನುಷ್ಠಾನಗೊಳಿಸಬೇಕು.*

## 3.2 ಭಾರತದ ಜನತೆಯಾದ ನಾವು...

ಯಾರ ಹೆಸರಿನಲ್ಲಿ ಭಾರತದ ಸಂವಿಧಾನವನ್ನು ಆರಂಭಿಸಬೇಕು ಎಂಬ ಪ್ರಶ್ನೆ ಎದುರಾದಾಗ ಅದನ್ನು ಸರ್ವಾನುಮತದಿಂದ ನಿರ್ಧರಿಸಲಾಗಲಿಲ್ಲ. ಅದರ ಬಗ್ಗೆ ಸಂವಿಧಾನ ರಚನಾ ಸಭೆಯಲ್ಲಿ ತೀವ್ರ ವಾಗ್ವಾದಗಳು ನಡೆದವು. *'ಈ ಸಂವಿಧಾನದ ಬೇರುಗಳು, ಅಧಿಕಾರ, ಸಾರ್ವಭೌಮತ್ವ ಎಲ್ಲವೂ ಜನರಿಂದಲೇ ಪ್ರಾಪ್ತವಾಗಿರುತ್ತವೆ ಎನ್ನುವುದು ಪೀಠಿಕೆಯಲ್ಲಿಯೇ ಅಡಕಗೊಂಡಿದೆ'* ಎಂದು ಅಂಬೇಡ್ಕರ್ ಅವರು ಅದಾಗಲೇ ಘೋಷಿಸಿದ್ದರು. 'ದೇವರು' ಅಥವಾ 'ಗಾಂಧಿ' ಎಂಬ ಪದಗಳನ್ನು ಅಥವಾ ಇವೆರಡರ ಸಂಯೋಜನೆಯನ್ನು *'ಜನತೆಯಾದ ನಾವು'* ಎಂಬ ಪದಗಳ ಬದಲಿಗೆ ಅಥವಾ ಅವುಗಳ ಮೊದಲು ಹಾಕಲು ಸಂವಿಧಾನ ರಚನಾ ಸಭೆಯ ಅನೇಕ ಸದಸ್ಯರು ಪ್ರಸ್ತಾಪಿಸಿದ್ದಕ್ಕೆ ಪ್ರತ್ಯುತ್ತರವಾಗಿ ಹೀಗೆ ಹೇಳಲಾಗಿತ್ತು. ಸಂವಿಧಾನವು ಕೇವಲ ರಾಜಕೀಯ ಅಥವಾ ಸಾಮಾಜಿಕ ದಸ್ತಾವೇಜಲ್ಲ, ಅದೊಂದು ಆಧ್ಯಾತ್ಮಿಕ ದಸ್ತಾವೇಜು ಎಂಬ ವಾದವನ್ನು ಮುಂದಿಡಲಾಗಿತ್ತು. ಈ ಹಿನ್ನೆಲೆಯಲ್ಲಿ ಸಂವಿಧಾನವನ್ನು ದೇವರ ಮತ್ತು ರಾಷ್ಟ್ರಪಿತನ ಹೆಸರಿನಲ್ಲಿ ಬರೆಯುವುದೇ ಸರಿ ಎಂಬುದು ಹಲವು ಸದಸ್ಯರ ಅಭಿಪ್ರಾಯವಾಗಿತ್ತು.

ಆದರೆ, ಸಂವಿಧಾನ ರಚನಾ ಸಭೆಯ ಇತರ ಸದಸ್ಯರು ಈ ಆಲೋಚನೆಯನ್ನು ತೀವ್ರವಾಗಿ ವಿರೋಧಿಸಿದರು. ಏಕೆಂದರೆ ದೇವರನ್ನು ಉಲ್ಲೇಖಿಸಿದರೆ ಅದು ಸಂವಿಧಾನ ಸಭೆಯ ದೃಷ್ಟಿಕೋನವನ್ನು ಜನರ ಮೇಲೆ ಹೇರಿದಂತೆ ಆಗುತ್ತದೆ,

ಹಾಗೂ ಸಂವಿಧಾನದ ಪೀಠಿಕೆಯು ಭರವಸೆ ನೀಡುವ ಸ್ವಾತಂತ್ರ್ಯಗಳ– ವಿಚಾರ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ, ನಂಬಿಕೆ, ಶ್ರದ್ಧೆ ಮತ್ತು ಪೂಜೆಯ ಸ್ವಾತಂತ್ರ್ಯಗಳ– ಉಲ್ಲಂಘನೆಯಾಗುತ್ತದೆ. ಹಾಗೆಯೇ, ಗಾಂಧಿಯ ಹೆಸರನ್ನು ಸೇರಿಸುವುದಕ್ಕೆ ಸಂಬಂಧಿಸಿದಂತೆ ಬಂದ ಸೂಚನೆಯ ಕುರಿತೂ ಚರ್ಚೆ ನಡೆದು, ನಮ್ಮ ಸಂವಿಧಾನವು ಗಾಂಧಿವಾದಿ ಸಂವಿಧಾನವಲ್ಲದ ಕಾರಣ ಇಲ್ಲಿ ಗಾಂಧಿಯ ಹೆಸರನ್ನು ಸೇರಿಸುವುದು ಸರಿಯಾಗುವುದಿಲ್ಲವೆಂದು ತೀರ್ಮಾನಿಸಿ ಅದನ್ನು ಹಿಂಪಡೆಯಲಾಯಿತು.

ಅಂತಿಮವಾಗಿ ಸಂವಿಧಾನ ರಚನಾ ಸಭೆ ಅಂಗೀಕರಿಸಿದ ಪೀಠಿಕೆಯನ್ನು ಗಮನಿಸಿದರೆ, ಈ ಸಂವಿಧಾನವು *'ಜನತೆಯಾದ ನಾವು' 'ಅಂಗೀಕರಿಸಿ, ಜಾರಿಗೊಳಿಸಿ ನಮಗೆ ನಾವೇ ಕೊಟ್ಟುಕೊಳ್ಳುವ'* ಸತ್ಯಾಂಶದ ಮೇಲೆ ಸ್ಥಾಪನೆಗೊಂಡಿದೆ ಎಂಬುದು ಸುಸ್ಪಷ್ಟವಾಗಿ ತಿಳಿಯುತ್ತದೆ. ಭಾರತವೆಂಬ ದೇಶದ ಸಂಸ್ಥಾಪನಾ ಕ್ಷಣದ ಸಾರವಿರುವುದು ಈ ವಾಸ್ತವಾಂಶದಲ್ಲೇ. ಅದು ಗತಕಾಲದ ಹಳಹಳಿಕೆಗಳಿಗೆ ಜೋತುಬೀಳದೆ, ಈ ದೇಶದ ಜನರು ತಮಗೆ ತಾವೇ ಈ ಸಂವಿಧಾನವನ್ನು ಕೊಟ್ಟುಕೊಂಡಿದ್ದಾರೆ ಎಂಬ ವಿಚಾರದಲ್ಲಿ ಭದ್ರವಾಗಿ ನೆಲೆನಿಂತಿದೆ.

ಸಂವಿಧಾನ ರಚನಾ ಸಭೆಯು, ತಮಗೆ ತಾವೇ ಒಂದು 'ಸಾರ್ವಭೌಮ, ಪ್ರಜಾಪ್ರಭುತ್ವವಾದಿ, ಗಣರಾಜ್ಯ'ವನ್ನು ಕೊಟ್ಟುಕೊಳ್ಳಲು ಪ್ರತಿಜ್ಞೆ ಮಾಡಿದ 'ಪ್ರಜೆಗಳ' ಪ್ರಾತಿನಿಧಿಕ ಸಭೆ ಮಾತ್ರ ಆಗಿತ್ತು ಎನ್ನುವುದು ಪೀಠಿಕೆಯ ಪಠ್ಯ ಮತ್ತು ಧೋರಣೆಗಳಲ್ಲಿ ನಮಗೆ ಸ್ಪಷ್ಟವಾಗಿ ತಿಳಿಯುತ್ತದೆ. ಅಧಿಕಾರದ ಮೂಲ ಪ್ರಜೆಗಳಾಗಿರುತ್ತಾರೆಯೇ ವಿನಾ ರಾಜನಲ್ಲ ಎಂಬ ಗಣರಾಜ್ಯದ ಚಿಂತನೆಯನ್ನು ಸಂವಿಧಾನವು ತನ್ನ ಮೂಲದಲ್ಲೇ ತಿಳಿಸುತ್ತದೆ. ಆಡಳಿತ ನಡೆಸುವ ವಿಚಾರಗಳನ್ನು ಮತ್ತು ನಮ್ಮ ಬದುಕನ್ನು ಆವರಿಸಿಕೊಂಡಿರುವ ಆಡಳಿತಾತ್ಮಕ ಸಂಸ್ಥೆಗಳನ್ನು ದೈವಿಕ ವಿಧಿವಿಧಾನಗಳು ನಿರ್ದೇಶಿಸಿಲ್ಲ, ಅವುಗಳನ್ನು 'ಪ್ರಜೆಗಳಾದ ನಾವು'ಗಳೇ ರೂಪಿಸಿಕೊಂಡಿದ್ದೇವೆ.

## 3.3. ಸಾರ್ವಭೌಮ ಪ್ರಜಾಸತ್ತಾತ್ಮಕ ಗಣರಾಜ್ಯ

ಸಂವಿಧಾನ ರಚನಾ ಸಭೆಯಲ್ಲಿ ಧ್ಯೇಯೋದ್ದೇಶ ಗೊತ್ತುವಳಿಯನ್ನು ಮಂಡಿಸಿದ ಜವಹರಲಾಲ್ ನೆಹರು ಅವರು, ಈ ಸಭೆಯು *'ಸ್ವತಂತ್ರ, ಸಾರ್ವಭೌಮ, ಗಣರಾಜ್ಯ'*ವನ್ನು ನಿರ್ಮಿಸಲು ನೆರವಾಗಬೇಕು ಎಂದು ಪ್ರಸ್ತಾಪಿಸಿದರು. ಆದರೆ ಕರಡು ರಚನಾ ಸಮಿತಿಯು ಅದನ್ನು ಚರ್ಚೆಗೆಂದು ಕೈಗೆತ್ತಿಕೊಂಡಾಗ ಅದು ಮಹತ್ವದ ಬದಲಾವಣೆಗಳನ್ನು ಕಂಡಿತು. 'ಸಾರ್ವಭೌಮ' ಮತ್ತು 'ಸ್ವತಂತ್ರ'

ಎರಡೂ ಒಂದೇ ಅರ್ಥವನ್ನು ನೀಡುತ್ತವೆಂದು ಅಭಿಪ್ರಾಯಪಟ್ಟ ಸಮಿತಿಯು ಅದರ ಬದಲಿಗೆ 'ಸಾರ್ವಭೌಮ, ಪ್ರಜಾಸತ್ತಾತ್ಮಕ, ಗಣರಾಜ್ಯ' ಎಂದು ಅಂಗೀಕರಿಸಿತು. ಇಲ್ಲಿ ಸಾರ್ವಭೌಮತೆಯು ಜನರಿಂದ ತನ್ನ ಅಧಿಕಾರವನ್ನು ಪಡೆಯುತ್ತದೆ. ಇದು ಅರಸೊತ್ತಿಗೆಗೆ ಅಸಂಗತವಾದ ವಿಚಾರವಾಗಿದೆ. ಇದು ಸ್ವಯಂ ಆಡಳಿತ ನಡೆಸುವ ಭಾರತದ ಜನರ ಹಕ್ಕನ್ನು ಎತ್ತಿಹಿಡಿಯುತ್ತದೆ.

ನೆಹರು ಕಲ್ಪಿಸಿಕೊಂಡ ಭಾರತವು ರಾಜಮನೆತನದ ಆಳ್ವಿಕೆಯಿಂದ ದೂರಸರಿದ ಗಣರಾಜ್ಯವಾಗಿತ್ತು. 'ಪ್ರಜಾಸತ್ತಾತ್ಮಕ' ಎಂಬ ಪದ ಇಲ್ಲದಿದ್ದಾಗ ಅವರು ಹೇಳಿದ್ದು ಹೀಗೆ: *"... ನಾವು 'ಪ್ರಜಾಸತ್ತಾತ್ಮಕ' ಎಂಬ ಪದವನ್ನು ಏಕೆ ಬಳಸಿಲ್ಲವೆಂದರೆ 'ಗಣರಾಜ್ಯ' ಎಂಬ ಪದದಲ್ಲೇ ಸ್ವಾಭಾವಿಕವಾಗಿ ಆ ಪದವೂ ಇದೆ ಎಂದು ನಮಗನ್ನಿಸಿದ್ದರಿಂದ ಅನಗತ್ಯ ಪದಗಳನ್ನು ಬಳಸುವುದು ನಮಗೆ ಬೇಕಿರಲಿಲ್ಲ [..]"* [41] ಎಲ್ಲ ಗಣರಾಜ್ಯಗಳೂ ಅಗತ್ಯವಾಗಿ ಪ್ರಜಾಸತ್ತಾತ್ಮಕವಾಗಿರುವುದಿಲ್ಲ. ಹಾಗಾಗಿ ಗಣರಾಜ್ಯ ಎಂಬುದರ ಬಗ್ಗೆ ನೆಹರು ಅವರದು ತಪ್ಪು ಗ್ರಹಿಕೆಯಾಗಿತ್ತು. ಆದರೆ ಅವರಿಗೆ ಭಾರತದ ಪ್ರಜಾಸತ್ತಾತ್ಮಕ ಸಂಸ್ಕೃತಿಯ ಬಗ್ಗೆ ಅಚಲ ವಿಶ್ವಾಸವಿತ್ತು. 'ನಾವು ಪ್ರಜಾಸತ್ತಾತ್ಮಕ ಸಂಸ್ಥೆಗಳ ಪರವಾಗಿ ನಿಲ್ಲುತ್ತೇವೆ ಎಂಬುದಕ್ಕೆ ನಮ್ಮ ಇಡೀ ಗತಕಾಲವೇ ಸಾಕ್ಷಿಯಾಗಿರುವುದರಿಂದ ಪ್ರಜಾಪ್ರಭುತ್ವದ ಬಗ್ಗೆ ಒತ್ತಿ ಹೇಳುವುದು ಅನಗತ್ಯ' ಎಂದು ನೆಹರು ಹೇಳಿದರು.

ಭಾರತದ ಪ್ರಜಾಪ್ರಭುತ್ವದ ಗುಣಲಕ್ಷಣಗಳ ಬಗ್ಗೆ ನೆಹರು ಅವರ ದೃಷ್ಟಿಕೋನವು ಗಮನಾರ್ಹವಾದದ್ದು: *ಈ ಹಿಂದೆ ಪ್ರಜಾಪ್ರಭುತ್ವವನ್ನು ಮುಖ್ಯವಾಗಿ ರಾಜಕೀಯ ಪ್ರಜಾಪ್ರಭುತ್ವ ಎಂದು ಕರೆಯಲಾಗಿದ್ದು, ಪ್ರತಿಯೊಬ್ಬ ವ್ಯಕ್ತಿಗೂ ಒಂದು ಮತದ ಅರ್ಹತೆ ಇರುವುದೇ ಪ್ರಜಾಪ್ರಭುತ್ವದ ಗುರುತಾಗಿತ್ತು. ಆದರೆ ಒಬ್ಬ ನಿರ್ಗತಿಕ ವ್ಯಕ್ತಿಗೆ, ಹಸಿವೆಯಿಂದ ಬಳಲುತ್ತಿರುವವರಿಗೆ ಒಂದು ಮತವು ಹೆಚ್ಚಿನದೇನನ್ನೂ ದೊರಕಿಸಿಕೊಡುವುದಿಲ್ಲ. ರಾಜಕೀಯ ಪ್ರಜಾಪ್ರಭುತ್ವವನ್ನು ಕ್ರಮೇಣವಾಗಿ ಆರ್ಥಿಕ ಪ್ರಜಾಪ್ರಭುತ್ವ, ಸಮಾನತೆ, ಸಮಾನವಾದ ಹಂಚಿಕೆ ಹಾಗೂ ಒಟ್ಟಾರೆ ಅಸಮಾನತೆಗಳ ನಿರ್ಮೂಲನೆಯನ್ನು ಹಂತ ಹಂತವಾಗಿ ಸಾಧಿಸಲು ಬಳಸಿಕೊಳ್ಳಬಹುದೇ ಹೊರತಾಗಿ ರಾಜಕೀಯ ಪ್ರಜಾಪ್ರಭುತ್ವವೊಂದೇ ಸಾಕಾಗುವುದಿಲ್ಲ.*[42] ಹಾಗಾಗಿ, ಪೀಠಿಕೆಯಲ್ಲಿ ಹೇಳಿರುವಂತೆ, ಆರ್ಥಿಕ ಮತ್ತು ಸಾಮಾಜಿಕ ನ್ಯಾಯದ ತಳಹದಿಯ ಮೇಲೆ ಸಮಾಜವನ್ನು ನಿರ್ಮಾಣ ಮಾಡುವುದರಲ್ಲಿ ಪ್ರಜಾಪ್ರಭುತ್ವದ ಮೌಲ್ಯ ಅಡಗಿದೆಯೇ ಹೊರತು ಸಾರ್ವತ್ರಿಕ ವಯಸ್ಕ ಮತದಾನದ ಪರಿಕಲ್ಪನೆಯೊಂದೇ ಪ್ರಜಾಪಭುತ್ವ ಆಗುವುದಿಲ್ಲ ಎನ್ನುವುದನ್ನು ಗಮನಿಸಬೇಕು.

ಪ್ರಜಾಪ್ರಭುತ್ವದ ಸಾಂವಿಧಾನಿಕ ಕಲ್ಪನೆಗೆ ಅಂಬೇಡ್ಕರ್ ಒಂದು ಪ್ರಮುಖ ಆಯಾಮವನ್ನು ಸೇರಿಸುತ್ತಾರೆ. ಸಾಮಾನ್ಯವಾಗಿ ಪ್ರಜಾಪ್ರಭುತ್ವವನ್ನು ಬಹುಸಂಖ್ಯಾತರ ಅಭಿಪ್ರಾಯ ಎಂದು ಬಿಂಬಿಸಲಾಗುತ್ತದೆ. ಆದರೆ, ಬಹುಸಂಖ್ಯಾತರ ಅಭಿಪ್ರಾಯವನ್ನಷ್ಟೇ ಆಧರಿಸಿದ ಪ್ರಜಾಪ್ರಭುತ್ವದ ಲೋಪ–ದೋಷಗಳು ಭಾರತದ ಸಮಾಜದಲ್ಲಿ ಹಾಸುಹೊಕ್ಕಾಗಿದೆ. 'ಕೋಮುವಾದಿ ಬಹುಸಂಖ್ಯಾತ'ರೆಂದು ಅಂಬೇಡ್ಕರ್ ಅವರಿಂದ ಕರೆಯಲ್ಪಟ್ಟ ಇವರು ಇಂದು ಪ್ರಾಬಲ್ಯ ಹೊಂದಿದ್ದಾರೆ. ಜಾತಿ, ಧರ್ಮ, ಪಂಗಡಗಳನ್ನು ಆಧರಿಸಿ ಮತ ಚಲಾವಣೆ ಮಾಡುವ ಪ್ರಜಾಪ್ರಭುತ್ವದಲ್ಲಿ ಕೋಮುವಾದಿ ಬಹುಸಂಖ್ಯಾತರೇ ಅಧಿಕಾರದಲ್ಲಿ ಇರುತ್ತಾರೆ. ಇದಕ್ಕೆ ಪ್ರತಿಯಾಗಿ ರಾಜಕೀಯ ಕಾರ್ಯಕ್ರಮಗಳನ್ನು, ಸಿದ್ಧಾಂತವನ್ನು ಆಧರಿಸಿ ಜನರು ಮತ ಚಲಾವಣೆ ಮಾಡಿದರೆ ಆಗ ರಾಜಕೀಯ ಬಹುಸಂಖ್ಯಾತರ ಪ್ರಜಾಪ್ರಭುತ್ವ ನಿರ್ಮಾಣಗೊಳ್ಳುತ್ತದೆ. ಆಗ ಸಿದ್ಧಾಂತ ಮತ್ತು ಕಾರ್ಯಕ್ರಮಗಳು ಬದಲಾದಂತೆ ರಾಜಕೀಯ ಆಡಳಿತವೂ ಬದಲಾಗುತ್ತಾ ಹೋಗುತ್ತದೆ. ಇಲ್ಲದೇ ಹೋದಲ್ಲಿ ಕೋಮುವಾದಿ ಬಹುಸಂಖ್ಯಾತರು ಆಡಳಿತದ ಚುಕ್ಕಾಣಿಯನ್ನು ಶಾಶ್ವತವಾಗಿ ಹಿಡಿದುಕೊಳ್ಳುತ್ತಾರೆ. ಅಂತಹ ಸಮಾಜಗಳು ಬಹುಸಂಖ್ಯಾತರ ಪ್ರಜಾಪ್ರಭುತ್ವಗಳಾಗಿಬಿಡುತ್ತವೆ; ಆದರೆ ಭಾರತ ಒಂದು ಸಾಂವಿಧಾನಿಕ ಪ್ರಜಾಪ್ರಭುತ್ವ ಆಗಬೇಕು ಎನ್ನುವುದು ಅಂಬೇಡ್ಕರ್‌ರ ಕಲ್ಪನೆಯಾಗಿತ್ತು.

> **“ಮೂಲಭೂತ ಹಕ್ಕುಗಳ ಅಧ್ಯಾಯವು ಭಾರತದ ಸಾಂವಿಧಾನಿಕತೆಯ ಬಾನಿನಲ್ಲಿ ಧ್ರುವತಾರೆ ಇದ್ದಂತೆ. ಬಹುಸಂಖ್ಯಾತ ಆಳ್ವಿಕೆಗಳು ಒಂದು ನಿರ್ದಿಷ್ಟ ಸಾಮಾಜಿಕ ನೈತಿಕತೆಯನ್ನು ಹೇರಲು ಯತ್ನಿಸಿದರೆ, ಆ ಪ್ರಯತ್ನವನ್ನು ಸಾಂವಿಧಾನಿಕ ನೈತಿಕತೆಯು ಹೊಡೆದುರುಳಿಸುತ್ತದೆ.”**

ಹಾಗಾದರೆ ಭಾರತದಲ್ಲಿ ಸಾಂವಿಧಾನಿಕ ಪ್ರಜಾಪ್ರಭುತ್ವವನ್ನು ಹುಟ್ಟುಹಾಕುವುದಾದರೂ ಹೇಗೆ?

ಮೊದಲನೆಯದಾಗಿ ಭಾರತದ ಪ್ರಜಾಪ್ರಭುತ್ವವು ಮೂಲಭೂತ ಹಕ್ಕುಗಳ ಅಧ್ಯಾಯದ ಮೂಲಕ ಬಹುಸಂಖ್ಯಾತರ ಅಧಿಕಾರಕ್ಕೆ ಕೆಲವು ಮಿತಿಗಳನ್ನು ವಿಧಿಸುತ್ತದೆ. *'ತಿರಸ್ಕೃತರಾದ ಮತ್ತು ಜನಾನುರಾಗಿಗಳಲ್ಲದ ಅಲ್ಪಸಂಖ್ಯಾತರ'* ಮೂಲಭೂತ ಹಕ್ಕುಗಳನ್ನು ಬಹುಸಂಖ್ಯಾತರ ಪೂರ್ವಾಗ್ರಹಕ್ಕೆ ಬಲಿ ಕೊಡದಂತೆ ಕಾಯ್ದುಕೊಳ್ಳುವುದು ನ್ಯಾಯಾಂಗದ ಕರ್ತವ್ಯವಾಗಿದೆ. ಅಂತಹ ಅಲ್ಪಸಂಖ್ಯಾತರ

ಪೈಕಿ ಲೈಂಗಿಕ ಮತ್ತು ಲಿಂಗತ್ವ ಅಲ್ಪಸಂಖ್ಯಾತರ (LGBTQI) ಸಮುದಾಯವೂ ಒಂದು. ಈ ಅಲ್ಪಸಂಖ್ಯಾತ ಸಮುದಾಯವು ಭಾರತೀಯ ದಂಡ ಸಂಹಿತೆ 1860ರ ಕಲಂ 377ರ ಸಾಂವಿಧಾನಿಕತೆಯನ್ನು ಪ್ರಶ್ನಿಸಿ ನ್ಯಾಯಾಲಯದ ಮೆಟ್ಟಿಲೇರಿತ್ತು. ಬಹುಸಂಖ್ಯಾವಾದದ ಆಧಾರದ ಮೇಲೆ ಅಲ್ಪಸಂಖ್ಯಾತರ ಹಕ್ಕುಗಳನ್ನು ನಿರಾಕರಿಸಲು ಸಾಧ್ಯವಿಲ್ಲ ಎಂಬ ತರ್ಕವನ್ನು ಎತ್ತಿಹಿಡಿದ ಸರ್ವೋಚ್ಚ ನ್ಯಾಯಾಲಯವು, 'ಪ್ರೌಢರ ನಡುವಿನ ಸಮ್ಮತಿಯ ಲೈಂಗಿಕ ಕ್ರಿಯೆಗೆ ಕಲಂ 377 ಅನ್ವಯಿಸುವುದಿಲ್ಲ' ಎಂದು ಸ್ಪಷ್ಟಪಡಿಸಿತು.

> *ವ್ಯಕ್ತಿ ಸ್ವಾತಂತ್ರ್ಯ ಮತ್ತು ವ್ಯಕ್ತಿ ಘನತೆಯ ವಿಷಯವನ್ನು ಬಹುಸಂಖ್ಯಾಕ ಸರ್ಕಾರಗಳ ಹಿಡಿತದ ವ್ಯಾಪ್ತಿಯಿಂದಾಚೆ ಇರಿಸುವುದೇ ಭಾರತ ಸಂವಿಧಾನದಲ್ಲಿರುವ ಮೂಲಭೂತ ಹಕ್ಕುಗಳ ಅಧ್ಯಾಯದ ಉದ್ದೇಶವಾಗಿದೆ. ಆ ಮೂಲಕ, ಇತರ ಹಕ್ಕುಗಳ ಜೊತೆಗೆ 'ದ್ವೀಪದಂತೆ ಪ್ರತ್ಯೇಕವಾಗಿರುವ' ಅಲ್ಪಸಂಖ್ಯಾತರ ಹಕ್ಕುಗಳನ್ನೂ ಜಾರಿಗೊಳಿಸಲು ಸಾಂವಿಧಾನಿಕ ನೈತಿಕತೆಯನ್ನು ಅನ್ವಯ ಮಾಡಲು ಸಾಧ್ಯವಾಗಿದೆ. ಈ ನ್ಯಾಯಾಲಯವು ಪ್ರಜೆಗಳ ಮೂಲಭೂತ ಹಕ್ಕುಗಳ ಸಂರಕ್ಷಕನಾಗಿರುವುದರಿಂದ ಅಂತಹದ್ದೊಂದು ಅಲ್ಪಸಂಖ್ಯಾತ ಸಮುದಾಯವು ಈ ನ್ಯಾಯಾಲಯದ ಕದ ತಟ್ಟಿದೆ. ಈ ಮೂಲಭೂತ ಹಕ್ಕುಗಳು ಚುನಾವಣಾ ಫಲಿತಾಂಶಗಳನ್ನು ಆಧರಿಸಿರುವುದಿಲ್ಲ. ಸಾಮಾಜಿಕ ನೈತಿಕತೆಗೆ ಸಂಬಂಧಪಟ್ಟ ವಿಚಾರಗಳಲ್ಲಿ ಯಾವುದು ಸಾಂಪ್ರದಾಯಿಕ ಎಂದು ನಿರ್ಧರಿಸುವುದನ್ನು ಬಹುಸಂಖ್ಯಾಕ ಸರ್ಕಾರಗಳ ವ್ಯಾಪ್ತಿಗೆ ಬಿಟ್ಟಿರುವುದಿಲ್ಲ. ಭಾರತದಲ್ಲಿ ಸಂವಿಧಾನ ಎಂಬ ಬಾನಿನಲ್ಲಿ ಮೂಲಭೂತ ಹಕ್ಕುಗಳ ಅಧ್ಯಾಯವು ಧ್ರುವತಾರೆ ಇದ್ದಂತೆ. ಬಹುಸಂಖ್ಯಾತ ಆಳ್ವಿಕೆಗಳು ಒಂದು ನಿರ್ದಿಷ್ಟ ಸಾಮಾಜಿಕ ನೈತಿಕತೆಯನ್ನು ಹೇರಲು ಯತ್ನಿಸಿದರೆ ಆ ಪ್ರಯತ್ನವನ್ನು ಸಾಂವಿಧಾನಿಕ ನೈತಿಕತೆಯು ಹೊಡೆದುರುಳಿಸುತ್ತದೆ.*

ಎರಡನೆಯದಾಗಿ, ಪ್ರಜಾಪ್ರಭುತ್ವವು ನಿಯತಕಾಲಿಕ ಚುನಾವಣೆಗಳನ್ನು ಮೀರಿ ಒಂದು ಜೀವನಶೈಲಿಯಾಗಬೇಕು. ಅಂಬೇಡ್ಕರ್ ಹೇಳುವಂತೆ,

> *'ಪ್ರಜಾಪ್ರಭುತ್ವವು ಕೇವಲ ಒಂದು ಮಾದರಿಯ ಸರ್ಕಾರವಷ್ಟೇ ಅಲ್ಲ. ಮೂಲತಃ ಅದೊಂದು ಸಹಜೀವನದ ಕ್ರಮ, ಸಂಯೋಜಿತ ಸಂವಹನದ ಅನುಭವ. ಅದು ಅಗತ್ಯವಾಗಿ ಸಹಜೀವಿಗಳ ಬಗೆಗಿನ ಗೌರವದ ಮತ್ತು ಆದರದ ಧೋರಣೆಯಾಗಿದೆ.' 43*

*'ಸಹಜೀವನ'* ಮತ್ತು *'ಸಂಯೋಜಿತ ಸಂವಹನದ ಅನುಭವ'* ಎಂದರೆ ಅಂಬೇಡ್ಕರ್ ಏನೆಂದು ಅರ್ಥೈಸಿರಬಹುದು? ಅಂಬೇಡ್ಕರರ ಗ್ರಹಿಕೆಯಲ್ಲಿ ಪ್ರಜಾಪ್ರಭುತ್ವ ಎಂದರೆ ಒಟ್ಟಾಗಿ ಬದುಕುವುದರಿಂದ ಹುಟ್ಟುವ ಸಮಾನ ಅನುಭವಗಳನ್ನು ಪೋಷಿಸುವುದಾಗಿದೆ. ಜಾತಿಮತಗಳಿಂದ ಛಿದ್ರವಾಗಿರುವ ಸಮಾಜದಲ್ಲಿ ವಾಸ್ತವವಾಗಿ ಜನರು ಪ್ರತ್ಯೇಕ ಕೇರಿಗಳಲ್ಲಿ (ಘೆಟ್ಟೋಗಳಲ್ಲಿ) ಬದುಕುತ್ತಿದ್ದು, *'ಸಹಜೀವನ'* ಎನ್ನುವುದು ಇಲ್ಲವಾಗಿದೆ. ಜನರು ಜಾತಿಮತಗಳ ಗಡಿಗಳಾಚೆ ಒಟ್ಟಾಗಿ ಬದುಕಿ, ಒಟ್ಟಿಗೆ ಕೆಲಸ ಮಾಡಿದಾಗ ಮಾತ್ರ ಸಂಯೋಜಿತ ಅನುಭವಗಳು ದಕ್ಕಲು ಸಾಧ್ಯವಿದೆ. ಅಂತಿಮವಾಗಿ ಕೇವಲ ರಾಜಕೀಯ ಪ್ರಜಾಪ್ರಭುತ್ವಕ್ಕಿಂತ ಆಳವಾದ ಬೇರುಗಳುಳ್ಳ ಪ್ರಜಾಪ್ರಭುತ್ವವು *'ಸಂಯೋಜಿತ ಸಹಜೀವನ'*ವನ್ನು ಅವಲಂಬಿಸುತ್ತದೆ. ಹಾಗಾದಾಗ ಅದು ಪ್ರಭುತ್ವದ ಒಂದು ಯೋಜನೆಯಂತಾಗದೆ ಪ್ರಜೆಗಳು ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕಾದಂತಹ ವ್ಯವಸ್ಥೆಯಾಗುತ್ತದೆ.

ನೆಹರು ಮತ್ತು ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ಒಟ್ಟಿಗೆ ಪರಿಗಣಿಸಿ ಹೇಳುವುದಾದರೆ, ಪ್ರಜಾಪ್ರಭುತ್ವ ಎನ್ನುವುದು ನಿರ್ದಿಷ್ಟ ಸಮಯಕ್ಕೆ ನಡೆಯುವ ಚುನಾವಣೆಗಳಿಗಿಂತ ಮಹತ್ತರವಾದದ್ದು. ಅದನ್ನು ಸರಳವಾಗಿ ಬಹುಸಂಖ್ಯಾತರ ಅಭಿಪ್ರಾಯ ಎಂದು ಸಮೀಕರಿಸಲು ಸಾಧ್ಯವಿಲ್ಲ; ಪ್ರಜಾಪ್ರಭುತ್ವವನ್ನು ಪೋಷಿಸಿ ಬೆಳೆಸುವ ಯೋಜನೆಯನ್ನು ಸಂವಿಧಾನ ರಚನಾಕಾರರು ನಮ್ಮ ಮೇಲೆ ಹೊರಿಸಿರುವ ಕರ್ತವ್ಯವೆಂದು ನಾವು ಪರಿಗಣಿಸಬೇಕು. ಅಂಬೇಡ್ಕರ್ ಹೇಳಿರುವಂತೆ:

> *ಸಾಂವಿಧಾನಿಕ ನೈತಿಕತೆಯು ಹಾಗೆ ತನ್ನಿಂದತಾನೆ ವಿಸ್ತರಣೆಗೊಳ್ಳುತ್ತದೆ ಎಂದು ಭಾವಿಸಲು ಸಾಧ್ಯವೇ? ಸಾಂವಿಧಾನಿಕ ನೈತಿಕತೆ ಎನ್ನುವುದು ಸಹಜ ಭಾವನೆಯಲ್ಲ. ಅದನ್ನು ಪೋಷಿಸಿ ಬೆಳೆಸಬೇಕು. ನಮ್ಮ ಜನರು ಅದನ್ನಿನ್ನೂ ಕಲಿಯಬೇಕಿದೆ ಎಂಬುದನ್ನು ನಾವು ಅರಿಯಬೇಕು. ಭಾರತದಲ್ಲಿ ಪ್ರಜಾಪ್ರಭುತ್ವ ಎಂದರೆ ಅಪ್ರಜಾಸತ್ತಾತ್ಮಕವಾದ ಮಣ್ಣಿನ ಮೇಲೆ ಮಾಡಲಾಗಿರುವ ಸಿಂಗಾರವಷ್ಟೇ.* [44]

## 3.4. ಮತಧರ್ಮ ನಿರಪೇಕ್ಷತೆ

ಮತಧರ್ಮ ನಿರಪೇಕ್ಷತೆಯು ಸಂವಿಧಾನ ಪೀಠಿಕೆಯ ಮೂಲ ಪಠ್ಯದ ಭಾಗವಾಗಿರಲಿಲ್ಲ, ಆದರೆ ನಂತರ 1976ರಲ್ಲಿ ಇಂದಿರಾ ಗಾಂಧಿಯವರ ಆಡಳಿತ ಕಾಲದಲ್ಲಿ ಜಾರಿಗೆ ತರಲಾದ 42ನೇ ತಿದ್ದುಪಡಿಯ[45] ಮೂಲಕ ಅದನ್ನು ಸೇರಿಸಲಾಯಿತು.

ಮೂಲದ ಸಂವಿಧಾನ ಪೀಠಿಕೆಯಲ್ಲಿ *ಮತಧರ್ಮನಿರಪೇಕ್ಷತೆ ಮತ್ತು ಸಮಾಜವಾದಿ* ಎಂಬ ಪದಗಳನ್ನು ಸೇರಿಸಲು ಬ್ರಜೇಶ್ವರ ಪ್ರಸಾದ್[46] 1949ರಲ್ಲಿ ಮಂಡಿಸಿದ ಸೂಚನೆಯನ್ನು ಸಾರಾಸಗಟಾಗಿ ತಿರಸ್ಕರಿಸಲಾಗಿತ್ತು. ಸಂವಿಧಾನದ ಕರಡು ಪ್ರತಿಯ ಅನುಚ್ಛೇದ 1ರಲ್ಲಿ *'ಮತಧರ್ಮ ನಿರಪೇಕ್ಷ, ಒಕ್ಕೂಟ, ಸಮಾಜವಾದಿ'* [47] ಎಂಬ ಪದಗಳನ್ನು ಸೇರ್ಪಡೆಗೊಳಿಸಲು ಮತ್ತೊಂದು ತಿದ್ದುಪಡಿಯನ್ನು ಪ್ರೊ. ಕೆ.ಟಿ. ಶಾ ಮಂಡಿಸಿದ್ದರು. ಈ ಕುರಿತು ಮಾತನಾಡಿದ ಅವರು, ದೇಶ ವಿಭಜನೆ ಸಂದರ್ಭದ ಘಟನೆಗಳ ಹಿನ್ನೆಲೆಯಲ್ಲಿ *"ಕಳೆದ ವರ್ಷ ಮತ್ತು ಅದರ ಹಿಂದಿನ ವರ್ಷಗಳಲ್ಲಿ ನಮಗಾದ ಸಂಕಟದ ಅನುಭವಗಳು ಹಾಗೂ ಮತಧರ್ಮದ ಹೆಸರಿನಲ್ಲಿ ಕೋಮುವಾದ ಅಥವಾ ಅಂಧಾಭಿಮಾನವು ಯಾವ ಅತಿರೇಕಗಳನ್ನು ತಲುಪಬಹುದು"*[48] ಎನ್ನುವುದರ ಕಡೆಗೆ ಗಮನ ಸೆಳೆದರು. ಅವರು, ಅಂಧಾಭಿಮಾನದಿಂದ ಭವಿಷ್ಯತ್ತಿನಲ್ಲಿ ಸಂಭವಿಸಬಹುದಾದ ಹಿಂಸಾಚಾರವನ್ನು ತಡೆಯುವ ಒಂದು ರಕ್ಷಣಾತ್ಮಕ ಕ್ರಮವಾಗಿ ಈ ಪರಿಕಲ್ಪನೆಗಳ ಸೇರ್ಪಡೆಯನ್ನು ನೋಡಿದ್ದಷ್ಟೇ ಅಲ್ಲದೆ, ಸಂವಿಧಾನವು ತನ್ನ ಜನರಿಗೆ *"[...] ಮನುಷ್ಯ ಮನುಷ್ಯರ ನಡುವಿನ ಸಂಬಂಧ, ಪ್ರಜೆ ಮತ್ತು ಪ್ರಭುತ್ವದ ಸಂಬಂಧ, ರಾಜ್ಯಗಳ ನಡುವಣ ಸಂಬಂಧಗಳು ಅಸಮಾನತೆ ಅಥವಾ ಅನ್ಯಾಯ ಉಂಟುಮಾಡುವ ಯಾವುದೇ ವಿಷಯಗಳಿಂದಲೂ ಪ್ರಭಾವಗೊಳ್ಳದಂತೆ [...]"* [49] ನೇರವಾದ ಮತ್ತು ಸ್ಪಷ್ಟವಾದ ಭರವಸೆ ನೀಡುವಂತೆ ಈ ಪರಿಕಲ್ಪನೆಗಳ ಸೇರ್ಪಡೆಯನ್ನು ಕಲ್ಪಿಸಿಕೊಂಡಿದ್ದರು. ಆದರೆ, ಈ ಸೂಚನೆಯೂ ತಿರಸ್ಕೃತವಾಯಿತು.

ಆದರೆ ಇದು ಮತಧರ್ಮ ನಿರಪೇಕ್ಷತೆಯ ನಿರಾಕರಣೆಯಾಗಿರಲಿಲ್ಲ. ಸಂವಿಧಾನ ರಚನಾ ಸಭೆಯ ಚರ್ಚೆಗಳನ್ನು ಆಳವಾಗಿ ಅಧ್ಯಯನ ಮಾಡಿದಲ್ಲಿ, ಭಾರತದ ಸಾಂವಿಧಾನಿಕತೆಯು ಮತಧರ್ಮ ನಿರಪೇಕ್ಷತೆಯ ಪರಿಕಲ್ಪನೆಯನ್ನು ಹೇಗೆ ತನ್ನಲ್ಲಿ ಅಂತರ್ಗತವಾಗಿಸಿಕೊಂಡಿದೆ ಎಂಬುದರ ಕುರಿತು ಸದಸ್ಯರು ಆಡಿರುವ ಮಾತುಗಳಲ್ಲಿ ಸ್ಪಷ್ಟವಾಗುತ್ತದೆ. ಭಾರತದ ಸಂದರ್ಭದಲ್ಲಿ ಮತಧರ್ಮ ನಿರಪೇಕ್ಷತೆಯು ಹೇಗಿರಬೇಕು ಎನ್ನುವ ಅಂಶದ ಬಗ್ಗೆ ಮಾತ್ರ ಸಭೆಯಲ್ಲಿ ವಾಗ್ವಾದ ನಡೆದಿದ್ದು, ಇದು ಭಿನ್ನ ಅಭಿಪ್ರಾಯಗಳಿಗೆ ಎಡೆಮಾಡಿಕೊಟ್ಟಿತು ಮತ್ತು ಎರಡು ವಿಭಿನ್ನ ಹಾಗೂ ವಿರೋಧಾಭಾಸದ ಪರಿಕಲ್ಪನೆಗಳು ಹುಟ್ಟಿಕೊಂಡವು.

ಮೊದಲನೆಯದ್ದು, ರಾಜ್ಯ ಮತ್ತು ಮತಧರ್ಮವನ್ನು ನಿಶ್ಚಿತವಾಗಿ ಪ್ರತ್ಯೇಕಗೊಳಿಸಿರುವ ಯುರೋಪ್ ಮಾದರಿಯನ್ನು ಆಧರಿಸಿದ ಗ್ರಹಿಕೆ. ಇದರ ಪ್ರಕಾರ ವ್ಯಕ್ತಿಗಳು ತಮ್ಮತಮ್ಮ ಮತಧರ್ಮಗಳನ್ನು ತಮ್ಮ ಖಾಸಗಿ ವ್ಯಾಪ್ತಿಯಲ್ಲಿ ಆಚರಿಸಲು ಸ್ವತಂತ್ರರು ಆದರೆ ಸಾರ್ವಜನಿಕ ಜೀವನದಲ್ಲಿ ಮತಧರ್ಮ ಆಚರಣೆಗೆ ಅವಕಾಶ ಇರುವುದಿಲ್ಲ. ಈ ಕುರಿತು ಸಂವಿಧಾನವು ಸ್ಪಷ್ಟವಾದ

ಸೂಚನೆ ನೀಡಬೇಕು ಎಂದು ನಿರ್ಣಯ ಮಂಡಿಸಿದ ತಾಜಾಮುಲ್ ಹುಸೇನ್ ಅವರು, ವ್ಯಕ್ತಿಗಳು ಖಾಸಗಿಯಾಗಿ ಮಾತ್ರ ತಮ್ಮ ಮತಧರ್ಮಗಳನ್ನು ಆಚರಿಸಲು ಮತ್ತು ಅವುಗಳ ಕುರಿತು ಶ್ರದ್ಧೆ ಹೊಂದಲು ಹಕ್ಕನ್ನು ಪಡೆದಿರುತ್ತಾರೆ ಎಂದು ಸೇರಿಸಬೇಕೆಂದು ಆಗ್ರಹಿಸಿದರು. ಆದರೆ ಅವರ ಸೂಚನೆ ವಿಫಲವಾಯಿತು.[50]

ಮತಧರ್ಮ ನಿರಪೇಕ್ಷತಾವಾದವನ್ನು ಸಾಂವಿಧಾನಿಕ ಆದರ್ಶವೆಂದು ಪರಿಗಣಿಸಿದ ಎರಡನೆಯ ಪರಿಕಲ್ಪನೆಯು, ಮತಧರ್ಮವನ್ನು ಸಾರ್ವಜನಿಕ ಸಂಸ್ಥೆಯಾಗಿ ಗುರುತಿಸಬೇಕು ಮತ್ತು ಪ್ರಭುತ್ವವು ಎಲ್ಲ ಮತಧರ್ಮಗಳಿಗೂ ಸಮಾನ ಗೌರವ ಕಲ್ಪಿಸಬೇಕು ಎನ್ನುವುದಾಗಿತ್ತು.

ಮತಧರ್ಮ ನಿರಪೇಕ್ಷತೆ ಕುರಿತು ಕೆ.ಎಂ. ಮುನ್ಷಿ ಅವರ ಅಭಿಪ್ರಾಯ ಹೀಗಿತ್ತು: ಧರ್ಮದ ಜೊತೆಗೆ ಆಳವಾಗಿ ತಳಕು ಹಾಕಿಕೊಂಡಿರುವ ಜನರು ನಾವು. ಅದರ ಜೊತೆಗೇ, ಧಾರ್ಮಿಕ ಸಹಿಷ್ಣುತೆಯ ಜೀವಂತ ಸಂಪ್ರದಾಯವನ್ನೂ ಹೊಂದಿದ್ದೇವೆ – *ಎಲ್ಲ ಧರ್ಮಗಳೂ ಒಂದೇ ದೇವರೆಡೆಗೆ ಒಯ್ಯುತ್ತವೆ ಎಂಬ ಹಿಂದು ಧರ್ಮದ ವಿಶಾಲ ದೃಷ್ಟಿಕೋನದ ಪರಿಣಾಮವಿದು... ಈ ಪರಿಸ್ಥಿತಿಯಲ್ಲಿ ನಮ್ಮ ಪ್ರಭುತ್ವವು ಯಾವುದೇ ಒಂದು ಮತಧರ್ಮವನ್ನು ಪ್ರತಿನಿಧಿಸುವುದಾಗಲಿ ಇಲ್ಲವೇ ಅಮೆರಿಕದಲ್ಲಿರುವಂತೆ ರಾಜ್ಯ ಮತ್ತು ಚರ್ಚ್‌ಅನ್ನು ಪ್ರತ್ಯೇಕಗೊಳಿಸಲು ಗಟ್ಟಿಯಾದ ರೇಖೆಯನ್ನು ಎಳೆಯುವುದಾಗಲೀ ಸಾಧ್ಯವಾಗುವುದಿಲ್ಲ.*[51]

ಹೀಗಾಗಿ ಸಂವಿಧಾನದ ಪೀಠಿಕೆಗೆ ಮತಧರ್ಮ ನಿರಪೇಕ್ಷತೆಯನ್ನು ಸೇರಿಸಲು ಸಂವಿಧಾನ ರಚನಾ ಸಭೆಯು ಆಗ ಒಪ್ಪಲಿಲ್ಲ. ಆದರೆ ಮತಧರ್ಮ ನಿರಪೇಕ್ಷತೆಯ ತಳಹದಿಯ ಬಗ್ಗೆ ಸದಸ್ಯರಲ್ಲಿ ಭಿನ್ನಾಭಿಪ್ರಾಯ ಇರಲಿಲ್ಲ ಎನ್ನುವುದು ಒಬ್ಬರಾದ ನಂತರ ಒಬ್ಬರು ಆಡಿದ ಮಾತುಗಳಲ್ಲಿ ಸ್ಪಷ್ಟವಾಗಿ ವ್ಯಕ್ತವಾಗಿತ್ತು. ಪ್ರತಿಯೊಬ್ಬ ವ್ಯಕ್ತಿಗೂ ತಮ್ಮ ಶ್ರದ್ಧಾನಂಬಿಕೆಗಳನ್ನು ಆಚರಿಸಲು ಸ್ವಾತಂತ್ರ್ಯವಿದೆ ಮತ್ತು ಪ್ರಭುತ್ವವು ಮತಧರ್ಮದ ಆಧಾರದಲ್ಲಿ ಯಾವುದೇ ವ್ಯಕ್ತಿಯನ್ನೂ ತಾರತಮ್ಯಕ್ಕೆ ಒಳಪಡಿಸುವಂತಿಲ್ಲ ಎನ್ನುವುದೇ ಆ ಸರ್ವಸಮ್ಮತವಾದ ತಳಹದಿಯಾಗಿತ್ತು.

ಆದ್ದರಿಂದಲೇ ನಾವು ಧಾರ್ಮಿಕ ಬಣ್ಣ ಹೊಂದಿರದ, ಎಲ್ಲಾ ಮತಧರ್ಮಗಳನ್ನೂ ಸಮಾನವಾಗಿ ಗೌರವಿಸುವ ಭಾರತ ರಾಜ್ಯವನ್ನು (ರಾಷ್ಟ್ರ) ನಿರ್ಮಾಣ ಮಾಡಿಕೊಂಡಿದ್ದೇವೆ. ಇದನ್ನು ವಿಸ್ತರಿಸಿ ಹೇಳುವುದಾದರೆ, ಭಾರತದಲ್ಲಿ ಯಾವುದೇ ಮತಧರ್ಮಕ್ಕೂ ರಾಜ್ಯಾಶ್ರಯ ದೊರೆಯುವುದಿಲ್ಲ.

ಮತಧರ್ಮ ನಿರಪೇಕ್ಷತೆಯು ಭಾರತ ಸಂವಿಧಾನದ ಮೂಲ ರಚನೆಯ ಭಾಗವಾಗಿದೆ ಎಂಬ ಅಂಶವನ್ನು *ಎಸ್.ಆರ್. ಬೊಮ್ಮಾಯಿ ವರ್ಸಸ್ ಭಾರತ ಸರ್ಕಾರ್*[52] ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಎತ್ತಿ ತೋರಿಸಿತು.

ಹಾಗೂ, ಭಾರತದ ಸಂವಿಧಾನದಲ್ಲಿ ಈಗಾಗಲೇ ಅಡಕವಾಗಿದ್ದ ಅಂಶವನ್ನು 42ನೇ ತಿದ್ದುಪಡಿಯು ಮತ್ತೆ ಪ್ರಕಟಗೊಳಿಸಿತಷ್ಟೇ ಎಂದು ಹೇಳಿ, ಈ ಬಗೆಗಿನ ಚರ್ಚೆಗೆ ಅಂತ್ಯ ಹಾಡಿತು.

> *'ಸಮಾಜವಾದ' ಮತ್ತು 'ಮತಧರ್ಮ ನಿರಪೇಕ್ಷತೆ' ಎಂಬ ಪದಗಳನ್ನು 1976ರಲ್ಲಿ 42ನೇ ತಿದ್ದುಪಡಿಯ ಮೂಲಕ ಸಂವಿಧಾನದ ಪೀಠಿಕೆಯಲ್ಲಿ ಸೇರಿಸಲಾಯಿತಾದರೂ, ಮತಧರ್ಮ ನಿರಪೇಕ್ಷತೆಯ ಪರಿಕಲ್ಪನೆಯು ನಮ್ಮ ಸಾಂವಿಧಾನಿಕ ತತ್ವದಲ್ಲಿ ಅಂತರ್ಗತವಾಗಿಯೇ ಇತ್ತು. 'ಮತಧರ್ಮ ನಿರಪೇಕ್ಷತೆ' ಎಂಬ ಪದವನ್ನು ಉದ್ದೇಶಪೂರ್ವಕವಾಗಿಯೇ ವ್ಯಾಖ್ಯಾನಿಸಿಲ್ಲ. ಏಕೆಂದರೆ ಅದು ಬಹಳ ವಿಸ್ತಾರಗೊಳ್ಳುವ ಅರ್ಥವನ್ನು ಹೊಂದಿದ ಪದವಾಗಿದ್ದು, ಅದನ್ನು ಖಚಿತ ವ್ಯಾಖ್ಯಾನದೊಳಗೆ ಬಂಧಿಸುವ ಬದಲು ಹಾಗೇ ವಿಸ್ತಾರವಾಗಿ ಬಿಟ್ಟರೆ ಒಳ್ಳೆಯದು ಎನಿಸಿತ್ತು. ಹೀಗೆ ಅಂತರ್ಗತವಾಗಿದ್ದ ಸಂಗತಿಯನ್ನು ಈ ತಿದ್ದುಪಡಿಯಿಂದ ಪ್ರಕಟಗೊಳಿಸಲಾಯಿತು. ವಿಚಾರ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ, ನಂಬಿಕೆ, ಶ್ರದ್ಧೆ ಮತ್ತು ಪೂಜಿಸುವ ಸ್ವಾತಂತ್ರ್ಯಗಳ ಬಗ್ಗೆ ಪೀಠಿಕೆಯೇ ಮಾತನಾಡಿತು. ಈ ಸ್ವಾತಂತ್ರ್ಯಗಳನ್ನು ಕಲ್ಪಿಸಬೇಕಾದರೆ ಪೀಠಿಕೆಯು ವ್ಯಕ್ತಿಗಳ ಸ್ಥಾನಮಾನ ಮತ್ತು ಅವಕಾಶಗಳಲ್ಲಿನ ಸಮಾನತೆಯನ್ನೂ ಖಚಿತಪಡಿಸಿತ್ತು. ಬಂಧುತ್ವವನ್ನು ಉತ್ತೇಜಿಸುವ ಬಗ್ಗೆಯೂ ಮಾತನಾಡುವ ಪೀಠಿಕೆಯು, ವ್ಯಕ್ತಿ ಘನತೆಯನ್ನು, ರಾಷ್ಟ್ರದ ಐಕ್ಯತೆ ಮತ್ತು ಸಮಗ್ರತೆಗಳನ್ನೂ ಖಾತ್ರಿಪಡಿಸಿತ್ತು. ಸಂವಿಧಾನವು ತನ್ನ ಪ್ರಜೆಗಳಿಗೆ ನಂಬಿಕೆ, ಶ್ರದ್ಧೆ ಮತ್ತು ಪೂಜಿಸುವ ಸ್ವಾತಂತ್ರ್ಯವನ್ನು ಕಲ್ಪಿಸುವಾಗಲೇ ಮತಧರ್ಮದ ಆಧಾರದ ಮೇಲೆ ನಡೆಸುವ ತಾರತಮ್ಯವನ್ನು ತಿರಸ್ಕರಿಸಿತು...*[53]

**"'ಸಮಾಜವಾದ' ಮತ್ತು 'ಮತಧರ್ಮ ನಿರಪೇಕ್ಷ' ಎಂಬ ಪದಗಳನ್ನು 1976ರಲ್ಲಿ 42ನೇ ತಿದ್ದುಪಡಿಯ ಮೂಲಕ ಸಂವಿಧಾನದ ಪೀಠಿಕೆಯಲ್ಲಿ ಸೇರಿಸಲಾಯಿತಾದರೂ, ಮತಧರ್ಮ ನಿರಪೇಕ್ಷತೆಯ ಪರಿಕಲ್ಪನೆಯು ನಮ್ಮ ಸಾಂವಿಧಾನಿಕ ತತ್ವದಲ್ಲಿ ಅಂತರ್ಗತವಾಗಿಯೇ ಇತ್ತು. ಯಾವುದು ಅಂತರ್ಗತವಾಗಿತ್ತೋ ಅದನ್ನು ಈ ತಿದ್ದುಪಡಿಯಿಂದ ಪ್ರಕಟಗೊಳಿಸಲಾಯಿತು."**

ಆನಂತರ ನ್ಯಾಯಾಲಯವು ಮತಧರ್ಮದ ಆಚರಣೆಗೆ ಸಂಬಂಧಿಸಿದಂತೆ ಇರುವ ಮೂಲಭೂತ ಹಕ್ಕುಗಳನ್ನು ಪಟ್ಟಿಮಾಡುತ್ತಾ ಹೋಯಿತು. ಕೊನೆಗೆ ಹೀಗೆ ದೃಢ ತೀರ್ಮಾನಕ್ಕೆ ಬಂದಿತು: *'ಅನುಚ್ಛೇದ 15, 16 ಮತ್ತು 25ರಿಂದ 30ರವರೆಗಿನ* ಅನುಚ್ಛೇದಗಳಲ್ಲಿ ಪ್ರತಿಷ್ಠಾಪಿಸಲಾದ ಈ ಮೂಲಭೂತ ಹಕ್ಕುಗಳು ಸಂವಿಧಾನದ ಮೂಲ ಸಂರಚನೆಯ ಭಾಗವಾಗಿರುತ್ತವೆ ಎಂಬುದರಲ್ಲಿ ಯಾವುದೇ ರೀತಿಯ ಅನುಮಾನವೂ ಇಲ್ಲ.'

## 3.5 ಸಮಾಜವಾದಿ

'ಸಮಾಜವಾದಿ' ಎಂಬ ಪದವು ಸಂವಿಧಾನ ರಚನಾ ಸಭೆಯು ಅಂಗೀಕರಿಸಿದ ಪೀಠಿಕೆಯ ಮೂಲ ಪಠ್ಯದ ಭಾಗವಾಗಿರಲಿಲ್ಲ. ಇದೂ ಕೂಡ 1976ರಲ್ಲಿ 42ನೇ ತಿದ್ದುಪಡಿಯ ಮೂಲಕ ಸೇರಿಸಲಾದ ಮೂರು ಪದಗಳ ಪೈಕಿ ಒಂದಾಗಿತ್ತು.

*'ಮತಧರ್ಮ ನಿರಪೇಕ್ಷ, ಒಕ್ಕೂಟ, ಸಮಾಜವಾದಿ'* ಎಂಬ ಪದಗಳನ್ನು ಮೂಲ ಸಂವಿಧಾನದ ಪಠ್ಯದಲ್ಲಿ ಸೇರಿಸುವ ತಿದ್ದುಪಡಿಯನ್ನು ಸಂವಿಧಾನ ಸಭೆಯಲ್ಲಿ ಮಂಡಿಸಿದವರು ಪ್ರೊ. ಕೆ.ಟಿ. ಶಾ.[54] ಡಾ. ಅಂಬೇಡ್ಕರ್ ಈ ತಿದ್ದುಪಡಿಗೆ ಇಡಿಯಾಗಿ ವಿರೋಧ ವ್ಯಕ್ತಪಡಿಸಿ ಅದನ್ನು ಅನವಶ್ಯಕ ಎಂದು ಕರೆದರು. 'ಸಮಾಜವಾದಿ' ಎಂಬ ಪದವನ್ನು ಪೀಠಿಕಾ ಪಠ್ಯದಲ್ಲಿ ಸೇರಿಸಲು ಅವರು ಇಚ್ಛಿಸಿರಲಿಲ್ಲವೆಂಬುದನ್ನು ಅವರ ಈ ಪ್ರತಿಕ್ರಿಯೆಯೇ ವಿವರಿಸಿತ್ತು:

> *ಪ್ರಭುತ್ವದ ನೀತಿ ಏನಾಗಿರಬೇಕು, ಸಮಾಜದ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆ ಹೇಗಿರಬೇಕು ಎಂಬುದು ಕಾಲ-ಸಂದರ್ಭಗಳಿಗೆ ತಕ್ಕಂತೆ ಜನರೇ ನಿರ್ಧರಿಸಬೇಕಾದ ವಿಷಯಗಳಾಗಿವೆ. ಅವುಗಳನ್ನು ಸಂವಿಧಾನದೊಳಗೇ ವಿಧಿಸಲು ಸಾಧ್ಯವಿಲ್ಲ, ಏಕೆಂದರೆ ಹಾಗೆ ಮಾಡಿದಲ್ಲಿ ಅದು ಒಟ್ಟಾರೆ ಪ್ರಜಾಪ್ರಭುತ್ವವನ್ನೇ ನಾಶ ಮಾಡಿದಂತಾಗುತ್ತದೆ. ರಾಜ್ಯದ ಸಾಮಾಜಿಕ ವ್ಯವಸ್ಥೆಯು ಒಂದು ನಿರ್ದಿಷ್ಟ ಸ್ವರೂಪವನ್ನು ಪಡೆದುಕೊಳ್ಳಬೇಕೆಂದು ನೀವೇನಾದರೂ ಸಂವಿಧಾನದಲ್ಲೇ ನಮೂದಿಸಿಬಿಟ್ಟರೆ, ಜನರು ಎಂತಹ ಸಾಮಾಜಿಕ ವ್ಯವಸ್ಥೆಯಲ್ಲಿ ಬದುಕಲು ಇಚ್ಛಿಸುತ್ತಾರೆ ಎಂದು ನಿರ್ಧರಿಸುವ ಅವರ ಸ್ವಾತಂತ್ರ್ಯವನ್ನು ಕಿತ್ತುಕೊಂಡಂತೆ ಆಗುತ್ತದೆ ಎಂದು ನನಗನ್ನಿಸುತ್ತದೆ. ಬಂಡವಾಳಶಾಹಿ ವ್ಯವಸ್ಥೆಯ ಸಮಾಜಕ್ಕಿಂತ ಸಮಾಜವಾದಿ ಸಾಮಾಜಿಕ ವ್ಯವಸ್ಥೆಯು ಉತ್ತಮವಾದುದೆಂದು ಹೇಳಲು ಇಂದು ಬಹುಸಂಖ್ಯೆಯ ಜನರಿಗೆ ಸಾಧ್ಯವಿದೆ. ಆದರೆ ಇಂದಿನ ಅಥವಾ ನಾಳೆಯ ಸಮಾಜವಾದಿ ವ್ಯವಸ್ಥೆಗಿಂತಲೂ*

*ಉತ್ತಮ ಎನಿಸಬಹುದಾದ ಇನ್ನಾವುದೋ ಸ್ವರೂಪದ ಸಾಮಾಜಿಕ ವ್ಯವಸ್ಥೆಯನ್ನು ಹುಟ್ಟುಹಾಕಲು ವಿಚಾರವಂತರಿಗೆ ಸಾಧ್ಯವಿರಲೂಬಹುದು.*

ಮೂಲಭೂತ ಹಕ್ಕುಗಳು ಮತ್ತು ರಾಜ್ಯ ನಿರ್ದೇಶಕ ತತ್ವಗಳ ಕೆಲವು ನಿರ್ದಿಷ್ಟ ಉಪಬಂಧಗಳಲ್ಲಿ ಸಮಾಜವಾದವು ಈಗಾಗಲೇ ಅಡಕವಾಗಿದೆ. ಹಾಗೂ ಈ ಮೂಲಕ, ಸಂವಿಧಾನ ರಚನಾ ಸಭೆಯು ಭಾರತದ ರಾಜಕಾರಣಕ್ಕೆ ನಿಯಮಗಳನ್ನು ನಿರ್ದೇಶಿಸದೆಯೇ ಸಮಾಜವಾದಿ ದಿಕ್ಕನ್ನು ಕೊಡುತ್ತದೆ ಎನ್ನುವುದು ಅವರ ಅಭಿಮತವಾಗಿತ್ತು.

ಸಮಾಜವಾದದ ಕೆಲವು ಅಂಶಗಳು ಸಂವಿಧಾನದ ಮೂಲ ಸಂರಚನೆಯ ಭಾಗವಾಗಿದೆ ಎಂದು *ಕೇಶವಾನಂದ ಭಾರತಿ ವರ್ಸಸ್ ಕೇರಳ ರಾಜ್ಯ*[55] ಪ್ರಕರಣದಲ್ಲಿಯೂ ಸರ್ವೋಚ್ಚ ನ್ಯಾಯಾಲಯವು ಗುರುತಿಸಿದೆ. ಆರ್ಥಿಕವಾಗಿ ಬಲಾಢ್ಯರಾಗಿರುವ ರಾಜಕೀಯ ಬಹುಸಂಖ್ಯಾತರಿಂದ ಶೋಷಣೆಗೆ ಗುರಿಯಾಗುವವರನ್ನು ರಕ್ಷಿಸುವ ಸಲುವಾಗಿ ಸಂವಿಧಾನದ ಮೂಲ ಸಂರಚನೆಯಲ್ಲಿ ಸಮಾನತಾವಾದ ಮತ್ತು ಕಲ್ಯಾಣ ರಾಜ್ಯವನ್ನು ಸೇರಿಸಿರುವುದನ್ನು ಕೇಶವಾನಂದ ಗುರುತಿಸುತ್ತಾರೆ.

ನ್ಯಾಯಮೂರ್ತಿಗಳಾದ ಹೆಗ್ಡೆ ಮತ್ತು ಮುಖರ್ಜಿ ಹೀಗೆ ಅಭಿಪ್ರಾಯಪಟ್ಟಿದ್ದರು:

*ಈ ಪ್ರಕರಣದ ಹಲವು ಆಯಾಮಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಸಂವಿಧಾನವು ಪ್ರಜೆಗಳಿಗೆ ಖಾತ್ರಿಗೊಳಿಸಿರುವ ವ್ಯಕ್ತಿ ಸ್ವಾತಂತ್ರ್ಯದ ಅವಶ್ಯ ಅಂಶಗಳಾದ ಭಾರತದ ಸಾರ್ವಭೌಮತೆ, ರಾಜಕಾರಣದ ಪ್ರಜಾಸತ್ತಾತ್ಮಕ ಸ್ವರೂಪ, ದೇಶದ ಐಕ್ಯತೆಯಂತಹ ಮೂಲ ಅಂಶಗಳನ್ನು ಅಥವಾ ಮೂಲಭೂತ ಚಹರೆಗಳನ್ನು ರದ್ದುಗೊಳಿಸಲು ಇಲ್ಲವೇ ಸತ್ವಹೀನಗೊಳಿಸಲು ಸಂಸತ್ತಿಗೆ ಅಧಿಕಾರವಿಲ್ಲ ಎಂಬುದು ನಮಗೆ ಸ್ಪಷ್ಟವಾಗುತ್ತದೆ. ಅಲ್ಲದೇ ಕಲ್ಯಾಣರಾಜ್ಯ ಮತ್ತು ಸಮಸಮಾಜವನ್ನು ನಿರ್ಮಾಣ ಮಾಡಲು ಇರುವ ಆದೇಶವನ್ನು ಹಿಂಪಡೆಯಲು ಸಹ ಸಂಸತ್ತಿಗೆ ಅಧಿಕಾರವಿಲ್ಲ.56*

## 3.6 ನ್ಯಾಯಪರತೆ

ಸಂವಿಧಾನದ ಸಂಸ್ಥಾಪಕರು ನ್ಯಾಯಪರತೆ, ಸಮಾನತೆ, ಸ್ವಾತಂತ್ರ್ಯ ಮತ್ತು ಬಂಧುತ್ವಗಳನ್ನು ಭಾರತ ಪ್ರಜಾಪ್ರಭುತ್ವದ ನಾಲ್ಕು ಆಧಾರ ಸ್ತಂಭಗಳೆಂದು

ಊಹಿಸಿದ್ದರು. *'ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯಪರತೆ'*ಯು ಚಾರಿತ್ರಿಕ ಅಸಮಾನತೆಗಳನ್ನು ಮತ್ತು ಅನ್ಯಾಯಗಳನ್ನು ಕಿತ್ತೆಸೆಯುವ ಸಾಂವಿಧಾನಿಕ ಬದ್ಧತೆಯ ಮೂರ್ತರೂಪವಾಗಿದೆ. ಈ ನ್ಯಾಯಪರತೆಯನ್ನು ಮೂಲಭೂತ ಹಕ್ಕುಗಳು ಮತ್ತು ರಾಜ್ಯ ನಿರ್ದೇಶಕ ತತ್ವಗಳ ಮೂಲಕ ಸಾಧಿಸಬೇಕಿದೆ.

ಪೀಠಿಕೆಯಲ್ಲಿನ 'ನ್ಯಾಯಪರತೆ'ಯ ಸ್ವರೂಪದ ಬಗ್ಗೆ ಸಂವಿಧಾನದ ಪ್ರಮುಖ ರಚನಾಕಾರರಲ್ಲೊಬ್ಬರಾದ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಹೀಗೆ ವ್ಯಾಖ್ಯಾನಿಸಿದ್ದರು:

> *'ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ'ದ ಬಗೆಗಿನ ಉಲ್ಲೇಖವು ತೀರಾ ಪೇಲವವಾಯಿತು ಎಂಬ ಟೀಕೆಯೊಂದಿದೆ. 'ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ' ಎಂಬ ಪದಗುಚ್ಛದ ಉದ್ದೇಶವು, ಈ ದೇಶವನ್ನು ಮತ್ತು ಸಂವಿಧಾನ ಸಭೆಯನ್ನು ಯಾವುದೇ ನಿಶ್ಚಿತ ಸ್ವರೂಪದ ರಾಜಕಾರಣಕ್ಕೆ ಒಪ್ಪಿಸದೆ, ಪ್ರಸಕ್ತ ದಿನಮಾನದಲ್ಲಿ ಪ್ರತಿಯೊಂದು ಪ್ರಜಾಸತ್ತಾತ್ಮಕ ರಾಜ್ಯದ ಮೂಲ ಉದ್ದೇಶವು ಇದೇ ಆಗಿರಬೇಕು ಎಂದು ಒತ್ತಿ ಹೇಳುವುದಾಗಿದೆ. ಈಗ ರಚಿಸಲಾಗಿರುವ ಸಂವಿಧಾನವು ಬೆಳವಣಿಗೆಗೆ ಅಗತ್ಯವಾದ ಅಂಶಗಳನ್ನು ಮತ್ತು ಪ್ರಗತಿಪರ ಸಮಾಜದ ನಿರ್ಮಾಣಕ್ಕೆ ಅವಶ್ಯವಾದ ಹೊಂದಾಣಿಕೆಯನ್ನು ಒಳಗೊಂಡಿದೆ ಎಂಬುದರಲ್ಲಿ ನನಗೆ ಯಾವುದೇ ಸಂದೇಹವೂ ಇಲ್ಲ.*[57]

ಕೇಶವಾನಂದ ಭಾರತಿ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು[58] ನ್ಯಾಯಪರತೆಯನ್ನು ರಾಜ್ಯ ನಿರ್ದೇಶಕ ತತ್ವಗಳು ಮತ್ತು ಮೂಲಭೂತ ಹಕ್ಕುಗಳ ಬೆಳಕಿನಲ್ಲಿ ಹೀಗೆ ವ್ಯಾಖ್ಯಾನಿಸಿತು:

> *'ಪೀಠಿಕೆಯಲ್ಲಿ ಪ್ರಸ್ತಾಪಿಸಲಾಗಿರುವ ಮಾನವ ಘನತೆ, ಸಾಮಾಜಿಕ ಮತ್ತು ಆರ್ಥಿಕ ನ್ಯಾಯ, ಮೊದಲಾದ ಪರಿಕಲ್ಪನೆಗಳು ಅಸ್ಪಷ್ಟವಾಗಿದೆ ಎನ್ನಲಾಗಿದೆ; ಈ ಪರಿಕಲ್ಪನೆಗಳನ್ನು ಬೇರೆ ಬೇರೆ ವಿಚಾರಧಾರೆಯ ಜನರು ಬೇರೆ ಬೇರೆ ರೀತಿಯಲ್ಲಿ ಗ್ರಹಿಸುತ್ತಾರೆ. ಅಸ್ಪಷ್ಟತೆ ಇದೆ ಎನ್ನುವುದನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳಲು ನಮಗೆ ಸಾಧ್ಯವಾಗುತ್ತಿಲ್ಲ. ಸಂವಿಧಾನದ ತಳಪಾಯದಂತಿರುವ ಮೂಲಭೂತ ಅಂಶಗಳನ್ನು ಪೀಠಿಕೆಯು ಸಮರ್ಥವಾಗಿ ಬಿಂಬಿಸಬೇಕು ಎನ್ನುವ ಉದ್ದೇಶದಿಂದ ಪೀಠಿಕೆಯನ್ನು ಸುದೀರ್ಘ ಚರ್ಚೆಗಳ ನಂತರ, ಕೊನೆಯದಾಗಿ ಅಂಗೀಕರಿಸಲಾಯಿತು.*

*ಸಾಮಾಜಿಕ ಮತ್ತು ಆರ್ಥಿಕ ನ್ಯಾಯದಂತಹ ಪರಿಕಲ್ಪನೆಯ ಬಗ್ಗೆ ವಿಭಿನ್ನ ವಿಚಾರಧಾರೆಗಳು, ಚಿಂತನಾಕ್ರಮಗಳು ಇರಬಹುದು; ಆದರೆ ಸಂವಿಧಾನ ರಚನಾಕಾರರಿಗೆ ಈ ಪರಿಕಲ್ಪನೆಗಳ ಅರ್ಥ ಸುಸ್ಪಷ್ಟವಾಗಿತ್ತು. ಹಾಗೂ ಈ ಪರಿಕಲ್ಪನೆಗಳನ್ನು ಕಾರ್ಯಗತಗೊಳಿಸುವ ಉದ್ದೇಶದಿಂದಲೇ ಅವರು ಮೂಲಭೂತ ಹಕ್ಕುಗಳನ್ನು ಕುರಿತಾದ ಅಧ್ಯಾಯ 3 ಮತ್ತು ರಾಜ್ಯ ನಿರ್ದೇಶಕ ತತ್ವಗಳನ್ನು ಕುರಿತಾದ ಅಧ್ಯಾಯ 4ನ್ನು ಅಳವಡಿಸಿದರು. ಈ ಎರಡೂ ಸಂವಿಧಾನದ ಅವಿಭಾಜ್ಯ ಅಂಶಗಳು. ಮೊದಲಿನದು ಜನರಿಗೆ ವೈಯಕ್ತಿಕ ಸ್ವಾತಂತ್ರ್ಯವನ್ನು ನೀಡುತ್ತದೆ. ಹಾಗೂ ಎರಡನೆಯದು ಜನರಿಗೆ ಸಾಮಾಜಿಕ ಸುರಕ್ಷತೆ ಮತ್ತು ನ್ಯಾಯ ಒದಗಿಸುವಂತೆ ಹಾಗೂ ಶೋಷಣೆಯಿಂದ ಮುಕ್ತಿ ದೊರಕಿಸುವಂತೆ ರಾಜ್ಯ ಸರ್ಕಾರಗಳಿಗೆ ಮಾರ್ಗದರ್ಶಿ ಸೂಚನೆಗಳನ್ನು ನೀಡುತ್ತದೆ.'*

ಆಸಕ್ತಿದಾಯಕ ವಿಚಾರವೆಂದರೆ, ಸಂವಿಧಾನ ರಚನಾ ಸಮಿತಿಯ ಸಭೆಯಲ್ಲಿ ನ್ಯಾಯಪರತೆ ಕುರಿತು ನಡೆದ ಚರ್ಚೆಗಳು ಮತ್ತು ವಾದಗಳು ದೀರ್ಘವಾಗಿರಲಿಲ್ಲ. ಸಾಮಾಜಿಕ ನ್ಯಾಯದ ತೀವ್ರ ಪ್ರತಿಪಾದಕರಾಗಿದ್ದ ಅಂಬೇಡ್ಕರ್, ಸಾಮಾಜಿಕ ವೈಕಲ್ಯಗಳನ್ನು ಅಳಿಸಿ ಸಮಾನ ಅವಕಾಶಗಳನ್ನು ಪೋಷಿಸುವಂತಹ ನ್ಯಾಯಯುತ ಸಾಮಾಜಿಕ ವ್ಯವಸ್ಥೆಯನ್ನು ಸ್ಥಾಪಿಸಲು ಶ್ರಮಿಸಿದರು. ಇದರೊಂದಿಗೆ 'ಆರ್ಥಿಕ ಸ್ವಾತಂತ್ರ್ಯ' ಎಂಬ ಅಧ್ಯಾಯದಲ್ಲಿ ವಿವರಿಸಲಾದ ಆರ್ಥಿಕ ನ್ಯಾಯದ ಕುರಿತ ಅವರ ಪರಿಕಲ್ಪನೆಯೂ ಸೇರಿಕೊಂಡು ಸ್ವಾತಂತ್ರ್ಯ ಹೋರಾಟದ ಬಗೆಗಿನ ಅವರ ಆಲೋಚನೆಯನ್ನು ರೂಪಿಸಿದ್ದವು. ಇದನ್ನು ಸಾಧಿಸುವ ಸಲುವಾಗಿ ಅವರು ಸ್ವಾತಂತ್ರ್ಯ, ಸಮಾನತೆ ಮತ್ತು ಬಂಧುತ್ವ – ಎಂಬ ಪವಿತ್ರ ತ್ರಿಮೂರ್ತಿಗಳನ್ನು ಉದ್ದೀಪನಗೊಳಿಸಿದರು. ಅವರ ಪ್ರಕಾರ, ಒಂದು ವೇಳೆ ಭಾರತೀಯ ಸಮಾಜವು ಸ್ವಾತಂತ್ರ್ಯ, ಸಮಾನತೆ ಮತ್ತು ಬಂಧುತ್ವಗಳ ವಿಷಯವನ್ನು ಅಂತರ್ಗತಗೊಳಿಸಿಕೊಂಡಲ್ಲಿ, ಅದರ ಸಹಜ ಪರಿಣಾಮವಾಗಿ ನ್ಯಾಯಪರತೆಯೂ ಬರುತ್ತದೆ. ಒಟ್ಟಾರೆ ನ್ಯಾಯದ ಪರಿಕಲ್ಪನೆ ಹಾಗೂ ಸ್ವಾತಂತ್ರ್ಯ, ಸಮಾನತೆ ಮತ್ತು ಬಂಧುತ್ವಗಳ ಕಲ್ಪನೆಯ ನಡುವೆ ಅವರು ಯಾವುದೇ ನಿರ್ದಿಷ್ಟ ವ್ಯತ್ಯಾಸವನ್ನೂ ಕಾಣಲಿಲ್ಲ.[59]

## 3.7 ಸ್ವಾತಂತ್ರ್ಯ

ಸಂವಿಧಾನ ಪೀಠಿಕೆಯು ವಿಚಾರ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ, ನಂಬಿಕೆ, ಧಾರ್ಮಿಕ ಶ್ರದ್ಧೆ ಮತ್ತು ಪೂಜಿಸುವ ಸ್ವಾತಂತ್ರ್ಯದಂತಹ ಕೆಲವು ಪ್ರಮುಖ

ಪರಿಕಲ್ಪನೆಗಳ ಬಗ್ಗೆ ಅಚಲ ಬದ್ಧತೆಯನ್ನು ತೋರಿಸಿದೆ. ಇಲ್ಲಿ ಸ್ವಾತಂತ್ರ್ಯದ ಒಳಗೊಳ್ಳುವ ಗುಣವನ್ನು ನಾವು ಗಮನಿಸಬೇಕು. ಅದು ಕೇವಲ ಧಾರ್ಮಿಕ ಸ್ವಾತಂತ್ರ್ಯವಲ್ಲ; ಅದು ವೈಚಾರಿಕ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನೂ ಸಮಾನವಾಗಿ ಒಳಗೊಂಡಿದೆ. ಭಾರತದ ಜನರು ಆಲೋಚಿಸುವ, ಅಭಿವ್ಯಕ್ತಿಸುವ, ಧಾರ್ಮಿಕ ಶ್ರದ್ಧೆ ಹೊಂದುವ ಹಾಗೂ ಪೂಜಿಸುವ ಸ್ವಾತಂತ್ರ್ಯಗಳನ್ನು ಹೊಂದಿದ್ದಾರೆ. ಈಗ ಸ್ವಾತಂತ್ರ್ಯದ ಈ ವಿಶಾಲ ಪರಿಕಲ್ಪನೆಯು ಒಂದು ವಿಸ್ತಾರವಾದ ಸಾಂಸ್ಕೃತಿಕ, ಸಾಮಾಜಿಕ ಮತ್ತು ಕಾನೂನಾತ್ಮಕ ಪ್ರಜ್ಞೆಯ ಭಾಗವಾಗಿಬಿಟ್ಟಿದೆ. ಅದರ ಅನೇಕ ಆಯಾಮಗಳನ್ನು ಸೂಚಿಸಲು ಸ್ವಾತಂತ್ರ್ಯದ ಈ ಪರಿಕಲ್ಪನೆಯನ್ನು ನ್ಯಾಯಾಲಯಗಳು ಹೇಗೆ ಅರ್ಥೈಸಿವೆ ಎಂಬುದಕ್ಕೆ ಇಲ್ಲಿ ಎರಡೇ ಎರಡು ಉದಾಹರಣೆಗಳನ್ನು ನೀಡುತ್ತೇವೆ.

### 3.7.1 ರಾಜದ್ರೋಹದ ಸಾಂವಿಧಾನಿಕತೆ

ಮಾತಿನ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ಭಾರತೀಯ ದಂಡ ಸಂಹಿತೆಯ ವಸಾಹತುಶಾಹಿ ಲಕ್ಷಣದ ಕಲಂ 124ಎ ಅಡಿಯಲ್ಲಿ ಮಹಾತ್ಮಾ ಗಾಂಧಿಯವರ ಮೇಲೆ ಹೇರಲಾದ ರಾಜದ್ರೋಹ ಪ್ರಕರಣವನ್ನು ನಾವು ಮೇಲೆ ಉಲ್ಲೇಖಿಸಿದ್ದೇವೆ. ಕೇದಾರ್‌ನಾಥ್ ಸಿಂಗ್ ವರ್ಸಸ್ ಬಿಹಾರ ರಾಜ್ಯ ಸರ್ಕಾರ 60 ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಈ ಕಲಂನ ಸಾಂವಿಧಾನಿಕತೆಯನ್ನು ಎತ್ತಿಹಿಡಿದಿದೆಯಾದರೂ, ಹಿಂಸಾಚಾರವನ್ನು ಪ್ರಚೋದಿಸುವ ಲಕ್ಷಣವುಳ್ಳ ಭಾಷಣಗಳಿಗೆ ಮಾತ್ರ ಐಪಿಸಿ ಕಲಂ 124ಎ ಬಳಕೆಯನ್ನು ಸ್ಪಷ್ಟವಾಗಿ ಸೀಮಿತಗೊಳಿಸಿದೆ. ಸರ್ವೋಚ್ಚ ನ್ಯಾಯಾಲಯದ ಸ್ಫುಟವಾದ ಹೇಳಿಕೆ ಹೀಗಿದೆ:

> *ಸರ್ಕಾರದ ಕ್ರಮಗಳನ್ನು ಉತ್ತಮಪಡಿಸುವ ಅಥವಾ ತಿದ್ದುಪಡಿ ಮಾಡುವ ದೃಷ್ಟಿಯಿಂದ ಆ ಕ್ರಮಗಳ ಬಗ್ಗೆ ಬಳಸುವ ಕಟುವಾದ ಪದಗಳು ಈ ಕಲಂನೊಳಗೆ ಬರದೇ ಇರುವಂತೆ ನಿಗಾ ವಹಿಸಲಾಗಿದೆ. ಅದೇ ರೀತಿ, ಟೀಕೆಗಳು ಎಷ್ಟೇ ಕಟುವಾಗಿದ್ದರೂ, ಕಾನೂನಿನ ವ್ಯಾಪ್ತಿಯಲ್ಲಿ ಅಸಮ್ಮತಿ ವ್ಯಕ್ತಪಡಿಸುವ ಹೇಳಿಕೆಯಾಗಿದ್ದಲ್ಲಿ ಅದು ಶಿಕ್ಷಾರ್ಹವಾಗುವುದಿಲ್ಲ; ಹೇಳಿಕೆಗಳು ಹಿಂಸಾಚಾರವನ್ನು ಪ್ರಚೋದಿಸದೆ ಇದ್ದರೆ, ಸಾರ್ವಜನಿಕ ಸುವ್ಯವಸ್ಥೆಗೆ ಧಕ್ಕೆ ಉಂಟುಮಾಡದಿದ್ದರೆ, ಹಾಗೂ ಅಂತಹ ಉದ್ದೇಶಗಳನ್ನು ಹೊಂದಿಲ್ಲದೆ ಇದ್ದರೆ, ಆ ಹೇಳಿಕೆಗಳು ಶಿಕ್ಷಾರ್ಹವಾಗುವುದಿಲ್ಲ. ಇದನ್ನೇ ಬೇರೆ ರೀತಿಯಲ್ಲಿ*

*ಹೇಳುವುದಾದರೆ, ಜನರ ಸ್ಥಿತಿಗತಿಗಳನ್ನು ಸುಧಾರಿಸಲು ಅಥವಾ ಸರ್ಕಾರದ ಕ್ರಮಗಳು ಮತ್ತು ಕ್ರಿಯೆಗಳನ್ನು ರದ್ದುಪಡಿಸಲು ಇಲ್ಲವೇ ಬದಲಾಯಿಸಲು ಆಗ್ರಹಪೂರ್ವಕವಾಗಿ ಒತ್ತಾಯಿಸುವುದು ಅಥವಾ ಸರ್ಕಾರದ ಕ್ರಮಗಳು ಮತ್ತು ಕ್ರಿಯೆಗಳನ್ನು ಅಥವಾ ಸರ್ಕಾರದ ಸಂಸ್ಥೆಗಳನ್ನು ಕಟುವಾದ ಪದಗಳಲ್ಲಿ ಟೀಕಿಸುವುದು, ದ್ವೇಷ ಮತ್ತು ವಿಶ್ವಾಸದ್ರೋಹದ ಭಾವನೆಗಳನ್ನು ಕೆರಳಿಸದೆ, ಸಾರ್ವಜನಿಕ ಸುವ್ಯವಸ್ಥೆಗೆ ಧಕ್ಕೆ ಉಂಟುಮಾಡದೆ ಅಥವಾ ಹಿಂಸೆಯನ್ನು ಪ್ರಯೋಗಿಸದೆ ಟೀಕಿಸುವುದು– ಇವು ಕಾನೂನಿನ ಮೂಲಕ ಸ್ಥಾಪಿತವಾದ ಸರ್ಕಾರಕ್ಕೆ ವಿಶ್ವಾಸದ್ರೋಹ ಎಸಗಿದಂತೆ ಆಗುವುದಿಲ್ಲ’* [61]

ಆಡಳಿತದಲ್ಲಿರುವ ಸರ್ಕಾರವನ್ನು ಕಟುವಾಗಿ ಟೀಕಿಸಿದ ಮಾತ್ರಕ್ಕೆ ಅದು ರಾಜದ್ರೋಹದ ಕೃತ್ಯವಾಗುವುದಿಲ್ಲ. ಸಂವಿಧಾನವು ಪ್ರತಿಯೊಬ್ಬ ಪ್ರಜೆಗೂ ಮಾತಿನ ಮತ್ತು ಅಭಿವ್ಯಕ್ತಿಯ ಸ್ವಾತಂತ್ರ್ಯವನ್ನು ನೀಡಿದೆ. ಪ್ರಜೆಗಳು ಸರ್ಕಾರದ ನಡೆಗಳು ಮತ್ತು ತೀರ್ಮಾನಗಳನ್ನು ನಿರಾಕರಿಸುವ, ಟೀಕಿಸುವ ಸ್ವಾತಂತ್ರ್ಯ ಹೊಂದಿದ್ದಾರೆ. ಆದರೆ ಈ ಸ್ವಾತಂತ್ರ್ಯವು ಸಾರ್ವಜನಿಕ ಬದುಕಿನಲ್ಲಿ ಅವ್ಯವಸ್ಥೆಯನ್ನು ಮೂಡಿಸಬಾರದು ಹಾಗೂ ಹಿಂಸೆಯನ್ನು ಪ್ರಚೋದಿಸಬಾರದು ಎನ್ನುವುದನ್ನು ಕೇದಾರ್‌ನಾಥ್ ಪ್ರಕರಣದ ತೀರ್ಪಿನಲ್ಲಿ ಸರ್ವೋಚ್ಚ ನ್ಯಾಯಾಲಯ ಸ್ಪಷ್ಟವಾಗಿ ಹೇಳಿದೆ.

**“ಪ್ರತಿರೋಧದ ಹಕ್ಕಿನ ವ್ಯಾಪ್ತಿಯನ್ನು ಅರ್ಥಮಾಡಿಕೊಂಡು ಎಲ್ಲಾ ಪ್ರಜೆಗಳು ತಮ್ಮ ಅಸಮಾಧಾನವನ್ನು ಅಭಿವ್ಯಕ್ತಿಪಡಿಸುವ ಹಕ್ಕನ್ನು ರಕ್ಷಿಸುವಂತೆ ಪ್ರಭುತ್ವವನ್ನು ಒತ್ತಾಯಿಸುತ್ತಲೇ ಇರಬೇಕಾದುದು ಅತ್ಯಂತ ಮುಖ್ಯವಾದ ಸಂಗತಿ”**

*ಬಲವಂತ್ ಸಿಂಗ್ ವರ್ಸಸ್ ಭಾರತ ಸರ್ಕಾರ* [62] ಪ್ರಕರಣದಲ್ಲಿ, ಇಂದಿರಾ ಗಾಂಧಿಯವರ ಕಗ್ಗೊಲೆ ನಡೆದ ದಿನದಂದು ಜನಜಂಗುಳಿಯಲ್ಲಿ *‘ಖಲಿಸ್ತಾನ್ ಜಿಂದಾಬಾದ್’* ಸೇರಿದಂತೆ ಹಲವು ಘೋಷಣೆಗಳನ್ನು ಕೂಗಿದ್ದು ರಾಜದ್ರೋಹ ಆಗುವುದೇ ಎಂಬ ಪ್ರಶ್ನೆಗೆ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪಿನಲ್ಲಿ ಹೀಗೆ ಹೇಳಲಾಗಿದೆ: *‘ಯಾವುದೇ ಪೂರಕ ಕ್ರಿಯೆಯಿಲ್ಲದೆ ಒಂದೆರಡು ಬಾರಿ ಅಂತಹ ಅನುದ್ದೇಶಿತ ಘೋಷಣೆಗಳನ್ನು ಕೂಗುವುದರಿಂದ ರಾಜದ್ರೋಹದ ಆಪಾದನೆಯನ್ನು ಸಾಬೀತುಪಡಿಸುವುದು ನಮಗೆ ಕಷ್ಟವಾಗುತ್ತದೆ.’* ಈ

ಮೊಕದ್ದಮೆಯನ್ನು ದಾಖಲಿಸಿಕೊಂಡ ಪೊಲೀಸರನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡ ಸರ್ವೋಚ್ಚ ನ್ಯಾಯಾಲಯವು, *'ಇಬ್ಬರು ಮನವಿದಾರರು ಒಂದೆರಡು ಬಾರಿ ಕೂಗಿದ ಅನುದ್ದೇಶಿತ ಘೋಷಣೆಗಳಿಗೆ ಪೊಲೀಸರು ಹೆಚ್ಚು ಮಹತ್ವ ನೀಡಬೇಕಿತ್ತು ಎಂದು ನಮಗನಿಸುವುದಿಲ್ಲ, ಅಷ್ಟೇ ಅಲ್ಲ ಅವುಗಳಲ್ಲಿ ಇನ್ನೇನನ್ನೋ ಹುಡುಕುವುದೂ ಬೇಕಾಗಿರಲಿಲ್ಲ ಎಂಬುದು ನಮ್ಮ ಅಭಿಪ್ರಾಯವಾಗಿದೆ.'* ಎಂದಿತು.

ನ್ಯಾಯಾಲಯವು ತನ್ನ ತೀರ್ಪಿನ ಅಂತ್ಯದಲ್ಲಿ ಹೀಗೆ ಹೇಳಿತು: *ಮನವಿದಾರರು ಹಾಕಿದ ಘೋಷಣೆಯಿಂದಾಗಿ ಯಾವುದೇ ರೀತಿಯಲ್ಲೂ ಎಂತಹ ಗಲಭೆಯೂ ಉಂಟಾಗಲಿಲ್ಲ ಮತ್ತು ಮನವಿದಾರರು ಒಂದೆರಡು ಬಾರಿ ಘೋಷಣೆಗಳನ್ನು ಕೂಗಿದರೂ ಜನಸಾಮಾನ್ಯರು ಅದರಿಂದ ಬಾಧಿತರಾಗದೇ ತಮ್ಮ ಸಹಜ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದರು ಎಂದು ಫಿರ್ಯಾದಿದಾರರೇ ಒಪ್ಪಿಕೊಂಡಿದ್ದಾರೆ. ಒಂದೆರಡು ಬಾರಿ ಇಬ್ಬರು ವ್ಯಕ್ತಿಗಳು ಅನುದ್ದೇಶಿತ ಘೋಷಣೆಗಳನ್ನು ಕೂಗಿಬಿಟ್ಟರೆ ಅದನ್ನೇ ಭಾರತದಲ್ಲಿ ಕಾನೂನಿನನ್ವಯ ಸ್ಥಾಪಿತವಾದ ಸರ್ಕಾರದ ವಿರುದ್ಧ ಅಸಮಾಧಾನ ಅಥವಾ ದ್ವೇಷ ಕೆರಳಿಸುವ ಇಲ್ಲವೇ ಕೆರಳಿಸಲು ನಡೆಸಲಾಗುವ ಯತ್ನ ಎನ್ನಲಾಗದು. ಈ ಪ್ರಕರಣದ ಸತ್ಯಾಸತ್ಯತೆಗಳನ್ನು ಮತ್ತು ಸಂದರ್ಭಗಳನ್ನು ಗಮನಿಸಿದಾಗ ಇದಕ್ಕೆ ಐಪಿಸಿ ಕಲಂ 124ಎ ಅನ್ವಯಿಸುವುದೇ ಇಲ್ಲ.*

ಮಾತು ಅಥವಾ ಮಾತಿನ ಸ್ವಾತಂತ್ರ್ಯ ಕುರಿತು ಸರ್ವೋಚ್ಚ ನ್ಯಾಯಾಲಯ ಒದಗಿಸಿರುವ ಈ ವಿಶಾಲ ಅರ್ಥವನ್ನು ಸತತವಾಗಿ ಬಂದಿರುವ ಯಾವ ಸರ್ಕಾರವೂ ಪೂರ್ಣವಾಗಿ ಗ್ರಹಿಸಿಲ್ಲ ಅಥವಾ ಅರ್ಥೈಸಿಕೊಂಡಿಲ್ಲದಿರುವುದು ಖೇದನೀಯ. ಈ ಸರ್ಕಾರಗಳೆಲ್ಲವೂ ರಾಜದ್ರೋಹದ ಕಾನೂನಿನ ವ್ಯಾಪ್ತಿಯನ್ನು ಉದ್ದೇಶಪೂರ್ವಕವಾಗಿಯೇ ತಪ್ಪಾಗಿ ಅರ್ಥೈಸಿವೆ ಮತ್ತು ಆಯಾ ಸಂದರ್ಭಗಳ ಸರ್ಕಾರವನ್ನು ಟೀಕಿಸುವ ಕಾನೂನುಬದ್ಧ ಮಾತುಗಳನ್ನೂ ಶಿಕ್ಷೆಗೆ ಗುರಿಪಡಿಸುತ್ತಲೇ ಬಂದಿವೆ. ಪ್ರತಿರೋಧದ ಹಕ್ಕಿನ ಅರ್ಥವನ್ನು ಅದರ ವಿಶಾಲ ವ್ಯಾಪ್ತಿಯಲ್ಲಿ ಗ್ರಹಿಸಿಕೊಳ್ಳಬೇಕು. ಗಾಂಧಿ ಹೇಳುವಂತೆ, *'ಪ್ರಜೆಗಳು ತಮ್ಮ ಅಸಮಾಧಾನವನ್ನು ಅಭಿವ್ಯಕ್ತಿಪಡಿಸಲು ಸಂಪೂರ್ಣ ಅವಕಾಶ ಇರಬೇಕು' ಎಲ್ಲಿಯವರೆಗೆ ಜನರು ಹಿಂಸಾಚಾರದ ಬಗ್ಗೆ ಯೋಚಿಸದೆ ಅದನ್ನು ಉತ್ತೇಜಿಸದೆ ಇರುವರೋ ಅಲ್ಲಿಯವರೆಗೂ ಈ ಹಕ್ಕನ್ನು ರಕ್ಷಿಸುವಂತೆ ಪ್ರಜೆಗಳು ಪ್ರಭುತ್ವವನ್ನು ಆಗ್ರಹಿಸುತ್ತಲೇ ಇರಬೇಕು.*

### 3.7.2. ಲಿಂಗತ್ವ ಅಸ್ಮಿತೆಯನ್ನು ಅಭಿವ್ಯಕ್ತಿಗೊಳಿಸುವ ಹಕ್ಕನ್ನೂ ಒಳಗೊಳ್ಳುವ ಅಭಿವ್ಯಕ್ತಿ ಸ್ವಾತಂತ್ರ್ಯ

ನಾಟಕಗಳು, ಸಿನೆಮಾಗಳು, ಪುಸ್ತಕಗಳು ಅಥವಾ ಸಾಮಾಜಿಕ ಮಾಧ್ಯಮದ ಪೋಸ್ಟ್‌ಗಳು, ಇವುಗಳಲ್ಲಿ ಯಾವುದೇ ಇರಲಿ, ಅದರ ಮೂಲಕ ಓರ್ವ ವ್ಯಕ್ತಿ ತನ್ನ ವಿಚಾರಗಳನ್ನು, ಚಿಂತನೆಗಳನ್ನು ವ್ಯಕ್ತಪಡಿಸಿದರೆ ಅಂತಹ ಸಾಧನವನ್ನೇ ಸಾಂಪ್ರದಾಯಿಕ ಕಾನೂನು ಪಠ್ಯಗಳಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಎನ್ನಲಾಗುತ್ತದೆ. ಆದರೆ *ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ (NALSA) ವರ್ಸಸ್ ಭಾರತ ಸರ್ಕಾರ* ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿದ ಪ್ರಖ್ಯಾತ ತೀರ್ಪಿನಲ್ಲಿ 'ಅಭಿವ್ಯಕ್ತಿ'ಯ ಪರಿಕಲ್ಪನೆಯನ್ನು ವಿಸ್ತರಿಸಿ ಭಾರತದ ಸಂವಿಧಾನದಲ್ಲಿರುವ ಎಲ್ಲ ಹಕ್ಕುಗಳಿಗೂ ಟ್ರಾನ್ಸ್‌ಜೆಂಡರ್ ವ್ಯಕ್ತಿಗಳು ಅರ್ಹರಾಗಿರುತ್ತಾರೆ ಎಂದು ಮಾನ್ಯಮಾಡಿತು.

ನ್ಯಾಯಮೂರ್ತಿಗಳ ಅಭಿಪ್ರಾಯ ಹೀಗಿದೆ:

> *ಎಲ್ಲ ಪ್ರಜೆಗಳೂ ಮಾತಿನ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನು ಹೊಂದಿರುತ್ತಾರೆ ಎಂದು ಸಂವಿಧಾನದ ಅನುಚ್ಛೇದ 19(1)(ಎ) ಹೇಳುತ್ತದೆ. ಇದರಂತೆ ಯಾವುದೇ ವ್ಯಕ್ತಿಯು ಸ್ವಯಂ-ಗುರುತಿಸಿಕೊಂಡ ತನ್ನ ಲಿಂಗತ್ವವನ್ನು ಅಭಿವ್ಯಕ್ತಿಪಡಿಸುವ ಹಕ್ಕನ್ನು ಹೊಂದಿರುತ್ತಾರೆ. ಸ್ವಯಂ-ಗುರುತಿಸಿಕೊಂಡ ಲಿಂಗತ್ವವನ್ನು ಉಡುಗೆ ತೊಡುಗೆ, ಮಾತುಗಳು, ಕ್ರಿಯೆ ಅಥವಾ ವರ್ತನೆ ಅಥವಾ ಇನ್ನಾವುದೇ ರೂಪದಲ್ಲೂ ಅಭಿವ್ಯಕ್ತಿಪಡಿಸಬಹುದು. ಸಂವಿಧಾನದ ಅನುಚ್ಛೇದ 19(2)ರಲ್ಲಿರುವ ನಿರ್ಬಂಧಗಳ ಅನುಸಾರ ಯಾವುದೇ ವ್ಯಕ್ತಿಯ ಬಾಹ್ಯ ಲಕ್ಷಣಗಳು ಅಥವಾ ವೇಷಭೂಷಣಗಳ ಆಯ್ಕೆಯ ಮೇಲೆ ನಿರ್ಬಂಧ ಹೇರಲು ಸಾಧ್ಯವಿಲ್ಲ.*[63]

'*ವೇಷಭೂಷಣ, ಮಾತುಗಳು, ಕ್ರಿಯೆ ಅಥವಾ ವರ್ತನೆ*'ಗಳ ಮೂಲಕ ತಮ್ಮ ಲಿಂಗತ್ವವನ್ನು ವ್ಯಕ್ತಪಡಿಸುವ ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ಹಕ್ಕನ್ನು ಈ ಪ್ರಕರಣದಲ್ಲಿ ಮಾನ್ಯಮಾಡುವ ಮೂಲಕ ನ್ಯಾಯಮೂರ್ತಿಗಳು ಅಭಿವ್ಯಕ್ತಿ ಸ್ವಾತಂತ್ರ್ಯದ ಪರಿಕಲ್ಪನೆಗೆ ಹೊಸ ಪರಿವಿಡಿಯನ್ನು ಒದಗಿಸಿದರು. ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಘನತೆ ಮತ್ತು ಸಮಾನತೆಯ ಪರಿಕಲ್ಪನೆಗಳಿಗೆ ಬೆಸೆದ ನ್ಯಾಯಾಧೀಶರು ಟ್ರಾನ್ಸ್‌ಜೆಂಡರ್ ವ್ಯಕ್ತಿಗಳನ್ನು ದೇಶದ ಪೂರ್ಣಪ್ರಜೆಗಳನ್ನಾಗಿ ಗುರುತಿಸಿದರು. ಬದಲಾಗುತ್ತಿರುವ ಸಮಾಜ ಮತ್ತು ಅದರ ಸಮಕಾಲೀನ ಅಗತ್ಯಗಳಿಗೆ

ಪೂರಕವಾಗಿ ಸಂವಿಧಾನವನ್ನು ಅರ್ಥೈಸುವ ವಿಧಾನವನ್ನು ಈ ತೀರ್ಪು ಎತ್ತಿ ತೋರಿಸಿತು.

*ಕೇಶವಾನಂದ ಭಾರತಿ ವರ್ಸಸ್ ಕೇರಳ ರಾಜ್ಯ ಸರ್ಕಾರ* ಪ್ರಕರಣದಲ್ಲಿ ನ್ಯಾಯಮೂರ್ತಿ ಎಚ್. ಆರ್. ಖನ್ನಾ ಅವರ ಸಮರ್ಪಕ ಹೇಳಿಕೆ ಹೀಗಿದೆ:

> *ಪ್ರತಿಯೊಂದು ಪೀಳಿಗೆಯೂ ತನ್ನ ಮುಂದೆ ನೆಚ್ಚಿನ ಗುರಿಯೊಂದನ್ನು ಇರಿಸಿಕೊಳ್ಳುತ್ತದೆ. ಅದರ ಮೂಲಕವೇ ಬದುಕಿನ ಸಂತಸ ಮತ್ತು ಸ್ವಾತಂತ್ರ್ಯವನ್ನು ಪಡೆಯಲು ಯತ್ನಿಸುತ್ತದೆ. ಸ್ವಾತಂತ್ರ್ಯದ ಆದರ್ಶಗಳನ್ನು ತಲೆಮಾರಿನಿಂದ ತಲೆಮಾರಿಗೆ ನಿಗದಿಪಡಿಸಲು ಸಾಧ್ಯವಿಲ್ಲ; ಅದರ ಪರಿಕಲ್ಪನೆಯನ್ನು ಮಾತ್ರ ನಿಗದಿಪಡಿಸಬಹುದು, ಅದೇನೆಂಬುದರ ಚಿತ್ರಣವನ್ನೂ ಒದಗಿಸಬಹುದು. ಆದರೆ, ಬದಲಿಸಲಾಗದ ಕಾನೂನಿನಲ್ಲಿ ನಿಗದಿಪಡಿಸಿದ ಸ್ವಾತಂತ್ರ್ಯವು ಸ್ವಾತಂತ್ರ್ಯವೇ ಅಲ್ಲ.*[64]

## 3.8 ಸಮಾನತೆ

ಸಂವಿಧಾನ ಸಭೆಯನ್ನು ಉದ್ದೇಶಿಸಿ ಮಾಡಿದ ಕೊನೆಯ ಭಾಷಣದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರು, ರಾಜಕೀಯ ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳಲು ಸಾಮಾಜಿಕ ಪ್ರಜಾಪ್ರಭುತ್ವವನ್ನು ಸ್ಥಾಪಿಸಬೇಕಾದುದರ ಮಹತ್ವವನ್ನು ಒತ್ತಿಹೇಳಿದರು. 'ಇದು ಸಾಧ್ಯವಾಗಬೇಕಾದರೆ ನಾವು ಸ್ವಾತಂತ್ರ್ಯ, ಸಮಾನತೆ ಹಾಗು ಬಂಧುತ್ವಗಳನ್ನು ಜೀವನ ಮೌಲ್ಯಗಳಾಗಿ ಗುರುತಿಸಬೇಕಾಗುತ್ತದೆ' ಎಂದರು. ಆದಾಗ್ಯೂ ಅವರಿಗೆ ಸ್ವಾತಂತ್ರ್ಯೋತ್ತರ ಭಾರತದ ಬಗ್ಗೆ ಅಪಾರ ಕಳವಳ ಇತ್ತು. ನಾವೆಲ್ಲ ಒಂದೇ ದೇಶವಾಸಿಗಳು ಎಂಬ ಭಾವನೆಗಿಂತಲೂ ಜಾತಿ/ಪಂಗಡಗಳ ಭೇದಗಳು ಮೇಲುಗೈ ಸಾಧಿಸಿದರೆ ಭಾರತವು ಶೀಘ್ರವಾಗಿ ಅರಾಜಕತ್ವದೆಡೆಗೆ ಸಾಗುತ್ತದೆ ಎಂದು ಚಿಂತಿತರಾಗಿದ್ದರು. ಈ ಬಗ್ಗೆ ಅವರು ಹೇಳುತ್ತಾರೆ:

> *ಮೊದಲಿಗೆ ನಾವು ಭಾರತೀಯ ಸಮಾಜದಲ್ಲಿ ಇರುವ ಎರಡು ಮಹತ್ವದ ಕೊರತೆಗಳನ್ನು ಒಪ್ಪಿಕೊಂಡು ಮುಂದುವರೆಯಬೇಕು. ಅವುಗಳಲ್ಲಿ ಒಂದು, ಸಮಾನತೆ. ಸಾಮಾಜಿಕ ಸ್ತರದಲ್ಲಿ, ಭಾರತೀಯ ಸಮಾಜವು ಶ್ರೇಣೀಕೃತ ಅಸಮಾನತೆಯ ತತ್ವದ ಮೇಲೆ ನಿಂತಿದೆ. ಈ ಸಮಾಜದಲ್ಲಿ ಅಸಂಖ್ಯಾತ ಕಡುಬಡವರ ನಡುವೆ ಕೆಲವೇ ಮಂದಿ ಅತೀ ಶ್ರೀಮಂತರಿದ್ದಾರೆ. 1950ರ ಜನವರಿ 26ರಂದು ನಾವು ವೈರುಧ್ಯಗಳಿಂದ ತುಂಬಿದ ಜೀವನ*

*ಘಟ್ಟವನ್ನು ಪ್ರವೇಶಿಸಲಿದ್ದೇವೆ. ರಾಜಕೀಯವಾಗಿ ನಾವು ಎಲ್ಲರೂ ಸಮಾನರಾಗುತ್ತೇವೆ ಆದರೆ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅಸಮಾನತೆಯನ್ನು ಹೊಂದಿರುತ್ತೇವೆ. (..) ಎಲ್ಲಿಯತನಕ ನಾವು ಈ ವೈರುಧ್ಯಗಳ ಜೀವನವನ್ನು ಮುಂದುವರೆಸಬೇಕು? ಎಲ್ಲಿಯವರೆಗೆ ನಾವು ಸಾಮಾಜಿಕ ಹಾಗು ಆರ್ಥಿಕ ಸಮಾನತೆಯ ನಿರಾಕರಣೆಯನ್ನು ಮುಂದುವರೆಸಬೇಕು? ಈ ನಿರಾಕರಣೆಯನ್ನು ದೀರ್ಘ ಕಾಲದವರೆಗೆ ಮುಂದುವರೆಸಿದಲ್ಲಿ, ನಾವು ರಾಜಕೀಯ ಪ್ರಜಾಪ್ರಭುತ್ವವನ್ನು ಅಪಾಯಕ್ಕೆ ದೂಡುತ್ತೇವೆ. ಈ ವೈರುಧ್ಯಗಳನ್ನು ನಾವು ಶೀಘ್ರಾತಿಶೀಘ್ರವಾಗಿ ತೊಡೆಯಬೇಕು. ಇಲ್ಲವಾದರೆ ಈ ಸಭೆಯು ಇಷ್ಟು ಶ್ರಮವಹಿಸಿ ಕಟ್ಟಿದ ಈ ರಾಜಕೀಯ ಪ್ರಜಾಪ್ರಭುತ್ವದ ಸಂರಚನೆಯನ್ನು ಅಸಮಾನತೆಗಳಿಂದ ತುಳಿತಕ್ಕೊಳಗಾದವರು ಸುಟ್ಟು ಹಾಕುತ್ತಾರಷ್ಟೆ.*[65]

ಸಂವಿಧಾನ ರಚನಕಾರರಿಗೆ, ಅದರಲ್ಲೂ ವಿಶೇಷವಾಗಿ ಅಂಬೇಡ್ಕರ್ ಅವರಿಗೆ ಸಮಾನತೆಯು ಕೇವಲ ವಿಧಿ (ಕಾನೂನು) ವಿಹಿತವಾಗಿರದೆ ಅದು ವಿಭಿನ್ನತೆ ಮತ್ತು ವ್ಯತ್ಯಾಸಗಳನ್ನು ಗುರುತಿಸಿ, ಎಲ್ಲರನ್ನೂ ಒಳಗೊಂಡ ನೈಜ ಸಮಾನತೆಯಾಗಬೇಕೆಂಬ ದೃಷ್ಟಿಕೋನ ಇತ್ತು. ಸಮುದಾಯಗಳ ನಡುವಿನ ಭಿನ್ನತೆಗಳು ಹಾಗೂ ಭಿನ್ನತೆಗೆ ತಕ್ಕಂತೆ ಸಮುದಾಯಗಳಿಗೆ ಒದಗಿಸುವ ವಿಶೇಷ ಸೌಲಭ್ಯಗಳು ಸಮಾನತೆಯ ಆಶಯಕ್ಕೆ ಧಕ್ಕೆ ತರುವಂತಹುದಲ್ಲ, ಬದಲಿಗೆ ಅವು ಸಮಾನತೆಯ ತತ್ವದ ಮೂಲ ಅಂಶಗಳು ಎನ್ನುವುದು ಅವರುಗಳ ಪರಿಕಲ್ಪನೆಯಾಗಿತ್ತು. ಆದ್ದರಿಂದ, ನಮ್ಮ ಸಂವಿಧಾನವು ಎಲ್ಲರನ್ನೂ ಸಮಾನವಾಗಿ ಕಾಣುವುದರ ಜೊತೆಗೆ ನಿರಂತರ ದಮನಕ್ಕೊಳಗಾದವರ ಶೋಷಣೆಯ ಕಾರಣಗಳನ್ನು ಗುರುತಿಸಿ ಅಂತಹ ವ್ಯವಸ್ಥಿತ ಅಸಮಾನತೆಗಳನ್ನು ನಿವಾರಿಸಲು ದೃಢನಿಶ್ಚಯದಿಂದ ಶ್ರಮಿಸುವಂತೆ ಇರಬೇಕು ಎನ್ನುವುದು ಅವರ ಗುರಿಯಾಗಿತ್ತು.

ಭಾರತ ಸಂವಿಧಾನದ ದೃಷ್ಟಿಕೋನದಿಂದ ವಿಧಿವಿಹಿತ ಸಮಾನತೆ (ಫಾರ್ಮಲ್ ಇಕ್ವಾಲಿಟಿ) ಮತ್ತು ನೈಜ ಸಮಾನತೆಯ (ಸಬ್ಸ್ಟಾಂಟಿವ್ ಇಕ್ವಾಲಿಟಿ) ನಡುವಿನ ವ್ಯತ್ಯಾಸಗಳನ್ನು ಗುರುತಿಸುವುದು ಬಹು ಮುಖ್ಯವಾಗುತ್ತದೆ. ಫ್ರೆಂಚ್ ಲೇಖಕ ಅನತೋಲೆ ಫ್ರಾನ್ಸ್ ಹೇಳುವಂತೆ, 'ಕೇವಲ ವಿಧಿವಿಹಿತ ಸಮಾನತೆಯನ್ನು ಒಪ್ಪುವ ಕಾನೂನು, ಅದರ ಭವ್ಯ ಕಾಲ್ಪನಿಕ ಸಮಾನತೆಯಲ್ಲಿ, ಬಡವ ಶ್ರೀಮಂತರಿಬ್ಬರನ್ನೂ ಸೇತುವೆಯ ಕೆಳಗೆ ಮಲಗದಂತೆ, ಭಿಕ್ಷೆ ಬೇಡದಂತೆ, ಕಳ್ಳತನ ಮಾಡದಂತೆ ನಿಯಂತ್ರಿಸುತ್ತದೆ.' ಆದರೆ, ನೈಜ ಸಮಾನತೆಗೆ ಇರುವ ಬದ್ಧತೆಯು 'ಬಡವರು ಸೇತುವೆ ಕೆಳಗೆ ಮಲಗದಂತೆ, ಹಸಿವಿನಿಂದ ಬಿಕ್ಷೆ ಬೇಡದಂತೆ, ಕಳ್ಳತನ

ಮಾಡದಂತೆ ತಡೆಯಲು ಯಾವ ಕ್ರಮಗಳನ್ನು ಕೈಗೊಳ್ಳಬೇಕು ಎನ್ನುವುದರ ಬಗ್ಗೆ ನಮ್ಮನ್ನು ಚಿಂತನೆಗೆ ಹಚ್ಚುತ್ತದೆ'.

ನಮಗೆ ತಿಳಿದಿರುವಂತೆ, ಭಾರತ ತೀವ್ರ ವೈರುಧ್ಯಗಳಿಂದ ಕೂಡಿದ ದೇಶವಾಗಿದೆ. ಜಾತಿ, ಕುಲ, ಧರ್ಮ, ಲಿಂಗ, ಪ್ರಾದೇಶಿಕತೆಗಳು ವ್ಯಕ್ತಿ–ವ್ಯಕ್ತಿಗಳ ನಡುವೆ ತೀವ್ರ ಅಸಮಾನತೆಯನ್ನು ಮೂಡಿಸಿವೆ. ಇಂತಹ ಅಸಮಾನತೆಗಳಿಂದ ತುಂಬಿದ ಸಮಾಜದಲ್ಲಿ ಎಲ್ಲರಿಗೂ ಎಟಕುವಂತಹ ಸಮಾನತೆಯನ್ನು ಸಾಧಿಸುವುದು ಹೇಗೆ? ನೀವು ಔಪಚಾರಿಕ ಸಮಾನತೆಗೆ ಬದ್ಧರಾಗಿದ್ದರೆ ಅದು ಅತ್ಯಂತ ಕೆಳಸ್ತರದಲ್ಲಿ ಇರುವ ಜನರಿಗೆ ಮೇಲಿನ ಸ್ತರದಲ್ಲಿ ಇರುವವರೊಂದಿಗೆ ಸಮಾನವಾಗಿ ಸ್ಪರ್ಧಿಸಲು ಅವಕಾಶ ನೀಡಲು ಸಾಧ್ಯವೇ?

ನೈಜ ಸಮಾನತೆಗೆ ಅಚಲ ಬದ್ಧತೆ ಹೊಂದಿರುವ ಭಾರತ ಸಂವಿಧಾನವು, ಆ ಮೂಲಕ ಇಂತಹ ಅನೇಕ ಪ್ರಶ್ನೆಗಳಿಗೆ ಉತ್ತರಿಸಲು ಯತ್ನಿಸಿದೆ. ಈ ಬದ್ಧತೆಯೇ ಅನುಸೂಚಿತ ಜಾತಿ, ಅನುಸೂಚಿತ ಪಂಗಡ ಹಾಗೂ ಹಿಂದುಳಿದ ವರ್ಗಗಳಿಗೆ ವಿಶೇಷ ಸ್ಥಾನಮಾನ ನೀಡಿ, ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ಸರಕಾರಿ ಹುದ್ದೆಗಳಲ್ಲಿ ಸ್ಥಾನ ಮೀಸಲಿರಿಸುವ ವ್ಯವಸ್ಥೆ ಮಾಡಲು ರಾಜ್ಯಗಳಿಗೆ ನಿರ್ದೇಶಿಸುತ್ತದೆ. ಈ ಬಗ್ಗೆ ಸರ್ವೋಚ್ಚ ನ್ಯಾಯಾಲಯವು *ಕೇರಳ ರಾಜ್ಯ ವರ್ಸಸ್ ಎನ್. ಎಮ್. ಥಾಮಸ್*[66] ಪ್ರಕರಣದಲ್ಲಿ ನೀಡಿರುವ ಅಭಿಪ್ರಾಯವು ಚಿಂತಿಸಲು ಯೋಗ್ಯವಾಗಿದೆ. 'ಮೀಸಲಾತಿ'ಯನ್ನು ಸಮಾನತೆಯ ತತ್ವಕ್ಕೆ ಅಪವಾದ ಎಂದು ಭಾವಿಸಬಾರದು. ನೈಜ ಸಮಾನತೆಯನ್ನು ಸಾಧಿಸುವ ಮಾರ್ಗವೆಂದು ತಿಳಿಯಬೇಕು. 'ಮೀಸಲಾತಿ'ಯು ಸಮಾಜದಲ್ಲಿ ತೀರಾ ಕೆಳಸ್ತರದಲ್ಲಿರುವವರಿಗೆ ಶಿಕ್ಷಣ ಹಾಗು ಉದ್ಯೋಗದ ಅವಕಾಶವನ್ನು ಒದಗಿಸುವ ಹಾಗೂ ಆ ಮೂಲಕ ವರ್ಗ ಮತ್ತು ಲಿಂಗ ಆಧಾರಿತ ಸಾಂಸ್ಥಿಕ ಅಸಮಾನತೆಗಳನ್ನು ತೊಡೆಯಲು ಇರುವ ಒಂದು ಸಲಕರಣೆಯಾಗಿದೆ. ಆದ್ದರಿಂದ, ದಮನಿತ ಗುಂಪುಗಳಿಗೆ ನೀಡುವ ಮೀಸಲಾತಿಯು ಒಂದು ರೀತಿಯಲ್ಲಿ ವ್ಯಕ್ತಿ ವ್ಯಕ್ತಿಗಳ ನಡುವೆ ಇರುವ ಅಸಮಾನತೆಗಳನ್ನು ಗುರುತಿಸಲು ಹಾಗೂ ಅದನ್ನು ಸರಿಪಡಿಸಲು ಇರುವ ಒಂದು ಮಾರ್ಗವಾಗಿದೆ. ಇದು ನಮ್ಮ ಸಂವಿಧಾನವು ನೈಜ ಸಮಾನತೆಗೆ ಬದ್ಧವಾಗಿದೆ ಎನ್ನುವುದನ್ನು ತೋರಿಸುವ ಒಂದು ಉದಾಹರಣೆಯಾಗಿದೆ.

ವಿಧಿವಿಹಿತ ಸಮಾನತೆ ಮತ್ತು ನೈಜ ಸಮಾನತೆಗಳ ನಡುವಿನ ವ್ಯತ್ಯಾಸವನ್ನು ಅರ್ಥಮಾಡಿಕೊಳ್ಳಲು ಇನ್ನೊಂದು ಉದಾಹರಣೆಯನ್ನು ಗಮನಿಸಬಹುದು. ಇತ್ತೀಚೆಗೆ 1860ರ ಭಾರತೀಯ ದಂಡ ಸಂಹಿತೆಯ ಕಲಂ 377ಕ್ಕೆ[67] ತಿದ್ದುಪಡಿ ತರಲಾಗಿದೆ. ತಿದ್ದುಪಡಿಗೆ ಮುನ್ನ ಶಿಶ್ನ ಮತ್ತು ಯೋನಿ ಸಂಭೋಗದ

ಹೊರತಾಗಿ ಮಾಡುವ ಎಲ್ಲಾ ಲೈಂಗಿಕ ಚಟುವಟಿಕೆಗಳನ್ನು ಅಪರಾಧವೆಂದು ಪರಿಗಣಿಸಲಾಗಿತ್ತು. ಮತ್ತು ಈ ಅಪರಾಧಕ್ಕೆ ಘೋರ ಶಿಕ್ಷೆಯನ್ನೂ ಸೂಚಿಸಲಾಗಿತ್ತು. ತಪ್ಪೆಸಗುವ ಎಲ್ಲರಿಗೂ ಒಂದೇ ರೀತಿಯಲ್ಲಿ ಅನ್ವಯವಾಗುವುದರಿಂದ ಮೊದಲ ನೋಟಕ್ಕೆ ಈ ಕಾನೂನು ನ್ಯಾಯೋಚಿತವಾಗಿದೆ ಮತ್ತು ಸರಿಯಾಗಿದೆ ಎನಿಸುತ್ತದೆ. ಆದ್ದರಿಂದ ವಿಧಿವಿಹಿತ ಸಮಾನತೆಯ ಪರೀಕ್ಷೆಯಲ್ಲಿ ಇದು ಜಯ ಗಳಿಸುತ್ತದೆ.

ಆದರೆ ಸೂಕ್ಷ್ಮವಾಗಿ ಗಮನಿಸಿದರೆ ಈ ಕಾನೂನು ಪರಸ್ಪರ ಒಪ್ಪಿಗೆಯ, ಸಮ್ಮತಿಯ ಲೈಂಗಿಕ ಚಟುವಟಿಕೆಗಳನ್ನೂ ಅಪರಾಧವಾಗಿ ಪರಿಗಣಿಸಿರುವುದು ಗೋಚರಿಸುತ್ತದೆ. ಲೈಂಗಿಕ ಮತ್ತು ಲಿಂಗತ್ವ ಅಲ್ಪಸಂಖ್ಯಾತರೆಂದು ಗುರುತಿಸಲ್ಪಟ್ಟ ವಿಭಿನ್ನ ಲೈಂಗಿಕ ಆಯ್ಕೆಗಳ ವ್ಯಕ್ತಿಗಳನ್ನು (ಎಲ್.ಜಿ.ಬಿ.ಟಿ.ಕ್ಯು.ಐ.)* ಇದು ಅಪರಾಧಿಗಳಂತೆ ಕಾಣುತ್ತದೆ. ಈ ಕಾಯಿದೆಯು ಯಾವ ಲೈಂಗಿಕ ಕ್ರಿಯೆಗಳನ್ನು

---

** ಎಲ್.ಜಿ.ಬಿ.ಟಿ.ಕ್ಯು.ಐ.ನ ಪೂರ್ಣರೂಪ: ಲೆಸ್ಬಿಯನ್, ಗೇ, ಬೈಸೆಕ್ಷುವಲ್, ಟ್ರಾನ್ಸ್‌ಜೆಂಡರ್, ಕ್ವೆಯರ್ ಮತ್ತು ಇಂಟರ್‌ಸೆಕ್ಸ್.*

1. *ಲೆಸ್ಬಿಯನ್ ಎಂದರೆ ಓರ್ವ ಮಹಿಳೆ ಮತ್ತೊಬ್ಬ ಮಹಿಳೆಯ ಬಗ್ಗೆ ಭಾವನಾತ್ಮಕವಾಗಿ, ಮಾನಸಿಕವಾಗಿ ಮತ್ತು ಲೈಂಗಿಕವಾಗಿ ಆಕರ್ಷಿತವಾಗುವುದು.*
2. *ಗೇ ಎಂದರೆ ಓರ್ವ ಪುರುಷ ಮತ್ತೊಬ್ಬ ಪುರುಷನ ಬಗ್ಗೆ ಭಾವನಾತ್ಮಕವಾಗಿ, ಮಾನಸಿಕವಾಗಿ ಮತ್ತು ಲೈಂಗಿಕವಾಗಿ ಆಕರ್ಷಿತವಾಗುವುದು.*
3. *ಬೈಸೆಕ್ಷುವಲ್ ಎಂದರೆ ಓರ್ವ ವ್ಯಕ್ತಿಯು ಮಹಿಳೆ ಮತ್ತು ಪುರುಷರಿಬ್ಬರ ಬಗ್ಗೆಯೂ ಭಾವನಾತ್ಮಕವಾಗಿ, ಮಾನಸಿಕವಾಗಿ ಮತ್ತು ಲೈಂಗಿಕವಾಗಿ ಆಕರ್ಷಿತವಾಗುವುದು.*
4. *ಟ್ರಾನ್ಸ್‌ಜೆಂಡರ್ ಎಂದರೆ, ವ್ಯಕ್ತಿಯು ಹುಟ್ಟಿದಾಗ ತಿಳಿಸಲಾದ ಲಿಂಗತ್ವಕ್ಕಿಂತ ಭಿನ್ನವಾದ ಲಿಂಗತ್ವದ ಆಳವಾದ ಭಾವನೆಯನ್ನು ಹೊಂದಿರುವುದು. ಇಂತಹ ವ್ಯಕ್ತಿಯು ವೈದ್ಯಕೀಯವಾಗಿ, ಶಸ್ತ್ರಚಿಕಿತ್ಸೆಯ ಮೂಲಕ ಅಥವಾ ಇತರೆ ಮಾರ್ಗಗಳ ಮೂಲಕ ತಮ್ಮ ಹುಟ್ಟಿನ ಲಿಂಗತ್ವದ ದೈಹಿಕ ಲಕ್ಷಣಗಳನ್ನು ಬದಲಾಯಿಸಿಕೊಂಡಿರಬಹುದು. ಅಥವಾ ಹೀಗೆ ದೈಹಿಕ ಬದಲಾವಣೆ ಇಲ್ಲದೆಯೂತಮ್ಮಉಡುಪು, ಮಾತು ಹಾಗೂ ಆಂಗಿಕ ಭಾಷೆಯ ಮೂಲಕ ತಮ್ಮ ಆಯ್ಕೆಯ ಲಿಂಗತ್ವವನ್ನು ವ್ಯಕ್ತಪಡಿಸಬಹುದು.*
5. *ಕ್ವೆಯರ್ ಎಂದರೆ ಭಿನ್ನಲಿಂಗತ್ವದ ಸಿದ್ಧ ಮಾದರಿಗಳನ್ನು ಪ್ರಶ್ನಿಸುವುದು ಮತ್ತು ಆ ಭಿನ್ನಲಿಂಗತ್ವದ (ಹೆಣ್ಣು ಮತ್ತು ಗಂಡು ಮಾತ್ರ ಲೈಂಗಿಕ ಸಂಪರ್ಕ ಮಾಡಬೇಕು ಎನ್ನುವ ಮಾದರಿ) ಮಾದರಿಗೆ ಬದ್ಧರಾಗದೆ ಇರುವುದು*
6. *ಇಂಟರ್‌ಸೆಕ್ಸ್ ವ್ಯಕ್ತಿ ಎಂದರೆ, ಹೆಣ್ಣು ಅಥವಾ ಗಂಡು ಎಂದು ಖಚಿತವಾಗಿ ಹೇಳುವಂತಹ ಲಿಂಗತ್ವದ ಲಕ್ಷಣಗಳನ್ನು (ವರ್ಣತಂತು, ಗ್ರಂಥಿಗಳು, ಹಾರ್ಮೋನ್‌ಗಳು, ಲೈಂಗಿಕ ಅಂಗಗಳು) ಸ್ಪಷ್ಟವಾಗಿ ಹೊಂದಿಲ್ಲದೆ ಇರುವುದು ಅಥವಾ ಎರಡೂ ಲಿಂಗತ್ವದಅಸ್ಪಷ್ಟ ಲಕ್ಷಣಗಳನ್ನು ಹೊಂದಿರುವುದು.*

ನಿಷೇಧಿಸಿತೋ ಅವು ಎಲ್.ಜಿ.ಬಿ.ಟಿ.ಕ್ಯು.ಐ. (ಲೈಂಗಿಕ ಮತ್ತು ಲಿಂಗತ್ವ ಅಲ್ಪಸಂಖ್ಯಾತ) ಸಮುದಾಯಕ್ಕೆ ಹೆಚ್ಚು ಸಂಬಂಧಿಸಿದ ಕ್ರಿಯೆಗಳಾಗಿದ್ದವು ಹಾಗೂ ಈ ತಿದ್ದುಪಡಿಯ ಮೂಲಕ ಅವರ ಲೈಂಗಿಕ ಚಟುವಟಿಕೆಯ ಹಕ್ಕನ್ನೇ ಸಾರಾಸಗಟಾಗಿ ಕಿತ್ತುಕೊಳ್ಳಲಾಗಿದೆ ಎನ್ನುವುದನ್ನು ತಿದ್ದುಪಡಿ ಕಾಯಿದೆಯು ಉಪೇಕ್ಷಿಸುತ್ತದೆ. ಪ್ರಭುತ್ವದ ಕಣ್ಗಾವಲು ಇಲ್ಲದೆ ವೈಯಕ್ತಿಕ ಆಯ್ಕೆಗಳನ್ನು ಮಾಡಿಕೊಳ್ಳುವ, ಜನರ ಮೂಲಭೂತ ಹಕ್ಕನ್ನೇ ಈ ಕಾಯಿದೆ ಕಸಿದುಕೊಳ್ಳುತ್ತದೆ. ಸಂವಿಧಾನದ 14ನೇ ಅನುಚ್ಛೇದವು ಎಲ್ಲರಿಗೂ ಸಮಾನತೆ ಮತ್ತು ರಕ್ಷಣೆಯ ಹಕ್ಕನ್ನು ಕೊಟ್ಟಿದ್ದರೂ

ಕೂಡ, ಈ ಪಕ್ಷಪಾತಿ ಕಾಯಿದೆಯ ಕಾರಣದಿಂದಾಗಿ ಲೈಂಗಿಕ ಅಲ್ಪಸಂಖ್ಯಾತರ ಸಮುದಾಯವು ಸದಾ ಕಾಲ ಶಿಕ್ಷೆಯ ಭಯದ ನೆರಳಿನಲ್ಲಿ ಜೀವಿಸಬೇಕಾಗಿ ಬಂದಿತು. ಆದ್ದರಿಂದ, ಮೇಲ್ನೋಟಕ್ಕೆ ಈ ಕಾಯಿದೆಯು ಎಲ್ಲರಿಗೂ ಒಂದೇ ರೀತಿಯ ಸಮಾನತೆ ನೀಡಿದೆ ಎನ್ನುವಂತೆ ಕಂಡರೂ, ಇದು ನೈಜ ಸಮಾನತೆಯ ತತ್ವವನ್ನು ಉಲ್ಲಂಘಿಸುತ್ತದೆ.

ಆದ್ದರಿಂದಲೇ ನಮ್ಮ ಸಂವಿಧಾನದ ಮೂಲಭೂತ ಹಕ್ಕುಗಳ ಅಧ್ಯಾಯವು ಹಲವಾರು ಸ್ವರೂಪದ ಅಸಮಾನತೆಗಳನ್ನು ಗುರುತಿಸಿ ಅವುಗಳ ಪರಿಹಾರಕ್ಕೆ ಅನೇಕ ನಿಬಂಧನೆಗಳನ್ನು ಒದಗಿಸಿದೆ. ಹಾಗೂ ಶಾಸಕಾಂಗವು ಈ ಅಸಮಾನತೆಗಳನ್ನು ಗುರುತಿಸಿ, ಸಮಾಜದ ಕೆಲವು ಗುಂಪುಗಳಿಗೆ ವಿಶೇಷ ಸೌಲಭ್ಯಗಳನ್ನು ಕಲ್ಪಿಸಲು ಅನುವು ಮಾಡಿಕೊಟ್ಟಿದೆ. ಉದಾಹರಣೆಗೆ, 14ನೇ ಅನುಚ್ಛೇದವು ಎಲ್ಲರಿಗೂ ಕಾನೂನಿನಲ್ಲಿ ಸಮಾನ ಮಾನ್ಯತೆ ಹಾಗು ರಕ್ಷಣೆ ನೀಡುತ್ತದೆ; 15ನೇ ಅನುಚ್ಛೇದವು ತಾರತಮ್ಯಗಳ ವಿರುದ್ದ ರಕ್ಷಣೆ ನೀಡುತ್ತದೆ; 16ನೇ ಅನುಚ್ಛೇದವು ಎಲ್ಲರಿಗೂ ಸಮಾನ ಅವಕಾಶ ನೀಡುತ್ತಲೇ, ಕೆಲವೊಂದು ವ್ಯಕ್ತಿಗಳು ಹಾಗು ಗುಂಪುಗಳಿಗೆ ವಿಶೇಷ ಸೌಲಭ್ಯ ಕಲ್ಪಿಸಲು ಅನುವು ಮಾಡಿಕೊಡುತ್ತದೆ; 15(4) ಹಾಗು 16(4) ಅನುಚ್ಛೇದಗಳು ಹಿಂದುಳಿದ ವರ್ಗಗಳಿಗೆ ಶಿಕ್ಷಣದಲ್ಲಿ ಹಾಗು ಸರಕಾರಿ ಉದ್ಯೋಗದಲ್ಲಿ ಮೀಸಲಾತಿ ನೀಡಲು ಅನುಮತಿ ನೀಡುತ್ತದೆ; 17ನೇ ಅನುಚ್ಛೇದವು ಅಸ್ಪೃಶ್ಯತೆಯನ್ನು ರದ್ದು ಪಡಿಸುತ್ತದೆ; 23ನೇ ಅನುಚ್ಛೇದವು ಜೀತಗಾರಿಕೆಯನ್ನು ನಿಷೇಧಿಸುತ್ತದೆ; 24ನೇ ಅನುಚ್ಛೇದವು ಮಕ್ಕಳ ದುಡಿಮೆಯನ್ನು ಅಸಾಂವಿಧಾನಿಕವೆಂದು ಘೋಷಿಸುತ್ತದೆ.

ಸಂವಿಧಾನವು ಪ್ರಜೆಗಳು ಮತ್ತು ಪ್ರಭುತ್ವದ ನಡುವಿನ ಸಂಬಂಧಗಳಲ್ಲಿ ಮದ್ಯವರ್ತಿಯಂತೆ ಇದ್ದು, ಪ್ರಭುತ್ವದ ವಿರುದ್ಧ ಜಾರಿ ಮಾಡಬಹುದಾದಂತಹ ಕೆಲವೊಂದು ಮೂಲಭೂತ ಹಕ್ಕುಗಳನ್ನು ಜನರಿಗೆ ನೀಡುತ್ತದೆ. ಇದನ್ನು ಹಕ್ಕುಗಳ ಲಂಬಾತ್ಮಕ ಅನ್ವಯ ಎನ್ನಲಾಗುತ್ತದೆ. (ವರ್ಟಿಕಲ್ ಅಪ್ಲಿಕೇಷನ್– ಶ್ರೇಣೀಕರಣದಲ್ಲಿ

ಕೆಳಗಿರುವ ಪ್ರಜೆಗಳು ಮೇಲಿರುವ ಪ್ರಭುತ್ವವನ್ನು ಪ್ರಶ್ನಿಸಲು ಇರುವ ಅವಕಾಶ) ನೈಜ ಸಮಾನತೆಯ ಪರಿಕಲ್ಪನೆಯಿಂದ ಆಳವಾಗಿ ಪ್ರಭಾವಿಸಲ್ಪಟ್ಟಿರುವ ಭಾರತ ಸಂವಿಧಾನವು ಇನ್ನೂ ಒಂದು ಹೆಜ್ಜೆ ಮುಂದುವರಿದು, ಮೂಲಭೂತ ಹಕ್ಕುಗಳ ಅನುಸರಣೆಯನ್ನು ಖಾಸಗಿ ಕ್ಷೇತ್ರಕ್ಕೂ ಅನ್ವಯಿಸುತ್ತದೆ. ಇದು ಮೂಲಭೂತ ಹಕ್ಕುಗಳನ್ನು ಸಮತಳವಾಗಿ ವಿಸ್ತರಿಸಲು ಅವಕಾಶ ಕಲ್ಪಿಸುತ್ತದೆ. (ಹಾರಿಜಾಂಟಲ್ ಅಪ್ಲಿಕೇಷನ್– ಪ್ರಭುತ್ವವನ್ನು ಹೊರತುಪಡಿಸಿದರೆ, ಖಾಸಗಿ ಕ್ಷೇತ್ರವೂ ಸೇರಿದಂತೆ ಎಲ್ಲ ಜನಸಮುದಾಯಗಳು, ಸಂಸ್ಥೆಗಳು ಒಂದೇ ನೆಲೆಯಲ್ಲಿ, ಸಮತಳದ ಮೇಲೆ ಸ್ಥಾಪಿತವಾಗಿರುತ್ತವೆ. ಹಾಗೂ ಈ ಎಲ್ಲರೂ ಪರಸ್ಪರರ ಹಕ್ಕುಗಳನ್ನು ಮಾನ್ಯ ಮಾಡುವುದು ಕಡ್ಡಾಯವಾಗಿದೆ.)

ಉದಾಹರಣೆಗೆ, ಅನುಚ್ಛೇದ 15(2)ರಲ್ಲಿ ಸಾರ್ವಜನಿಕ ಸೌಲಭ್ಯಗಳಾದ ಅಂಗಡಿ, ಹೊಟೇಲ್, ಉಪಹಾರ ಗೃಹಗಳು, ಮನೋರಂಜನಾ ಸ್ಥಳಗಳು, ಬಾವಿ–ಕೆರೆಗಳು, ಇತ್ಯಾದಿಗಳನ್ನು ಎಲ್ಲ ನಾಗರಿಕರು ಜಾತಿ, ಧರ್ಮ, ಜನಾಂಗ, ಲಿಂಗ, ಹುಟ್ಟಿದ ಸ್ಥಳ ಮುಂತಾದ ಯಾವುದೆ ತಾರತಮ್ಯವಿಲ್ಲದೆ ಅನುಭವಿಸುವ ಹಕ್ಕನ್ನು ನೀಡಲಾಗಿದೆ. ಖಾಸಗಿ ವ್ಯಕ್ತಿಗಳೂ ಈ ಹಕ್ಕನ್ನು ಮಾನ್ಯ ಮಾಡಬೇಕು. ಒಂದು ವೇಳೆ ನಿರಾಕರಿಸಿದರೆ ಅಥವಾ ಉಲ್ಲಂಘಿಸಿದರೆ ಹಕ್ಕುವಂಚಿತರು ಅವರ ವಿರುದ್ಧ ಕಾನೂನಿನ ಮೊರೆ ಹೋಗಬಹುದು.

ಸಮಾನತೆ ಎನ್ನುವುದು ಭಾರತ ಸಂವಿಧಾನದ ಹೃದಯ ಭಾಗವಿದ್ದಂತೆ. ಸಂವಿಧಾನದಲ್ಲಿ ಒತ್ತಿಹೇಳಿರುವ ಸಮಾನತೆಯನ್ನು ಭಾರತದ ಸಾಮಾನ್ಯ ಜನರು ತಮಗಾದ ಅನ್ಯಾಯಗಳ ವಿರುದ್ಧದ ಹೋರಾಟಗಳಲ್ಲಿ ಬಳಸಿದ್ದಾರೆ. 'ದಿ ಪೀಪಲ್ಸ್ ಕಾನ್‌ಸ್ಟಿಟ್ಯೂಷನ್' ಎನ್ನುವ ತಮ್ಮ ಪುಸ್ತಕದಲ್ಲಿ ಲೇಖಕ ರೋಹಿತ್ ಡೇ ಹೇಳುವಂತೆ, ಸಂವಿಧಾನವು ಜಾರಿಗೆ ಬಂದನಂತರ ಮುಖ್ಯವಾಹಿನಿ ಸಮಾಜದಿಂದ ಅಂಚಿಗೆ ತಳ್ಳಲ್ಪಟ್ಟಿದ್ದ ಲೈಂಗಿಕ ಕಾರ್ಯಕರ್ತರು, ಮಾಂಸ ವ್ಯಾಪಾರಿಗಳು, ಹಾಗೂ ವ್ಯಾಪಾರಸ್ಥರು ತಮ್ಮನ್ನು ಅಸಮಾನವಾಗಿ ಕಾಣುವ ಕಾಯಿದೆ–ಕಾನೂನುಗಳನ್ನು ಪ್ರಶ್ನಿಸಲು ಸಂವಿಧಾನದ ಭಾಷೆಯನ್ನೇ, ಪದಗಳನ್ನೇ ಬಳಕೆಮಾಡಿದರು.

ಸಂವಿಧಾನದ ಈ ಸಮಾನತೆಯ ಆದರ್ಶವನ್ನು ನಾವೀಗ ಲಿಂಗತ್ವ ಸಮಾನತೆಯ ದೃಷ್ಟಿಕೋನದಿಂದ ನೋಡೋಣ.

### 3.8.1 ಕಾನೂನಿನಲ್ಲಿರುವ ಲಿಂಗತ್ವದ ಸಿದ್ಧಮಾದರಿಗಳನ್ನು ಪ್ರಶ್ನಿಸುವುದು.

ಮೇಲೆ ಹೇಳಿದಂತೆ, ಸಮಾನತೆಯ ತತ್ವವು ಪ್ರಭುತ್ವ ಹಾಗು ಸಮಾಜಗಳೆರಡರಲ್ಲೂ ಇರುವ ತಾರತಮ್ಯಗಳ ವಿರುದ್ಧ ಸಮಾನವಾಗಿ

ಅನ್ವಯಿಸುತ್ತದೆ. ಸಮಾಜದಲ್ಲಿ ಇರುವ ಮಹಿಳೆಯರ ಕುರಿತಾದ ಸಿದ್ಧಮಾದರಿಗಳು ಬರಬರುತ್ತಾ ಕಾನೂನುಬದ್ಧ ಆಗುವುದರಿಂದ ಮಹಿಳೆಯರು ಲಿಂಗಾಧಾರಿತ ತಾರತಮ್ಯಗಳನ್ನು ಎದುರಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಲಿಂಗತ್ವ ಸಮಾನತೆಯನ್ನು ಸರ್ವೋಚ್ಚ ನ್ಯಾಯಾಲಯವು ಹೇಗೆ ನಿರ್ವಚನ ಮಾಡಿದೆ ಎನ್ನುವುದನ್ನು ಇಲ್ಲಿ ಗಮನಿಸೋಣ.

ಲಿಂಗಾಧಾರಿತ ಸಿದ್ಧಮಾದರಿಗಳು ಸಮಾನತೆಯ ತತ್ವಗಳನ್ನು ಹೇಗೆ ಉಲ್ಲಂಘಿಸುತ್ತವೆ ಎನ್ನುವುದನ್ನು ಸರ್ವೋಚ್ಚ ನ್ಯಾಯಾಲಯವು *'ಅನುಜ್ ಗರ್ಗ್ ವರ್ಸಸ್ ಹೋಟೇಲ್ ಅಸೋಶಿಯೇಶನ್ ಆಫ್ ಇಂಡಿಯ' ಪ್ರಕರಣದಲ್ಲಿ ಮೊದಲ ಬಾರಿಗೆ ಎತ್ತಿತೋರಿಸಿತು.*[68] ಮಾದಕ ಪಾನೀಯ ಅಥವಾ ಅಮಲು ಬರುವ ವಸ್ತುಗಳನ್ನು ಸೇವಿಸುವ ಯಾವುದೇ ಸ್ಥಳಗಳಲ್ಲಿ 25 ವರ್ಷದ ಒಳಗಿನ ಪುರುಷರನ್ನು ಮತ್ತು ಯಾವುದೇ ವಯಸ್ಸಿನ ಮಹಿಳೆಯರನ್ನು ನೇಮಕ ಮಾಡಬಾರದು ಎನ್ನುವ ಪಂಜಾಬ್ ಅಬಕಾರಿ ಕಾಯಿದೆಯ ಕಲಂ 30ರ ಸಾಂವಿಧಾನಿಕ ಸಿಂಧುತ್ವವನ್ನು ಈ ಪ್ರಕರಣದಲ್ಲಿ ಪ್ರಶ್ನಿಸಲಾಯಿತು.

ಮೇಲ್ನೋಟಕ್ಕೆ ಇದು ಮಹಿಳೆಯರ ಸುರಕ್ಷತೆಗಾಗಿ ಮಾಡಿರುವ ನಿಯಮದಂತೆ ಕಂಡುಬಂದರೂ, ಇದು ಪುರುಷ ಪ್ರಧಾನ ಸಮಾಜವು ಮಹಿಳೆಯ ಬಗ್ಗೆ ತೋರುವ 'ವೈಭವೀಕೃತ ಪಿತೃತ್ವ'ವನ್ನು ಬಿಂಬಿಸುತ್ತದೆ ಎಂದಿತು ಸರ್ವೋಚ್ಚ ನ್ಯಾಯಾಲಯ. ತನ್ನ ಅಭಿಪ್ರಾಯವನ್ನು ದೃಢೀಕರಿಸಲು ನ್ಯಾಯಾಲಯವು ಅಮೇರಿಕದ ಸರ್ವೋಚ್ಚ ನ್ಯಾಯಾಲಯದ ತೀರ್ಪೊಂದನ್ನು ಉದಾಹರಣೆಯಾಗಿ ನೀಡಿತು:

> *ಮಹಿಳೆಯರ ವಿರುದ್ಧದ ತಾರತಮ್ಯಗಳನ್ನು ಲಾಗಾಯ್ತಿನಿಂದಲೂ 'ವೈಭವೀಕೃತ ಪಿತೃತ್ವ' ಧೋರಣೆಯ ಹಿನ್ನೆಲೆಯಲ್ಲಿ ಸಮರ್ಥಿಸಲಾಗುತ್ತದೆ. ವಾಸ್ತವವಾಗಿ ಈ ಧೋರಣೆಯು ಮಹಿಳೆಯರನ್ನು ಎತ್ತರಕ್ಕೆ ಏರಿಸದೆ ಪಂಜರಕ್ಕೆ ದೂಡುತ್ತದೆ. ಇಂಥಹ ಆಲೋಚನೆಗಳ ಪ್ರಭಾವದಿಂದ ನಮ್ಮ ಕಾನೂನು ಪುಸ್ತಕಗಳು ಕ್ರಮೇಣವಾಗಿ ಲಿಂಗಾಧಾರಿತ ವ್ಯತ್ಯಾಸಗಳನ್ನು ಪೋಷಿಸುವ ಸಿದ್ಧಮಾದರಿ ನಿಯಮಗಳಿಂದ ತುಂಬಿಹೋಗುತ್ತವೆ.*

'ಅನುಜ್ ಗರ್ಗ್' ಪ್ರಕರಣದಲ್ಲಿ, ನ್ಯಾಯಾಲಯವು ಆ ನಿಬಂಧನೆಯನ್ನು ರದ್ದುಪಡಿಸಿತು. *'ಪ್ರಸ್ತುತ ಕಾಯಿದೆಯು ಸಂರಕ್ಷಣೆಯ ಹೆಸರಿನಲ್ಲಿ ವ್ಯಕ್ತಿಯನ್ನು ಬಲಿಪಶುವನ್ನಾಗಿಸುತ್ತದೆ'* ಎಂದಿತು. *'ಈ ಕಾಯಿದೆಯು ಸಿದ್ಧಮಾದರಿಯ ನೈತಿಕತೆ ಮತ್ತು ಲಿಂಗಾಧಾರಿತ ಪಾತ್ರಗಳನ್ನು ಪೋಷಿಸುತ್ತದೆ. ಗುಣಪಡಿಸಲಾಗದಂತಹ*

*ಧೋರಣೆಯಿಂದ ಬಳಲುತ್ತಿರುವ ಈ ಕಾಯಿದೆಯು ಮಹಿಳೆಯರ ವಿರುದ್ಧ ತಾರತಮ್ಯವನ್ನು ಎಸಗುತ್ತದೆ'* ಎಂದಿತು.

ಅದೇ ರೀತಿಯಲ್ಲಿ, *'ಜೋಸೆಫ್ ಶೈನ್ ವರ್ಸಸ್ ಭಾರತ ಸರ್ಕಾರ'*[69] ಪ್ರಕರಣದಲ್ಲಿ ವಿವಾಹೇತರ ಸಂಬಂಧವನ್ನು ಅಪರಾಧವೆಂದು ಪರಿಗಣಿಸಿದ್ದ ಭಾರತೀಯ ದಂಡ ಸಂಹಿತೆಯ ಕಲಂ 497ನ್ನು[70] ನ್ಯಾಯಾಲಯ ರದ್ದುಪಡಿಸಿತು. ಈ ನಿಬಂಧನೆಯು, ಯಾವುದೇ ಗಂಡಸು ಮತ್ತೊಬ್ಬನ ಹೆಂಡತಿಯೊಂದಿಗೆ ಮಾಡಿದ ವಿವಾಹೇತರ ಸಂಬಂಧವನ್ನು ಅಪರಾಧವೆಂದು ಪರಿಗಣಿಸಿ ಅದರಲ್ಲಿ ಭಾಗವಹಿಸಿದ ಹೆಣ್ಣನ್ನು ಆರೋಪದಿಂದ ಮುಕ್ತಮಾಡಿತ್ತು. ಇದು ಗಂಡನ್ನು ಮಾತ್ರ ಅಪರಾಧಿಯೆಂದು ಘೋಷಿಸಿ ಹೆಣ್ಣನ್ನು ಆರೋಪಮುಕ್ತಗೊಳಿಸುವುದರಿಂದ ಮೇಲು ನೋಟಕ್ಕೆ ಇದು ಹೆಣ್ಣಿನ ರಕ್ಷಣೆಗಾಗಿ ಇರುವ ಕಾಯಿದೆ ಎನಿಸುತ್ತದೆ. ಆದರೆ 1860ರಷ್ಟು ಹಳೆಯದಾದ ಈ ಕಾಯಿದೆಯನ್ನು ರಚನೆ ಮಾಡಿದ ಸಂದರ್ಭ ಮತ್ತು ಐತಿಹಾಸಿಕ ಕಾರಣಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿದ ನ್ಯಾಯಮೂರ್ತಿಗಳು, ಬ್ರಿಟಿಷರು ಮಾಡಿದ ಈ ಕಾನೂನು ಆ ಕಾಲದಲ್ಲಿ ಆ ಸಮಾಜದಲ್ಲಿ ಮಹಿಳೆಯರ ಬಗ್ಗೆ ಇದ್ದ ಅಭಿಪ್ರಾಯವನ್ನು ಸೂಚಿಸುತ್ತದೆ. ಮದುವೆಯಾದ ಹೆಣ್ಣು ಗಂಡನ ಆಸ್ತಿ, ಸ್ವತ್ತು ಎಂಬ ಅಭಿಪ್ರಾಯ ಆಗ ಚಾಲ್ತಿಯಲ್ಲಿತ್ತು. ಮದುವೆಯಾದ ಹೆಣ್ಣಿನೊಂದಿಗೆ ಸಂಬಂಧ ಹೊಂದುವುದು ಎಂದರೆ ಗಂಡನ ಆಸ್ತಿಯ ಮೇಲೆ ಅತಿಕ್ರಮ ಮಾಡಿದಂತೆ ಎಂದು ಆಗ ಪರಿಗಣಿಸಲಾಗುತ್ತಿತ್ತು. ಹಾಗಾಗಿ ಸಂಬಂಧ ಮಾಡಿದ ವ್ಯಕ್ತಿಯನ್ನು ಅಪರಾಧಿ ಎಂದು ಪರಿಗಣಿಸಲಾಗಿತ್ತು. ಹೆಂಡತಿಯು ಗಂಡನ ಸ್ವತ್ತಾದ್ದರಿಂದ, ಅವಳಿಗೆ ಲೈಂಗಿಕ ಸಂಬಂಧಗಳ ವಿಷಯದಲ್ಲಿ ಆಯ್ಕೆಯ ಅವಕಾಶವೇ ಇರಲಿಲ್ಲ, ಎಂದರು. ಭಾರತೀಯ ದಂಡ ಸಂಹಿತೆಯ ಕಲಂ 497ನ್ನು ರದ್ದುಪಡಿಸಿದ ನ್ಯಾಯಾಲಯವು ಹೀಗೆ ಹೇಳಿತು:

> *'ಹೆಣ್ಣಿನ ಪವಿತ್ರತೆ ಮತ್ತು ಹೆಂಡತಿಯ ಮೇಲಿನ ಲೈಂಗಿಕ ಹಕ್ಕು ಗಂಡನಾದವನಿಗೆ ಮಾತ್ರ ಮೀಸಲಾಗಿದ್ದು ಎನ್ನುವಂತಹ ಆಚರಣೆಗಳು 19ನೆ ಶತಮಾನದ ಸಾಮಾಜಿಕ ಮತ್ತು ಲೈಂಗಿಕ ಶಿಷ್ಟಾಚಾರವನ್ನು ಪ್ರತಿಬಿಂಬಿಸುತ್ತವೆ. ಈಗಿನ ಕಾಲಕ್ಕೆ ಅವು ತಕ್ಕುದಾಗಿಲ್ಲ. ದೇಶದ ಕಾನೂನನ್ನು ಸಾಂವಿಧಾನಿಕ ನೈತಿಕತೆ ನಿರ್ದೇಶಿಸಬೇಕಲ್ಲದೇ, ಪ್ರಭುತ್ವದ 'ಸಾಮಾನ್ಯ ನೈತಿಕತೆ' ಅಲ್ಲ. ಸಾಂವಿಧಾನಿಕ ನೈತಿಕತೆಯು, ಯಾವುದೇ ಪ್ರಜಾಪ್ರಭುತ್ವದಲ್ಲಿ ಎಲ್ಲಾ ನಾಗರೀಕರೂ ಸ್ವತಂತ್ರವಾಗಿ, ಸಮಾನತೆಯಿಂದ, ಘನತೆಯ ಜೀವನ ನಡೆಸಲು ಅತ್ಯಗತ್ಯವಾಗಿ ಬೇಕಾದ ಕೆಲವೊಂದು ನಿರ್ದಿಷ್ಟ ಹಕ್ಕುಗಳನ್ನು ಅವಲಂಬಿಸಿರುತ್ತದೆ.*

*ವಿವಾಹೇತರ ಸಂಬಂಧವನ್ನು ಅಪರಾಧವನ್ನಾಗಿಸುವ ಕಲಂ 497, ತನ್ನ ಲೈಂಗಿಕತೆಗೆ ಸಂಬಂಧಪಟ್ಟಂತೆ ಸ್ವತಂತ್ರವಾಗಿ ನಿರ್ಧಾರ ಕೈಗೊಳ್ಳುವ ಅವಕಾಶದಿಂದ ಮಹಿಳೆಯರನ್ನು ವಂಚಿಸುತ್ತದೆ. ವೈವಾಹಿಕ ಸಂಬಂಧದಲ್ಲಿ ಹೆಂಡತಿಯು ಮತ್ತೊಬ್ಬ ವ್ಯಕ್ತಿಯೊಂದಿಗೆ ಲೈಂಗಿಕ ಸಂಬಂಧ ಹೊಂದುವ ಬಗ್ಗೆ ಗಂಡನಾದವನು ಮಾತ್ರ ತೀರ್ಮಾನ ಕೈಗೊಳ್ಳಲು ಸಾಧ್ಯ ಎನ್ನುತ್ತದೆ. ಹೆಣ್ಣಿನ ಲೈಂಗಿಕ ಸ್ವಾಯತ್ತತೆಯನ್ನು ನಿರ್ಲಕ್ಷಿಸುವ ಈ ನಿಬಂಧನೆಯು ಅವಳ ಅಸ್ತಿತ್ವಕ್ಕೆ ಈ ಷರತ್ತು ಅಗತ್ಯ ಎಂದು ಭಾವಿಸುತ್ತದೆ. ಸಮಾನ ನೆಲೆಯ ಸಂಬಂಧದಲ್ಲಿ ಸಮಾನ ಭಾಗೀದಾರಳಾಗಬೇಕಾದ ಹೆಣ್ಣನ್ನು ಅವಳ ಸಂಗಾತಿಯ ಇಷ್ಟಾನಿಷ್ಟಗಳ ನಿಯಂತ್ರಣಕ್ಕೆ ಒಳಪಡಿಸುತ್ತದೆ... ವೈವಾಹಿಕ ಸಂಬಂಧದಲ್ಲಿ ತನ್ನ ಆಯ್ಕೆಗಳನ್ನು ಮಾಡುವ ಹಾಗೂ ಆ ಕುರಿತು ತೀರ್ಮಾನಗಳನ್ನು ಕೈಗೊಳ್ಳುವ ಅವಕಾಶವು ಪ್ರತಿಯೊಬ್ಬ ವ್ಯಕ್ತಿಗೂ ಇರಬೇಕು. ಇದು ವ್ಯಕ್ತಿ ಸ್ವಾತಂತ್ರ ಮತ್ತು ಘನತೆಗೆ ಸಂಬಂಧಿಸಿದ್ದಾಗಿದ್ದು ಇದಕ್ಕೆ ಸಂವಿಧಾನದ ರಕ್ಷಣೆ ಇರುತ್ತದೆ. ಹೆಣ್ಣಿನ ಈ ಸಾಮರ್ಥ್ಯವನ್ನು ಕಡೆಗಣಿಸಿ ಗಂಡಿಗೆ ಮಾತ್ರ ಆಯ್ಕೆಯ ಅವಕಾಶವನ್ನು ಒದಗಿಸುವ ಈ ಕಲಂ 497, ವೈವಾಹಿಕ ಸಂಬಂಧದಲ್ಲಿ ನೈಜ ಸಮಾನತೆಯನ್ನು ಅನ್ವಯಿಸಲು ವಿಫಲಗೊಂಡಿದೆ.*[71]

ಅನುಜ್ ಗರ್ಗ್ ಮತ್ತು ಜೋಸೆಫ್ ಶೈನ್ ಅವರ ಈ ಎರಡು ಪ್ರಕರಣಗಳು, ಸಂವಿಧಾನದತ್ತವಾದ ನೈಜ ಸಮಾನತೆಯ ಪರಿಕಲ್ಪನೆಯನ್ನು ಮುಂದಕ್ಕೆ ಕೊಂಡೊಯ್ಯುವಲ್ಲಿ ನ್ಯಾಯಾಲಯದ ಪಾತ್ರವನ್ನು ಸಾಕಾರಗೊಳಿಸಿವೆ. ಅದೇ ರೀತಿ 'ನವತೇಜ್ ಸಿಂಗ್ ಜೊಹರ್ ಪ್ರಕರಣದಲ್ಲಿ, ಕಲಂ 377 ಲೈಂಗಿಕ ಅಲ್ಪಸಂಖ್ಯಾತರ ವಿಷಯದಲ್ಲಿ ಮತ್ತದೇ ಸಿದ್ಧಮಾದರಿಗಳನ್ನು ಮುಂದುವರೆಸುತ್ತದೆ ಎಂದು ಸರ್ವೋಚ್ಚ ನ್ಯಾಯಾಲಯವು ಖಂಡಿಸಿದೆ.[72]

ಕಾನೂನಿನ ಕ್ಷೇತ್ರದಲ್ಲಿ ಆಗುತ್ತಿರುವ ಈ ಎಲ್ಲಾ ಬೆಳವಣಿಗೆಗಳ ಮೂಲವನ್ನು ಸಂವಿಧಾನದ ಪೀಠಿಕೆಯಲ್ಲಿರುವ ಸಮಾನತೆಯ ಪರಿಕಲ್ಪನೆಯಲ್ಲಿ ಕಾಣಬಹುದು. ಹಾಗು ಅದಕ್ಕೂ ಮುನ್ನ ನಡೆದ, ಯಾವುದೇ ತಾರತಮ್ಯಗಳಿಲ್ಲದೆ ಎಲ್ಲರಿಗೂ ಸಂಪೂರ್ಣ ಸಮಾನತೆಯನ್ನು ಗಳಿಸಿಕೊಡುವ ಉದ್ದೇಶವಿದ್ದ, ಸ್ವಾತಂತ್ರ್ಯ ಹೋರಾಟದಲ್ಲಿಯೂ ಇದರ ಬೇರುಗಳನ್ನು ಕಾಣಬಹುದು.

●

# 4

# ಬಂಧುತ್ವ

ಸಂವಿಧಾನದ ಪೀಠಿಕೆಯಲ್ಲಿರುವ ಬಂಧುತ್ವ ಮತ್ತು ವ್ಯಕ್ತಿಗೌರವಗಳ ಪರಿಕಲ್ಪನೆಗಳು ಅಂಬೇಡ್ಕರ್ ಅವರ ಬಹು ಮುಖ್ಯ ಕೊಡುಗೆ ಎನ್ನುತ್ತಾರೆ ಆಕಾಶ ಸಿಂಗ್ ರಾಥೋರ್, ತಮ್ಮ *'ಅಂಬೇಡ್ಕರ್ಸ್ ಪ್ರಿಯಾಂಬಲ್'* [73] ಎಂಬ ಪುಸ್ತಕದಲ್ಲಿ. ಈ ಎರಡೂ ಪರಿಕಲ್ಪನೆಗಳು ಪೀಠಿಕೆ ಕುರಿತು ಮಂಡಿಸಿದ ಟಿಪ್ಪಣಿಗಳಾದ ಪೂರ್ಣ ಸ್ವರಾಜ್ಯ ಗೊತ್ತುವಳಿ, 1946ರ ಪರಿಣಿತರ ಸಮಿತಿಯ ಘೋಷಣೆ ಹಾಗೂ ಧ್ಯೇಯೋದ್ದೇಶ ಗೊತ್ತುವಳಿಯಲ್ಲಿ ಇರಲಿಲ್ಲ ಎನ್ನುವುದು ಗಮನಾರ್ಹವಾಗಿದೆ.

ಅಂಬೇಡ್ಕರ್‌ಗೆ ಬಂಧುತ್ವ ಯಾಕೆ ಮುಖ್ಯವಾಗಿತ್ತು? ಪ್ರಾಯಶಃ, ಅನಾದರ, ಪ್ರತ್ಯೇಕತೆಗಳ ಕಾರಣ ಅವರು ಬಾಲ್ಯದಲ್ಲಿ ಅನುಭವಿಸಿದ ಸಾಮಾಜಿಕ ತಾರತಮ್ಯಗಳು ಇದಕ್ಕೆ ಕಾರಣವಿರಬಹುದು. *'ವೇಯ್ಟಿಂಗ್ ಫಾರ್ ವೀಸ'* [74] ಎಂಬ ಕೃತಿಯಲ್ಲಿ ಅಂಬೇಡ್ಕರ್ ತಾವು ಅನುಭವಿಸಿದ ಜಾತಿ ತಾರತಮ್ಯಗಳನ್ನು ವಿವರಿಸುತ್ತಾರೆ. ಅವರು ಅಸ್ಪೃಶ್ಯರಾಗಿದ್ದ ಕಾರಣ ಶಾಲೆಯಲ್ಲಿ ಇತರ ಮಕ್ಕಳಿಂದ ಪ್ರತ್ಯೇಕವಾಗಿ ತಾವೇ ಮನೆಯಿಂದ ತಂದ ಗೋಣಿಚೀಲವನ್ನು ಹಾಸಿಕೊಂಡು ಕುಳಿತುಕೊಳ್ಳಬೇಕಿತ್ತು. ಬಾಯಾರಿಕೆಯಾದರೆ ಸ್ವತಃ ನಳದಿಂದ ನೀರು ಬಿಟ್ಟುಕೊಂಡು ಕುಡಿಯುವಂತಿರಲಿಲ್ಲ. ಶಾಲೆಯ ಜವಾನ ಬಂದು ನೀರು ಬಿಡಬೇಕಿತ್ತು. ಕೋರೆಗಾಂವ್‌ದಲ್ಲಿದ್ದ ಅವರ ತಂದೆಯನ್ನು ಭೇಟಿ ಮಾಡಲು ಹೊರಟ ಅಂಬೇಡ್ಕರ್ ಮತ್ತು ಅವರ

ಮೂವರು ಸಹೋದರರರನ್ನು ಕರೆದೊಯ್ಯಲು ಕುದುರೆಗಾಡಿಯವರು ನಿರಾಕರಿಸುವ ಪ್ರಸಂಗವನ್ನೂ ಅವರು ವಿವರಿಸಿದ್ದಾರೆ. ನೀಚ ಜಾತಿಯ ಇವರನ್ನು ತಮ್ಮ ಗಾಡಿಯಲ್ಲಿ ಕರೆದೊಯ್ದರೆ ತಾವು ಅಶುದ್ಧವಾಗಬಹುದು ಮತ್ತು ಸಮಾಜದ ಇತರರ ಕೆಂಗಣ್ಣಿಗೆ ಗುರಿಯಾಗಬಹುದು ಎಂದು ಗಾಡಿಯವರು ಯೋಚಿಸುತ್ತಾರೆ.[75]

ಈ ಹಿನ್ನೆಲೆಯಲ್ಲಿ ಅವರು ಬಂಧುತ್ವದ ಪರಿಕಲ್ಪನೆಯನ್ನು ಮುಂದಿಡುತ್ತಾರೆ. ಹಿಂದು ಸಮಾಜದಲ್ಲಿ ಅನುಸರಿಸುತ್ತಿದ್ದ, ಸ್ವತಃ ತಾವೂ ಅನುಭವಿಸಿದ, ಸಾಮಾಜಿಕ ಬಹಿಷ್ಕಾರ (ವರ್ಣಭೇದ) ಪದ್ಧತಿಗೆ ಪ್ರತಿಯಾಗಿ ಬಂಧುತ್ವ ತತ್ವವನ್ನು ಮುಂದಿಡುತ್ತಾರೆ. ಈ ಮೂಲಕ ಆಳವಾದ ಪ್ರೀತಿ, ಅನುಕಂಪ, ಪರಾನುಭೂತಿ, ಪರಸ್ಪರ ಗೌರವ ಹಾಗೂ ಸಾಮಾಜಿಕ ಐಕ್ಯಮತವನ್ನು ಸಾಧಿಸಬಹುದೆಂಬುದು ಅವರ ಆಶಯವಾಗಿತ್ತು.

ಅಂಬೇಡ್ಕರ್ ಅವರು ಸಂವಿಧಾನ ಸಭೆಯಲ್ಲಿ ಸ್ವಾತಂತ್ರ್ಯ ಮತ್ತು ಸಮಾನತೆಗಳ ನಡುವಿನ ಸಂಬಂಧವನ್ನು ಬಂಧುತ್ವದ ಮಸೂರದ ಮೂಲಕ ವಿಶ್ಲೇಷಿಸುತ್ತಾರೆ.

> *'ಸ್ವಾತಂತ್ರ್ಯ, ಸಮಾನತೆ ಮತ್ತು ಬಂಧುತ್ವದ ಈ ತ್ರಿದಳ ಅಂಶಗಳನ್ನು ಪ್ರತ್ಯೇಕಿಸಿ ಬೇರೆ ಬೇರೆಯಾಗಿ ನೋಡಬಾರದು. ಈ ಮೂರೂ ಅಂಶಗಳು ತ್ರಿದಳದಲ್ಲಿ ಏಕೀಭವಗೊಂಡಿದ್ದು, ಇವುಗಳನ್ನು ಪ್ರತ್ಯೇಕಿಸಿದರೆ ಪ್ರಜಾಪ್ರಭುತ್ವದ ಉದ್ದೇಶವೇ ವಿಫಲಗೊಳ್ಳುತ್ತದೆ. ಸ್ವಾತಂತ್ರ್ಯವನ್ನು ಸಮಾನತೆಯಿಂದ ವಿಚ್ಛೇದಿಸಲಾಗದು, ಹಾಗೆಯೇ ಸಮಾನತೆಯನ್ನು ಸ್ವಾತಂತ್ರ್ಯದಿಂದ ಬೇರ್ಪಡಿಸಲಾಗದು. ಇವೆರಡನ್ನೂ ಬಂಧುತ್ವದಿಂದ ಬೇರೆ ಮಾಡಲಾಗದು. ಸಮಾನತೆ ಇಲ್ಲದ ಸ್ವಾತಂತ್ರ್ಯವು ಬಹುಸಂಖ್ಯಾತ ಜನರ ಮೇಲೆ ಕೆಲವೇ ಜನರ ಅಧಿಕಾರ ಹೇರಿಕೆಗೆ ಕಾರಣವಾಗುತ್ತದೆ. ಸ್ವಾತಂತ್ರ್ಯವಿಲ್ಲದ ಸಮಾನತೆಯು ವೈಯಕ್ತಿಕತೆಯನ್ನು ನಾಶಮಾಡುತ್ತದೆ. ಬಂಧುತ್ವವಿಲ್ಲದ ಸ್ವಾತಂತ್ರ್ಯ ಮತ್ತು ಸಮಾನತೆಗಳು ಸಹಜ ನಡವಳಿಕೆಯಾಗಿ ರೂಪುಗೊಳ್ಳಲು ಸಾಧ್ಯವಿಲ್ಲ. ಆಗ ಅವುಗಳನ್ನು ಅನುಷ್ಠಾನಗೊಳಿಸಲು ಒಬ್ಬ ಚೌಕೀದಾರನ ಅವಶ್ಯಕತೆ ಬೀಳುತ್ತದೆ.*[76]

ಇಲ್ಲಿ ಅಂಬೇಡ್ಕರರು ಬಂಧುತ್ವದ ಬಗ್ಗೆ ನೀಡುವ ಒಳನೋಟ ಬಹಳ ಮುಖ್ಯವಾದುದು. ಅವರ ಪ್ರಕಾರ, ಬಂಧುತ್ವವು ಜೀವನ ವಿಧಾನವಾಗಿ ಅಳವಡಿಕೆಯಾದಾಗ ಮಾತ್ರವೇ ಸ್ವಾತಂತ್ರ್ಯ ಮತ್ತು ಸಮಾನತೆಗಳ ಅನುಷ್ಠಾನದಲ್ಲಿ ಎದುರಾಗುವ ಸಂಘರ್ಷಗಳನ್ನು ಪರಿಹರಿಸಲು ಸಾಧ್ಯ. ಆದರೆ ಮೊದಲಿಂದಲೂ ಬಂಧುತ್ವದ ಪರಿಕಲ್ಪನೆಯು ನಿರ್ಲಕ್ಷ್ಯದ ಕಹಿಯನ್ನೇ ಅನುಭವಿಸುತ್ತಾ

ಬಂದಿದೆ. ಪೀಠಿಕೆಯಲ್ಲಿ ಬರುವ ವಿವಿಧ ಪರಿಕಲ್ಪನೆಗಳಲ್ಲಿ ಬಂಧುತ್ವವು ಅತಿ ಕಡಿಮೆ ಚರ್ಚೆಗೆ ಒಳಗಾದ ವಿಷಯವೂ ಆಗಿದೆ. ವಾಸ್ತವವಾಗಿ ಸಂವಿಧಾನ ಸಭೆಯಲ್ಲಿ ಜವಹರಲಾಲ್ ನೆಹರು ಅವರು ಮಂಡಿಸಿದ ಧ್ಯೇಯೋದ್ದೇಶ ಗೊತ್ತುವಳಿಯಲ್ಲಿಯೂ *'ಬಂಧುತ್ವದ'* ವಿಷಯವನ್ನು ಕೈಬಿಡಲಾಗಿತ್ತು.[77] ಇದು ಮತ್ತೆ ಮುನ್ನೆಲೆಗೆ ಬರಲು ಅಂಬೇಡ್ಕರ್ ಅವರ ಸತತ ಪ್ರಯತ್ನವೇ ಕಾರಣ. ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರಾಗಿ ಇದನ್ನು ಪ್ರಮುಖವಾಗಿ ಪೀಠಿಕೆಯ ಬರಹದಲ್ಲಿ ಸೇರಿಸಿದರು. ಬಂಧುತ್ವವು ಯಾಕೆ ತ್ರಿದಳದ ಬಹುಮುಖ್ಯ ಅಂಶವಾಗುತ್ತದೆ ಎಂಬುದನ್ನು ವಿಶದವಾಗಿ ವಿವರಿಸಿದರು.

> *ಬಂಧುತ್ವ ಎಂದರೆ ಎಲ್ಲಾ ಭಾರತೀಯರು ಸಹಜವಾಗಿ ಪರಸ್ಪರ ಒಡನಾಡುವುದು. ಈ ತತ್ವವು ಸಾಮಾಜಿಕ ಜೀವನಕ್ಕೆ ಒಗ್ಗಟ್ಟನ್ನೂ, ಗಟ್ಟಿತನವನ್ನೂ ತಂದುಕೊಡುತ್ತದೆ. ಇದನ್ನು ಸಾಧಿಸುವುದು ಕಷ್ಟದ ಕೆಲಸ... (ಯಾಕೆಂದರೆ) ಭಾರತದಲ್ಲಿ ಅನೇಕ ಜಾತಿಗಳಿವೆ. ಈ ಜಾತಿಗಳು ದೇಶದ್ರೋಹಿಗಳು. ಏಕೆಂದರೆ, ಮೊದಲನೆಯದಾಗಿ ಅವು ಸಾಮಾಜಿಕ ಜೀವನದಲ್ಲಿ ವಿಭಜನೆಯನ್ನು ಉಂಟುಮಾಡುತ್ತವೆ. ಎರಡನೆಯದಾಗಿ, ಅವು ಜಾತಿ ಜಾತಿಗಳ ನಡುವೆ ದ್ವೇಷ ಮತ್ತು ಅಸೂಯೆಯನ್ನು ಹುಟ್ಟುಹಾಕುತ್ತವೆ. ಆದರೆ ನಿಜವಾದ ಅರ್ಥದಲ್ಲಿ ನಾವು ಒಂದು ದೇಶವಾಗಬೇಕಾದರೆ ಈ ಎಲ್ಲಾ ಕಷ್ಟಗಳನ್ನು ಮೀರಲೇಬೇಕು. ಒಂದು ದೇಶವಿದ್ದಾಗಲೇ ಬಂಧುತ್ವವು ವಾಸ್ತವತೆಗೆ ಬರುವುದು. ಪರಸ್ಪರ ಬಂಧುತ್ವದ ಭಾವನೆ ಇಲ್ಲದೆ ಹೋದರೆ ಸಮಾನತೆ ಮತ್ತು ಸ್ವಾತಂತ್ರ್ಯ ಎನ್ನುವುದು ಗೋಡೆಗೆ ಹಚ್ಚಿದ ಮೇಲು ಪದರದ ಬಣ್ಣದಂತೆ ಇರುತ್ತದೆಯೇ ಹೊರತು, ಜನಮಾನಸದ ಆಳಕ್ಕೆ ಇಳಿಯುವುದಿಲ್ಲ.*[78]

ಬಂಧುತ್ವದ ಮೌಲ್ಯವನ್ನು ಮುನ್ನಡೆಸುವುದು, ವಿಸ್ತರಿಸುವುದು ಹಾಗೂ ಅಳವಡಿಸುವುದು ಹೇಗೆ ಎನ್ನುವುದೇ ಒಂದು ದೊಡ್ಡ ಸವಾಲು. ಬಂಧುತ್ವವು ಜೀವನ ವಿಧಾನವಾಗುವಂತಹ ಸಂಸ್ಕೃತಿಯನ್ನು, ಪರಿಸರವನ್ನು ಕಾನೂನುಗಳು ನಿರ್ಮಿಸಲು ಸಾಧ್ಯವೆ? ಜಾತಿ ಜಾತಿಗಳ ನಡುವೆ ಇರುವ ಭೇದಭಾವದ ಭಾವನೆಗಳು ಕರಗಿಹೋಗಿ ಸಹಬಾಳ್ವೆ ನಡೆಸುವಂತಹ ಸಂಬಂಧವನ್ನು ಬೆಳೆಸುವುದು ಹೇಗೆ? ಬಂಧುತ್ವವನ್ನು ಜೀವನ ವಿಧಾನವಾಗಿ, ದೇಶದ ಲಕ್ಷಣವಾಗಿ ರೂಪಿಸಬೇಕೆಂದರೆ ನಾವು ಕಾನೂನಿನ ಆಚೆಗೆ ಆಲೋಚಿಸಬೇಕು. ನಮ್ಮ ಪ್ರಯತ್ನಗಳು ಕಾನೂನಿನ ಚೌಕಟ್ಟಿಗೂ ಮಿಗಿಲಾಗಿರಬೇಕು.

*'ಅಸ್ಪೃಶ್ಯರಿಗೆ ಕಾಂಗ್ರೆಸ್ ಮತ್ತು ಗಾಂಧಿ ಮಾಡಿದ್ದೇನು?'* ಎಂಬ ಲೇಖನದಲ್ಲಿ ಡಾ. ಅಂಬೇಡ್ಕರರು ಸಾಮಾಜಿಕ ಬದಲಾವಣೆಯ ಹೋರಾಟವು ಕಾನೂನಿನ ಹೊರಗೆ ಕಂಡುಕೊಳ್ಳಬೇಕಾದ ಸಾಮಾಜಿಕ ಅವಕಾಶಗಳ ಕಡೆಗೆ ಬೆರಳು ಮಾಡುತ್ತಾರೆ. *'ಅಸ್ಪೃಶ್ಯತೆ ನಿವಾರಣೆ ಸಂಸ್ಥೆ'*ಯ ಕರ್ತವ್ಯಗಳ ಕುರಿತು ಗಾಂಧಿ ಅವರು ನೀಡಿದ ಸೂಚನೆಗಳನ್ನು ಪ್ರಸ್ತಾಪಿಸುವ ಅಂಬೇಡ್ಕರ್, ಸಾಮಾಜಿಕ ಒಡನಾಟದ ಮೂಲಕ ಇದನ್ನು ಸಾಧಿಸಬೇಕು ಎನ್ನುತ್ತಾರೆ.

> *ಈ ಸಂಸ್ಥೆಯು ಸ್ಪೃಶ್ಯರು ಅಸ್ಪೃಶ್ಯರ ಬಗ್ಗೆ ಹೊಂದಿರುವ ಅಸ್ವಸ್ಥ ಭಾವನೆಯನ್ನು ತೊಡೆದುಹಾಕಲು ಪ್ರಯತ್ನಿಸಬೇಕು. ಅಂತಹ ಭಾವನೆಯಿಂದಾಗಿಯೇ ಎರಡೂ ಸಮುದಾಯಗಳು ಪರಸ್ಪರ ದೂರವಾಗಿದ್ದು, ಸಂಬಂಧವೇ ಇಲ್ಲದ ಪ್ರತ್ಯೇಕ ಸಮುದಾಯಗಳಂತೆ ಬದುಕುತ್ತಿವೆ. ಈ ಎರಡು ಸಮುದಾಯಗಳ ನಡುವೆ ಸಾಮೀಪ್ಯವನ್ನು ತರಬೇಕು. ಆಗಾಗ ಪರಸ್ಪರ ಒಡನಾಡುವಂತಹ ಸಂದರ್ಭಗಳನ್ನು ಸೃಷ್ಟಿಸುತ್ತಿದ್ದರೆ ಮಾತ್ರ ಇವರು ಪರಸ್ಪರರ ಬಗ್ಗೆ ಹೊಂದಿರುವ ಗೊಂದಲದ ಭಾವನೆಗಳಿಂದ ಮುಕ್ತರಾಗಲು ಸಾಧ್ಯವಾಗುತ್ತದೆ.*[79]

ಸ್ಪೃಶ್ಯರು ಮತ್ತು ಅಸ್ಪೃಶ್ಯರನ್ನು ಒಟ್ಟಿಗೆ ತರಲು ಕಾನೂನಿಗೆ ಸಾಧ್ಯವಿಲ್ಲ ಎಂಬುದು ಮನದಟ್ಟಾಗಿದ್ದ ಕಾರಣ ಅಂಬೇಡ್ಕರ್ ಅವರು ಸಾಮಾಜಿಕ ಒಡನಾಟಕ್ಕೆ ಹೆಚ್ಚು ಒತ್ತು ನೀಡುತ್ತಾರೆ. ಅದರಲ್ಲೂ, *'ಪ್ರತ್ಯೇಕ ಮತದಾನವನ್ನು ತೆಗೆದು ಸಹಭಾಗಿ ಮತದಾನ ಕಾನೂನು ಮಾಡಿದರೂ ಸುಧಾರಣೆ ಸಾಧ್ಯವಿಲ್ಲ. ಇಬ್ಬರನ್ನೂ ಜೊತೆಗೂಡಿಸುವ ಶಕ್ತಿ ಇರುವುದು ಪ್ರೀತಿಗೆ ಮಾತ್ರ...'* [80] ಎಂದು ಅವರು ನಂಬಿದ್ದರು. ದಲಿತರ ನ್ಯಾಯಯುತ ಬೇಡಿಕೆಗಳನ್ನು ಸ್ಪೃಶ್ಯರು ಒಪ್ಪಿಕೊಂಡಾಗ ಮಾತ್ರ ಈ ಪ್ರೀತಿ ಸಾಧ್ಯ ಎನ್ನುವುದು ಅವರ ನಂಬುಗೆಯಾಗಿತ್ತು.

> *ಕುಟುಂಬದ ಹೊರಗೆ, ನ್ಯಾಯವೊಂದೇ ಪ್ರೀತಿಯ ದಾರಿಯನ್ನು ತೆರೆಯಲು ಸಾಧ್ಯ ಎನ್ನುವುದು ನನ್ನ ನಂಬಿಕೆ. ಅಸ್ಪೃಶ್ಯತೆ ನಿವಾರಣೆ ಸಂಸ್ಥೆಯು ಅಸ್ಪೃಶ್ಯರಿಗೆ ನ್ಯಾಯ ದೊರಕಿಸಿಕೊಡುವ ಕೆಲಸ ಮಾಡಬೇಕು. ಇಲ್ಲವಾದಲ್ಲಿ ಈ ಸಂಸ್ಥೆಯ ಅಸ್ತಿತ್ವಕ್ಕೆ ಯಾವ ಸಮರ್ಥನೆಯೂ ಇರುವುದಿಲ್ಲ.* [81]

ಈ ಬದಲಾವಣೆಯನ್ನು ಸಾಧಿಸಲು ಆಂತರಿಕ ವಲಯಗಳಲ್ಲಿ ಇರುವ ಪೂರ್ವಾಗ್ರಹಗಳನ್ನು ಪ್ರಶ್ನಿಸುವ ಎದೆಗಾರಿಕೆಯನ್ನು ಮೊದಲಿಗೆ ತೋರಿಸಬೇಕು ಎನ್ನುವ ಸುಳುಹುಗಳನ್ನು ಅಂಬೇಡ್ಕರ್ ಅವರ ಬರಹಗಳಲ್ಲಿ ಕಾಣಬಹುದು.

*“ಕೇವಲ ವೈಯಕ್ತಿಕ ಭೇಟಿಗಳಿಂದಾಗಲಿ, ಅಥವಾ ಕೆರೆ ಬಾವಿಗಳಿಂದ ನೀರು ತರುವುದರಿಂದಾಗಲಿ ಅಸ್ಪೃಶ್ಯತೆ ನಿವಾರಣೆಯಾಗುವುದೆಂಬ ಭ್ರಮೆ ಬೇಡ. ಅದು ಹೆಚ್ಚೆಂದರೆ, ಬಾಹ್ಯದಲ್ಲಿ ಅಸ್ಪೃಶ್ಯತೆ ಕಾಣದಂತೆ ಮಾತ್ರ ಮಾಡಬಹುದು ಆದರೆ ಆಂತರ್ಯದಲ್ಲಿ ಇರುವ ಭಾವನೆಯನ್ನು ತೆಗೆಯುವುದಿಲ್ಲ. ಆಂತರ್ಯದ ಬದಲಾವಣೆ ಆಗಬೇಕೆಂದರೆ ಅಂತರ್‌ಜಾತಿ ವಿವಾಹಗಳ ಮೇಲಿನ ನಿರ್ಬಂಧವನ್ನು ತೆಗೆಯಬೇಕು. ಇದು ಸಾಧ್ಯವಾದಲ್ಲಿ, ಮನೆಯ ಒಳಗಡೆಯಿಂದ ಅಸ್ಪೃಶ್ಯತೆ ಮರೆಯಾಗಬಲ್ಲದು.”*

ಜಾತಿ ಭೇದ ತೆಗೆಯಲು ಅಂತರ್‌ಜಾತಿ ವಿವಾಹವು ಪರಿಹಾರವಾಗುವ ಸಂಗತಿಯು ಅವರ *‘ಜಾತಿ ವಿನಾಶ’* ಪುಸ್ತಕದಲ್ಲಿ ಪ್ರಬಲವಾಗಿ ಮೂಡಿಬಂದಿದೆ:

*‘ಅಂತರ್ಜಾತಿ ವಿವಾಹವು ಇದಕ್ಕೆ ಸೂಕ್ತ ಮದ್ದೆಂದು ನನಗೆ ಖಚಿತವಾಗಿದೆ. ರಕ್ತದ ಕೂಡುವಿಕೆ ಮಾತ್ರ ಜನರಲ್ಲಿ ಬಂಧುತ್ವದ ಭಾವನೆಯನ್ನು ಮೂಡಿಸಬಲ್ಲದು, ಮತ್ತು ಈ ಭಾವನೆ ಜಾಗೃತವಾಗದಿದ್ದಲ್ಲಿ, ಜಾತಿಯಿಂದ ಸೃಷ್ಟಿಯಾಗಿರುವ ಈ ಪ್ರತ್ಯೇಕತಾವಾದವು– ನಾವು ಬೇರೆ ಬೇರೆ ಎಂಬ ಭಾವವು– ಮಾಯವಾಗುವುದಿಲ್ಲ. ಜಾತಿಯನ್ನು ಒಡೆಯುವ ಏಕೈಕ ಮದ್ದು ಅಂತರ್‌ಜಾತಿ ವಿವಾಹವೇ ಆಗಿದೆ. ಬೇರೆ ಯಾವುದೂ ಜಾತಿಯನ್ನು ಕರಗಿಸುವ ದ್ರಾವಕವಾಗಲು ಸಾಧ್ಯವಿಲ್ಲ.’* [82]

ಭಾರತದ ಪ್ರಸ್ತುತ ಪರಿಸ್ಥಿತಿಯಲ್ಲಿ ಅಂಬೇಡ್ಕರ್ ಅವರ ಬಂಧುತ್ವ ಪರಿಕಲ್ಪನೆಯ ವಾದಕ್ಕೆ ಹೆಚ್ಚಿನ ಮಹತ್ವ ಇದೆ. ಇದು ಜಾತಿ ಆಧಾರಿತ ಶ್ರೇಣೀಕರಣವನ್ನು ಮಾತ್ರ ಪ್ರಶ್ನಿಸುವುದಲ್ಲದೆ ಈ ಸಮಾಜದಲ್ಲಿರುವ ಇತರೆ ಶ್ರೇಣೀಕರಣಗಳನ್ನೂ ಪ್ರಶ್ನಿಸುತ್ತದೆ.

ಸೌಹಾರ್ದತೆಯಿಂದ ಬದುಕುತ್ತಿರುವವರ ಮೇಲೆ ಹಿಂದು ಧರ್ಮ ರಕ್ಷಕರೆಂದು ಕರೆದುಕೊಳ್ಳುವ ಪುಂಡರಿಂದ ತೀವ್ರವಾದ ಮತ್ತು ನಿರಂತರವಾದ ದಾಳಿ ನಡೆಯುತ್ತಿವೆ. ಇಂತಹ ದಾಳಿಗಳು ಬಂಧುತ್ವದ ಪರಿಕಲ್ಪನೆಗೆ ಒಡ್ಡುತ್ತಿರುವ ಸವಾಲು ಮತ್ತು ಆತಂಕದ ಕುರಿತು ನಾಗರಿಕ ಹಕ್ಕುಗಳ ಒಕ್ಕೂಟವು (ಪಿ.ಯು.ಸಿ.ಎಲ್.) ನಡೆಸಿರುವ ಸರಣಿ ಅಧ್ಯಯನವು ದಕ್ಷಿಣಕನ್ನಡ ಜಿಲ್ಲೆಯಲ್ಲಿ ಸಾಮಾಜಿಕ ಸಂಬಂಧಗಳು ಮತ್ತು ಪ್ರೀತಿಯ ಸಂಬಂಧಗಳ ಮೇಲೆ ನಡೆದಿರುವ ದಾಳಿಗಳನ್ನು ದಾಖಲಿಸಿದೆ.[83] ಇಲ್ಲಿ ಬಲಪಂಥೀಯರು ಹಿಂಸೆ, ಬೆದರಿಕೆಗಳ ಮೂಲಕ ಕೇವಲ ಅಂತರ್‌ಜಾತಿ ಮತ್ತು ಅಂತರ್‌ಧರ್ಮೀಯ ಪ್ರೇಮ ಪ್ರಕರಣಗಳನ್ನಷ್ಟೇ ಅಲ್ಲದೆ ಎಲ್ಲಾ ರೀತಿಯ ಅಂತರ್‌ಜಾತಿ ಮತ್ತು ಅಂತರ್‌ಧರ್ಮೀಯ ಸಂಬಂಧಗಳನ್ನು ಅಂದರೆ, ಮದುವೆ, ಹಬ್ಬ ಮುಂತಾದ ಆಚರಣೆಗಳಲ್ಲಿ ಭಾಗವಹಿಸುವುದು,

ಒಟ್ಟಿಗೇ ಸಾಮಾಜೀಕರಿಸುವ ಚಟುವಟಿಕೆಗಳನ್ನು ನಿರ್ಬಂಧಿಸುವ ಕೆಲಸವನ್ನು ಮಾಡುತ್ತಿದ್ದಾರೆ.[84]

ಜಾತಿ ಧರ್ಮಗಳನ್ನು ಮೀರಿದ ಈ ಪ್ರೀತಿಯ ಸಂಬಂಧಗಳನ್ನು ಹಾಗು ಸಾಮಾಜಿಕ ವರ್ತನೆಗಳನ್ನು ಅಂಬೇಡ್ಕರ್ ದೃಷ್ಟಿಕೋನದಿಂದ ನೋಡಬೇಕಿದೆ. ಇವನ್ನು ವೈಯಕ್ತಿಕ ನೆಲೆಯ ಪ್ರೇಮ ಹಾಗೂ ಜೊತೆಗೂಡುವ ಹಕ್ಕನ್ನಾಗಿ ಮಾತ್ರ ನೋಡದೆ, ನಿಜವಾದ ಸೌಹಾರ್ದತೆ, ಸಹಬಾಳ್ವೆ, ಬಂಧುತ್ವ ತತ್ವದ ವಿಸ್ತರಣೆ ಎಂದು ಅರ್ಥೈಸಿಕೊಳ್ಳಬೇಕಿದೆ. ಜಾತಿ ಹಾಗು ಧರ್ಮದ ಸೀಮಿತ ಚೌಕಟ್ಟನ್ನು ಮೀರುವ ಇಂತಹ ಪ್ರೇಮ ಹಾಗು ಕೂಡಿ ಬಾಳುವ ಸಂಬಂಧಗಳು ಸಂವಿಧಾನದ ಪೀಠಿಕೆಯಲ್ಲಿ ಹೇಳಿರುವ ಬಂಧುತ್ವವನ್ನು ನಿಜಾರ್ಥದಲ್ಲಿ ಅನುಷ್ಠಾನಗೊಳಿಸಲು ಸಾಮಾನ್ಯ ಜನರು ಅನುಸರಿಸುತ್ತಿರುವ ಕ್ರಮಗಳು ಎಂದು ತಿಳಿಯಬೇಕಿದೆ.

ಆಧುನಿಕ ಭಾರತದಲ್ಲಿ ಬಂಧುತ್ವ ತತ್ವವನ್ನು ಉತ್ತೇಜಿಸಲು ಕೈಗೊಂಡಿರುವ ಒಂದು ಗಮನೀಯ ಶಾಸಕಾಂಗ ಪ್ರಯತ್ನವೆಂದರೆ ವಿಶೇಷ ವಿವಾಹ ಕಾಯ್ದೆ, 1954. ಇದು ಜಾತಿ ಹಾಗು ಧರ್ಮಗಳು ಸಮಾಜದ ಮೇಲೆ ಹೊಂದಿರುವ ಬಿಗಿಯಾದ ಹಿಡಿತವನ್ನು ಸಡಿಲಗೊಳಿಸುವ ಯತ್ನ ಮಾಡುತ್ತದೆ. ಆದರೆ, ಜಾತಿ ಹಾಗೂ ಧರ್ಮ ಆಧಾರಿತ ಪೂರ್ವಾಗ್ರಹಗಳನ್ನು ಪ್ರಶ್ನಿಸುತ್ತಿರುವ ಸಮಾಜದ ಯತ್ನಗಳಿಗೆ ಕೇವಲ ಸಮಾಜದೊಳಗಿನಿಂದ ಮಾತ್ರವಲ್ಲದೆ ಪ್ರಭುತ್ವದಿಂದಲೂ (ಆಡಳಿತ ವ್ಯವಸ್ಥೆ) ವಿರೋಧ ವ್ಯಕ್ತವಾಗುತ್ತಿದೆ.

ಜಾತಿ–ಧರ್ಮಗಳ ಎಲ್ಲೆ ಮೀರಿ ಪ್ರೀತಿಸುವ ಸಾಹಸ ಮಾಡುವ ಯುವ ಪ್ರೇಮಿಗಳು ಇಂದಿಗೂ ಸಹ ಅವರ ಪೋಷಕರಿಂದಲೇ ಹತ್ಯೆಯಾಗುತ್ತಿರುವುದು ಈ ಜಾತಿ–ಧರ್ಮಗಳ ಹಿಡಿತ ಎಷ್ಟು ಪ್ರಬಲವಾಗಿದೆ ಎನ್ನುವುದನ್ನು ತೋರಿಸುತ್ತದೆ. 2015ರಲ್ಲಿ ಶಂಕರ ಎಂಬ ದಲಿತ ಯುವಕ ಕೌಸಲ್ಯ ಎಂಬ ಮೇಲ್ಜಾತಿಯ ಯುವತಿಯನ್ನು ಮದುವೆ ಆಗಿದ್ದಕ್ಕೆ, ಶಂಕರ ಅವರನ್ನು ಕೊಲ್ಲಲಾಯಿತು. ಕೌಟುಂಬಿಕ ವಿರೋಧ ಹಾಗು ನಿರಂತರ ಬೆದರಿಕೆಗಳ ಹೊರತಾಗಿಯೂ ಇವರು ಪ್ರೀತಿಯಿಂದ ಸಂಸಾರ ನಡೆಸುತ್ತಿದ್ದರು. ಆದರೆ, 2016ರ ಒಂದು ದಿನ ಕೊಲೆಗಡುಕರ ಗುಂಪೊಂದು ಉದಮಲ್ ಪೇಟೆಯ ಬಸ್‌ನಿಲ್ದಾಣದಲ್ಲಿ ಈ ಜೋಡಿಯ ಮೇಲೆ ಹಾಡುಹಗಲಲ್ಲೇ ಮಾರಣಾಂತಿಕ ಹಲ್ಲೆ ನಡೆಸಿತು. ಕೌಸಲ್ಯ ತೀವ್ರವಾಗಿ ಗಾಯಗೊಂಡರು. ಶಂಕರರ ದೇಹದ ಮೇಲೆ 32 ಕಡೆಗಳಲ್ಲಿ ಆಯುಧಗಳಿಂದ ಚುಚ್ಚಲಾಗಿತ್ತು. ಈ ಗಾಯಗಳ ಕಾರಣ ಶಂಕರ ಮರಣ ಹೊಂದಿದರು. ಕೌಸಲ್ಯರ ತಂದೆ ಚಿನ್ನಸಾಮಿ ಹಾಗು ತಾಯಿ ಅನ್ನಲಕ್ಷ್ಮಿ ಈ ಹತ್ಯೆಯ ರೂವಾರಿಗಳಾಗಿದ್ದರು. ಕೌಸಲ್ಯರ ಅಂತರ್‌ಜಾತಿ ಮದುವೆಯಿಂದ ಕುಟುಂಬಕ್ಕೆ ಅವಮಾನ ಆಯಿತೆಂಬ ಸಿಟ್ಟಿನಿಂದ ಈ ಕೃತ್ಯ ಮಾಡಿದ್ದರು.

ತಿರುಪ್ಪೂರಿನ ಜಿಲ್ಲಾ ನ್ಯಾಯಾಲಯವು ಚಿನ್ನಸಾಮಿ ಹಾಗು ಇನ್ನಿತರ ಐದು ಜನರಿಗೆ ಮರಣದಂಡನೆ ಶಿಕ್ಷೆ ವಿಧಿಸಿತು. ಇನ್ನೊಬ್ಬರಿಗೆ ಇಮ್ಮಡಿ ಜೀವಾವಧಿ ಶಿಕ್ಷೆಯನ್ನೂ, ಮತ್ತೊಬ್ಬರಿಗೆ ಐದು ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆಯನ್ನೂ ವಿಧಿಸಿತು. ಆದರೆ ತಾಯಿ ಅನ್ನಲಕ್ಷ್ಮಿಯನ್ನು ದೋಷಮುಕ್ತಗೊಳಿಸಿತ್ತು. ವಿಪರ್ಯಾಸವೆಂದರೆ, ಮದ್ರಾಸ್ ಉಚ್ಚ ನ್ಯಾಯಾಲಯವು ಜಿಲ್ಲಾ ನ್ಯಾಯಾಲಯದ ತೀರ್ಪನ್ನು ಪರಿಷ್ಕರಿಸಿ, ತಂದೆ ಹಾಗು ಇನ್ನೊಬ್ಬರನ್ನೂ ಬಿಡುಗಡೆ ಮಾಡಿತು; ಉಳಿದವರ ಶಿಕ್ಷೆಯ ತೀವ್ರತೆಯನ್ನು ಕಡಿಮೆ ಮಾಡಿತು.[85]

ಪ್ರಕರಣದ ಪ್ರಮುಖ ಆರೋಪಿಯನ್ನು ಬಿಡುಗಡೆ ಮಾಡಿದ್ದು ಹಾಗೂ ಅದಕ್ಕೆ ನ್ಯಾಯಾಲಯವು ನೀಡಿದ ಕಾರಣಗಳು ಈ ತೀರ್ಪಿನ ಗಮನ ಸೆಳೆಯುವ ಅಂಶಗಳು. 'ಚಿನ್ನಸಾಮಿ ಮೇಲಿನ ಸಂಚಿನ ಆರೋಪವನ್ನು ಸಂಶಯಾತೀತವಾಗಿ ಸಾಬೀತು ಪಡಿಸುವಲ್ಲಿ ತನಿಖಾ ಸಂಸ್ಥೆಯು ವಿಫಲವಾಗಿರುವುದರಿಂದ' ಅವರನ್ನು ಬಿಡುಗಡೆ ಮಾಡಲಾಗಿದೆ ಎಂದಿತು ನ್ಯಾಯಾಲಯ.

ಜಾತಿ ಕಟ್ಟಳೆಗಳನ್ನು ಮೀರಿ ಮದುವೆಯಾದ ಏಕೈಕ ಕಾರಣಕ್ಕೆ ಸ್ವತಃ ಆಕೆಯ ಕುಟುಂಬವೇ ಮಗಳು ಮತ್ತು ಆಕೆಯ ಗಂಡನ ಹತ್ಯೆ ಮಾಡಿಸಿದ ಈ ಪ್ರಕರಣದ ಗಹನತೆಯನ್ನು ನ್ಯಾಯಾಲಯವು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳದೇ ಹೋಗಿದ್ದು ವಿಷಾದನೀಯ. ಮದುವೆಯಾದ ಕೂಡಲೆ ತನ್ನ ಕುಟುಂಬದವರು ಹಲ್ಲೆ ಮಾಡಬಹುದೆಂದು ಹೆದರಿ ರಕ್ಷಣೆ ಕೋರಿ ಪೊಲೀಸ್ ಠಾಣೆಯಲ್ಲಿ ಕೌಸಲ್ಯ ಸಲ್ಲಿಸಿದ್ದ ಮನವಿಯನ್ನು ಹಾಗೂ ಮದುವೆಯಾದ ಕೆಲವು ದಿನಗಳ ಬಳಿಕ ಕೌಸಲ್ಯ ಕಾಣೆಯಾಗಿದ್ದಾರೆಂದು ಹಾಗೂ ಅವರ ಕುಟುಂಬದವರೇ ಅಪಹರಿಸಿರಬಹುದೆಂದು ಶಂಕರ ದಾಖಲಿಸಿದ ದೂರನ್ನು ತನಿಖಾಧಿಕಾರಿಯು ನ್ಯಾಯಾಲಯದ ಮುಂದೆ ಮಂಡಿಸಿ, ಕೌಸಲ್ಯರ ಕುಟುಂಬದ ಹಿಂಸಾತ್ಮಕ ಕೃತ್ಯಕ್ಕೆ ಸಾಂದರ್ಭಿಕ ಸಾಕ್ಷಿ ಒದಗಿಸಿದ್ದರೂ ಸಹ ಉಚ್ಚನ್ಯಾಯಾಲಯವು ಅದನ್ನು ಪರಿಗಣಿಸದೆ, ಪಕ್ಕಕ್ಕೆ ತಳ್ಳಿಹಾಕಿತು.

ಹೀಗೆ, ಈ ಪ್ರಕರಣದಲ್ಲಿ ಗಾಢವಾಗಿದ್ದ ಜಾತಿ ಕೋನವನ್ನು ಅಳಿಸಿಹಾಕುವ ಮೂಲಕ, ಸಂವಿಧಾನದತ್ತವಾದ ಸ್ವಾತಂತ್ರ್ಯ, ಸಮಾನತೆ ಮತ್ತು ಬಂಧುತ್ವದ ತತ್ವಗಳಿಗೆ ಜಾತಿ ವ್ಯವಸ್ಥೆಯು ಹೇಗೆ ಬೆದರಿಕೆ ಒಡ್ಡುತ್ತದೆ ಎಂಬುದನ್ನು ಈ ತೀರ್ಪು ಗಮನಿಸದೇ ಹೋಯಿತು.

# 5

# ಘನತೆ

## ಘನತೆ ಎಂದರೇನು?

ಆರ್ಥಿಕ ಅಗತ್ಯಗಳೊಂದಿಗೆ ಘನತೆಯನ್ನು ತುಲನೆ ಮಾಡುವ ಮೂಲಕ ಘನತೆಯ ಸಾರವನ್ನು ಹಿಡಿದಿಡಲು ಪ್ರಯತ್ನಿಸಿದರು ಬಾಬಾ ಸಾಹೇಬ್ ಅಂಬೇಡ್ಕರ್.

> *'ದಾಸ್ಯದಲ್ಲಿರುವ ವರ್ಗಕ್ಕೆ ಸಾಮಾಜಿಕ ವ್ಯವಸ್ಥೆಯಿಂದಾಗಿ ಅವರು ಎದುರಿಸುವ ಅವಮಾನ ಮತ್ತು ಅಗೌರವದ ಮುಂದೆ, ದಿನನಿತ್ಯದ ಬಡತನ ಮತ್ತು ಆರ್ಥಿಕ ಕೊರತೆಗಳು ದೊಡ್ಡ ಸಮಸ್ಯೆಯೇ ಅಲ್ಲ. ಮೊದಲಿಗೆ ಅವರಿಗೆ ಬೇಕಿರುವುದು ಅನ್ನ ಅಲ್ಲ, ಗೌರವ.'* [86]

ಪೀಠಿಕೆಯ ಕರಡಿನ ಬಗ್ಗೆ, ತಿದ್ದುಪಡಿಗಳ ಬಗ್ಗೆ ನಡೆದ ಚರ್ಚೆಯಲ್ಲಿ ಸಂವಿಧಾನ ರಚನಾ ಸಭೆಗೆ ಸಾಂವಿಧಾನಿಕ ಸಲಹೆಗಾರರಾದ ಬಿ. ಎನ್. ರಾವ್ ಅವರು, ದೇಶದ ಏಕತೆಗಿಂತ ಮೊದಲು ವ್ಯಕ್ತಿಯ ಘನತೆ ಬರಬೇಕು ಎಂದು ಪ್ರತಿಪಾದಿಸಿದ್ದರ ಹಿಂದೆ ನಾವು ಆಳವಾದ ಒಂದು ತಾತ್ವಿಕ ಅರ್ಥವನ್ನು ಕಾಣಬಹುದು. (ಈ ವಿಚಾರವಾಗಿ ಅಂಬೇಡ್ಕರ್ ಅವರ ಚಿಂತನೆಯಲ್ಲೂ ಇರುವ ಸಾಮ್ಯತೆಯನ್ನು ಆಗ್ರಹಪೂರ್ವಕವಾಗಿ ಗುರುತಿಸುತ್ತಾರೆ ಆಕಾಶ್ ಸಿಂಗ್ ರಾಠೋಡ್.)

*'ಇದು ಕರಡು ಪ್ರತಿಗೆ ಬಂದಿರುವ ತಿದ್ದುಪಡಿ ಸೂಚನೆ. ಪೀಠಿಕೆಯಲ್ಲಿ 'ಬಂಧುತ್ವ' ಪದದಿಂದ ಆರಂಭವಾಗುವ ಸಾಲಿನಲ್ಲಿ ಮೊದಲು 'ದೇಶದ ಏಕತೆ' ಮತ್ತು ನಂತರ 'ವ್ಯಕ್ತಿಯ ಘನತೆ'ಯನ್ನು ಇಡಲು ಈ ತಿದ್ದುಪಡಿ ಬಯಸುತ್ತದೆ. ಆದರೆ 'ವ್ಯಕ್ತಿಯ ಘನತೆ'ಯನ್ನು ಮೊದಲು ಇಡಲು ಕಾರಣವೆಂದರೆ, ವ್ಯಕ್ತಿಗಳ ಘನತೆಯನ್ನು ಖಚಿತಪಡಿಸದೆ, ದೇಶವನ್ನು ಒಗ್ಗೂಡಿಸಲು ಆಗುವುದಿಲ್ಲ. ಐರಿಶ್ ದೇಶದ ಸಂವಿಧಾನದಲ್ಲಿ 'ವ್ಯಕ್ತಿಯ ಘನತೆ' ಎನ್ನುವುದನ್ನು 'ನಮ್ಮ ದೇಶದ ಏಕತೆ' ಪದಗಳಿಗಿಂತ ಮೊದಲು ನಮೂದಿಸಲಾಗಿದೆ. ಆದ್ದರಿಂದ ನಾವು ಸಹ ಈಗಿರುವಂತೆಯೇ ಪದ ಸಮುಚ್ಚಯಗಳನ್ನು ಇಟ್ಟುಕೊಳ್ಳಬಹುದು.'* [87]

'ವ್ಯಕ್ತಿಗಳು ಗುರಿ ತಲುಪಲು ಇರುವ ಸಾಧನಗಳಲ್ಲ, ಅವರೇ ಅಂತಿಮ ಗುರಿ' ಎಂಬ ಚಿಂತನೆಯನ್ನು ಅಂಬೇಡ್ಕರ್ ಇಲ್ಲಿ ನಮ್ಮ ಮುಂದಿಟ್ಟಿದ್ದಾರೆ. ಹಕ್ಕುಗಳನ್ನು ಕೊಡಮಾಡಬೇಕಾದ ಮೊದಲ ಘಟಕಗಳೇ ವ್ಯಕ್ತಿಗಳು ಎಂದು ಒತ್ತಿಹೇಳಿದ್ದಾರೆ. ಭಾರತದ ಸಂವಿಧಾನದಲ್ಲಿ ವ್ಯಕ್ತಿ ಎಂಬ ಪದಕ್ಕೆ ನೀಡಿರುವ ಆದ್ಯತೆಯು ಸಂವಿಧಾನವೂ ವ್ಯಕ್ತಿ ಕೇಂದ್ರಿತವಾಗಿರಬೇಕು ಎಂಬ ತತ್ವದ ಸೂಚಕವಾಗಿದೆ.[88] ಇಲ್ಲಿ 'ದೇಶದ ಏಕತೆ ಮತ್ತು ಸಮಗ್ರತೆ' ಎಂಬ ಪದಗುಚ್ಛದ ಸಾಂವಿಧಾನಿಕ ಅರ್ಥವನ್ನು ವ್ಯಕ್ತಿಯ ಮಸೂರದಿಂದ ನೋಡಬೇಕಿದೆ. ವ್ಯಕ್ತಿಯ ಘನತೆಯನ್ನು (ಅಭಿವ್ಯಕ್ತಿ ಸ್ವಾತಂತ್ರ್ಯ, ಆಯ್ಕೆಯ ಸ್ವಾತಂತ್ರ್ಯ, ಅಪಮಾನಗಳಿಂದ ಮುಕ್ತಿಯನ್ನೊಳಗೊಂಡಂತೆ) ಪೂರ್ಣವಾಗಿ ರಕ್ಷಿಸಿದರೆ ಮಾತ್ರ ದೇಶದ ಏಕತೆ ಮತ್ತು ಸಮಗ್ರತೆ ಸಾಧ್ಯವಾಗುತ್ತದೆ. ದೇಶದ ಏಕತೆಯನ್ನು ವ್ಯಕ್ತಿ ಸ್ವಾತಂತ್ರದ ಅಡಿಪಾಯದ ಮೇಲೆ ಕಟ್ಟಬೇಕೇ ಹೊರತು ವ್ಯಕ್ತಿಸ್ವಾತಂತ್ರ್ಯವನ್ನು ಬಲಿ ಕೊಟ್ಟು ಏಕತೆಯನ್ನು ತರಲಾಗುವುದಿಲ್ಲ.

ಘನತೆ ಕುರಿತಾದ ಈ ನೋಟವನ್ನು ಸರ್ವೋಚ್ಚ ನ್ಯಾಯಾಲಯವು ನ್ಯಾಯಶಾಸ್ತ್ರದ ಆಧಾರದ ಮೇಲೆ ಅಭಿವೃದ್ಧಿಪಡಿಸಿದೆ. ನ್ಯಾಯಶಾಸ್ತ್ರವು ವ್ಯಕ್ತಿಘನತೆಯನ್ನು ಹೇಗೆ ನಿರೂಪಿಸುತ್ತಾ ಬಂದಿದೆ ಎನ್ನುವುದನ್ನು ಖೈದಿಗಳು, ಲೈಂಗಿಕ ಮತ್ತು ಲಿಂಗತ್ವ ಅಲ್ಪಸಂಖ್ಯಾತರು ಹಾಗೂ ಇತರ ದುರ್ಬಲ ವರ್ಗಗಳ ಹಕ್ಕುಗಳಿಗೆ ಸಂಬಂಧಿಸಿದ ಪ್ರಕರಣಗಳ ಮೂಲಕ ಹಾಗೂ ಖಾಸಗಿತನ ಮತ್ತು ಘನತೆಯ ಸಂಬಂಧವನ್ನು ನಮೂದಿಸುವ ಪ್ರಕರಣಗಳ ಮೂಲಕ ಈ ಕೆಳಗೆ ವಿವರಿಸಲಾಗಿದೆ.

*'ಸುನಿಲ್ ಭಾತ್ರ ವರ್ಸ್‌ಸ್ ದೆಹಲಿ ಸರ್ಕಾರ'* [89] ಪ್ರಕರಣದಲ್ಲಿ ಸೆರೆಮನೆ ಕಾಯಿದೆ, 1894ರ ನಿಯಮ 30ರ ಸಿಂಧುತ್ವವನ್ನು ರಿಟ್ ಅರ್ಜಿ ಮೂಲಕ

ಪ್ರಶ್ನಿಸಲಾಗಿತ್ತು. ಮರಣದಂಡನೆಗೆ ಗುರಿಯಾದ ಖೈದಿಗಳನ್ನು ಇತರೆ ಖೈದಿಗಳಿಂದ ಬೇರ್ಪಡಿಸಿ, ಪ್ರತ್ಯೇಕ ಕೋಣೆಯಲ್ಲಿರಿಸುವ ಪದ್ಧತಿಯನ್ನು ಇದರಲ್ಲಿ ಪ್ರಶ್ನಿಸಲಾಗಿತ್ತು. ರಿಟ್ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಲಯವು *'ಈ ಕಾಯಿದೆಯು ಖೈದಿಗಳನ್ನು ಏಕಾಂಗಿಯಾಗಿ ಇರಿಸಲು ಪೋಲೀಸರಿಗೆ ಯಾವುದೇ ಅಧಿಕಾರ ನೀಡುವುದಿಲ್ಲ. ನಾಗರಿಕ ಸಮಾಜದಲ್ಲಿ ನೀಡುವ ಶಿಕ್ಷೆಯು ಮಾನವನ ಘನತೆಯನ್ನು ಕಡಿಮೆ ಮಾಡಬಾರದು'* ಎಂದಿತು.

> *'ಸಂವಿಧಾನದ ಮೂರನೇ ಅಧ್ಯಾಯವು ವ್ಯಕ್ತಿಗಳಿಗೆ ನೀಡುವ ಹಕ್ಕು ಮತ್ತು ರಕ್ಷಣೆಗಳು ಜೈಲಿನ ಗೇಟಿನ ಹೊರಗೆ ನಿಂತುಹೋಗುವುದಿಲ್ಲ, ಅವು ಜೈಲಿನೊಳಗೂ ಖೈದಿಗಳ ಜೊತೆಗಿರುತ್ತವೆ. ಜೈಲಿನ ಅಧಿಕಾರಿಗಳು ಖೈದಿಗಳ ಹಕ್ಕುಚ್ಯುತಿ ಮಾಡಿದರೆ, ಹಕ್ಕುಗಳನ್ನು ನಿರಾಕರಿಸಿದರೆ, ಗಾಳಿಗೆ ತೂರಿದರೆ ಅಥವಾ ನಿರ್ಲಕ್ಷಿಸಿದರೆ, ನ್ಯಾಯಾಂಗದ ಕಣ್ಗಾವಲು ಖೈದಿಗಳ ಹಕ್ಕುಗಳನ್ನು ರಕ್ಷಿಸುತ್ತವೆ. ಮರಣದಂಡನೆಗೆ ಗುರಿಯಾದ ಅಥವಾ ಈಗಾಗಲೇ ಅಪಾಯಕಾರಿ ಎಂದು ಏಕಪಕ್ಷೀಯವಾಗಿ ತೀರ್ಮಾನಿಸಲ್ಪಟ್ಟ ವಿಚಾರಣಾಧೀನ ಖೈದಿಗಳು ಇನ್ನೂ ಹೆಚ್ಚಿನ ನೋವನ್ನು ಅನುಭವಿಸಬೇಕೆ? ಖಂಡಿತವಾಗಿಯೂ ಇಲ್ಲ. ಒಂದು ವೇಳೆ ಹಾಗಾದಲ್ಲಿ ಸಾಮಾಜಿಕ ನ್ಯಾಯ, ವ್ಯಕ್ತಿಯ ಘನತೆ, ಕಾನೂನಿನ ಮುಂದೆ ಸಮಾನತೆ ಮೊದಲಾಗಿ ನ್ಯಾಯಶಾಸ್ತ್ರವು ರೂಪಿಸಿರುವ ರೀತಿ ನೀತಿಗಳು, ಹಾಗೂ ಸ್ವಾತಂತ್ರ್ಯದ ಏಳು ಜ್ಯೋತಿಗಳು (ಅನುಚ್ಛೇದ 19) ಇವೆಲ್ಲಾ ಕೇವಲ ಸಾಂವಿಧಾನಿಕ ಮುಖಸ್ತುತಿಗಳಾಗಿ ಊಸರವಳ್ಳಿಯಂತೆ ಬಣ್ಣ ಬದಲಾಯಿಸುವ ಪದಗಳಾಗಿಬಿಡುತ್ತವೆ' ಎಂದಿತು ನ್ಯಾಯಾಲಯ.*

ಜೈಲಿನ ಒಳಗೆ ಖೈದಿಗಳನ್ನು ಸರಪಳಿಗಳಿಂದ ಕಟ್ಟಬಹುದೇ ಎಂಬ ಪ್ರಶ್ನೆಗೆ, ನ್ಯಾಯಾಲಯ ಕೊಟ್ಟ ಉತ್ತರ ಹೀಗಿದೆ:

> *[...] ಯಾವುದೇ ಮನುಷ್ಯರನ್ನು ನಡೆಸಿಕೊಳ್ಳುವ ರೀತಿಯು ಅವಮಾನಕರವಾಗಿದ್ದು, ವ್ಯಕ್ತಿಯ ಘನತೆಗೆ ಹಾನಿಯುಂಟು ಮಾಡುತ್ತಿದ್ದರೆ, ಅನಾವಶ್ಯಕವಾಗಿ ಹಿಂಸೆ ಮಾಡುವಂತಿದ್ದರೆ ಹಾಗೂ ಮನುಷ್ಯರನ್ನು ಪ್ರಾಣಿಗಳ ರೀತಿ ನಡೆಸಿಕೊಂಡಿದ್ದಾದರೆ, ನಾವು ಅಂತಹ ವಿಷಯಗಳ ಬಗ್ಗೆ ಕಣ್ಣು ಮುಚ್ಚಿಕೊಳ್ಳಲಾಗದು. ಇಂತಹ ನಡವಳಿಕೆಗಳನ್ನು ಅನುಚ್ಛೇದ 14ರ ಅಡಿಯಲ್ಲಿ ಪ್ರಶ್ನಿಸಬಹುದು.*

ಬಂಧನದಲ್ಲಿದ್ದ ಮಹಿಳೆಯೊಬ್ಬರು ತನ್ನ ಕುಟುಂಬದವರನ್ನಾಗಲಿ ಅಥವಾ ವಕೀಲರನ್ನಾಗಲಿ ಭೇಟಿ ಮಾಡಲು ಅವಕಾಶ ನೀಡುತ್ತಿಲ್ಲ ಎಂದು ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿಗೆ ಸಂಬಂಧಿಸಿದ *'ಫ್ರಾನ್ಸಿಸ್ ಕೊರಾಲ್ಲಿ ಮುಲ್ಲಿನ್ ವರ್ಸಸ್ ದೆಹಲಿ ಕೇಂದ್ರಾಡಳಿತ ಪ್ರದೇಶದ ಆಡಳಿತಾಧಿಕಾರಿ'* [90] ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು, *'ವ್ಯಕ್ತಿಯ ಘನತೆಯು ಬದುಕುವ ಹಕ್ಕಿನ ಅವಿಭಾಜ್ಯ ಅಂಗವಾಗಿದೆ'* ಎಂದು ಹೇಳಿತು. *'ಪ್ರಜಾಪ್ರಭುತ್ವದಲ್ಲಿ ಬದುಕುವ ಹಕ್ಕಿಗೆ ಸಂವಿಧಾನಾತ್ಮಕವಾಗಿ ಅತ್ಯುನ್ನತ ಮೌಲ್ಯವನ್ನು ನೀಡಲಾಗಿದೆ'* ಎಂದು ಹೇಳಿದ ನ್ಯಾಯಾಲಯವು, ವ್ಯಕ್ತಿಯ ಘನತೆಗೆ ಘಾಸಿ ಮಾಡುವ ಯಾವುದೇ ಕ್ರಮವನ್ನು ಸಂವಿಧಾನದ 21ನೇ ಅನುಚ್ಛೇದವು ಬದುಕುವ ಹಕ್ಕಿನ ಉಲ್ಲಂಘನೆ ಎಂದು ಪರಿಗಣಿಸುತ್ತದೆ ಎಂದಿತು.

> *ಬದುಕುವ ಹಕ್ಕು ಎಂದರೆ ಘನತೆಯೊಂದಿಗೆ ಬದುಕುವ ಹಕ್ಕು ಎಂದು ತಿಳಿದಿದ್ದೇವೆ. ಘನತೆಯಿಂದ ಬದುಕುವುದೆಂದರೆ ಬದುಕು ಸಾಗಿಸಲು ಬೇಕಾದ ಎಲ್ಲಾ ಅವಶ್ಯಕತೆಗಳು– ಪೌಷ್ಟಿಕ ಆಹಾರ, ಉಡುಗೆ–ತೊಡುಗೆ, ವಾಸಸ್ಥಳ, ಓದು–ಬರಹದ ಸೌಲಭ್ಯಗಳು, ವಿವಿಧ ರೀತಿಯಲ್ಲಿ ಅಭಿವ್ಯಕ್ತಿಸಲು ಅನುಕೂಲಗಳು, ಓಡಾಡಲು ಮುಕ್ತ ಅವಕಾಶ, ಸುತ್ತಮುತ್ತ ಇರುವ ಜನರೊಂದಿಗೆ ಬೆರೆಯುವ ಮತ್ತು ಸಂವಹಿಸುವ ಅವಕಾಶ– ಲಭ್ಯವಿರುವುದು ಎಂದು ಅರ್ಥ. [...] ಯಾವ ದೃಷ್ಟಿಯಿಂದ ಪರಿಗಣಿಸಿದರೂ ಅದು (ಬದುಕುವ ಹಕ್ಕು) ಬದುಕಲು ಬೇಕಾದ ಎಲ್ಲ ಮೂಲಭೂತ ಅವಶ್ಯಕತೆಗಳನ್ನು ಹೊಂದಿರಬೇಕಾಗುತ್ತದೆ. ಹಾಗೂ ಮನುಷ್ಯನ ಅಭಿವ್ಯಕ್ತಿಗೆ ಪೂರಕವಾದ ಚಟುವಟಿಕೆಗಳನ್ನು ಕೈಗೊಳ್ಳಲು ಅಗತ್ಯವಾದ ಸೌಲಭ್ಯಗಳನ್ನು ಹೊಂದಿರಬೇಕಾಗುತ್ತದೆ. ಇವನ್ನು ನಿರಾಕರಿಸುವ ಅಥವಾ ಇವುಗಳಿಗೆ ಧಕ್ಕೆ ಉಂಟುಮಾಡುವ ಯಾವುದೇ ಕ್ರಿಯೆಯನ್ನೂ ಬದುಕುವ ಹಕ್ಕಿನ ಉಲ್ಲಂಘನೆ ಎಂದೇ ಪರಿಗಣಿಸಬೇಕಾಗುತ್ತದೆ. ಹಾಗು ಇವುಗಳನ್ನು ಇನ್ನಿತರೆ ಮೂಲಭೂತಹಕ್ಕುಗಳಿಗೆ ಚ್ಯುತಿಬಾರದಂತೆ, ನ್ಯಾಯಸಮ್ಮತವಾಗಿ, ಸಮಂಜಸವಾಗಿ ಒದಗಿಸಬೇಕಾಗುತ್ತದೆ. ಯಾವುದೇ ರೀತಿಯ ಕ್ರೌರ್ಯ ಮತ್ತು ಹಿಂಸೆಯು, ಅಮಾನವೀಯ ಅಥವಾ ಅವಮಾನಕಾರಿ ನಡತೆಯು ಮಾನವನ ಘನತೆಗೆ ತಕ್ಕುದಾಗಿರುವುದಿಲ್ಲ.[...]*

ಘನತೆಯು ವ್ಯಕ್ತಿಯ ಸ್ವಾಯತ್ತತೆ ಹಾಗು ಆಯ್ಕೆಗಳ ಜೊತೆಗೆ ಮೇಳೈಸಬೇಕೆಂಬ ಚಿಂತನೆಯನ್ನು ಮೊದಲಬಾರಿಗೆ *'ಪುಟ್ಟಸ್ವಾಮಿ ವರ್ಸಸ್ ಭಾರತ ಒಕ್ಕೂಟ'* [91] ಪ್ರಕರಣದಲ್ಲಿ ಪ್ರಸ್ತಾಪಿಸಲಾಯಿತು. ಇಲ್ಲಿ ಖಾಸಗಿತನವು ಒಂದು ಮೂಲಭೂತ ಹಕ್ಕು ಎಂದ ನ್ಯಾಯಾಲಯವು, ಘನತೆಯು ಖಾಸಗಿತನದ ಒಂದು ಮುಖ ಎಂದಿತು. ಸಮಾನತೆ, ಸ್ವಾತಂತ್ರ್ಯ ಮತ್ತು ಬಂಧುತ್ವಗಳು ಒಂದಕ್ಕೊಂದು ಪೂರಕವಾದ ಅಂಶಗಳು ಎಂಬ ಆಂಬೇಡ್ಕರರ ವಾದಕ್ಕೆ ಪುಷ್ಠಿ ನೀಡಿತು.

> ಜೀವನ ಮತ್ತು ವೈಯಕ್ತಿಕ ಸ್ವಾತಂತ್ರ್ಯವು ಪರಸ್ಪರ ಬೆಸೆದುಕೊಂಡ, ಬೇರ್ಪಡಿಸಲಾಗದ ಹಕ್ಕುಗಳು. ಮಾನವನ ಘನತೆಯುಕ್ತ ಅಸ್ತಿತ್ವಕ್ಕೆ ಇವೆರಡೂ ಅವಶ್ಯವಾಗಿ ಇರಲೇಬೇಕು. ವೈಯಕ್ತಿಕ ಘನತೆ, ಜನರ ನಡುವಿನ ಸಮಾನತೆ ಹಾಗೂ ಸ್ವಾತಂತ್ರ್ಯದ ಅನ್ವೇಷಣೆಗಳು ಭಾರತ ಸಂವಿಧಾನದ ಆಧಾರ ಸ್ತಂಭಗಳು. ಜೀವನ ಮತ್ತು ವೈಯಕ್ತಿಕ ಸ್ವಾತಂತ್ರ್ಯಗಳು ಸಂವಿಧಾನದ ಸೃಷ್ಠಿಯಲ್ಲ. ಸಂವಿಧಾನವು ಈ ಹಕ್ಕುಗಳನ್ನು ಪ್ರತಿಯೊಬ್ಬ ಮನುಷ್ಯನಲ್ಲಿ ಅಂತರ್ಗತವಾಗಿರುವ, ಮನುಷ್ಯರಿಂದ ಬೇರ್ಪಡಿಸಲಾಗದ ಮೂಲಾಂಶಗಳೆಂದು ಗುರುತಿಸುತ್ತದೆ.

ಮುಂದುವರೆದು, ಅದೇ ತೀರ್ಪಿನಲ್ಲಿ ಸಾಂವಿಧಾನಿಕ ಮೌಲ್ಯವಾಗಿ ಘನತೆಯ ಪಾತ್ರವನ್ನು ವಿವರಿಸಲಾಗಿದೆ:

> *'ಬದುಕುವುದು ಎಂದರೆ ಘನತೆಯಿಂದ ಬದುಕುವುದು ಎಂದರ್ಥ. ಸಂವಿಧಾನದ ಕರಡು ರಚನಕಾರರು ಒಂದು ಸಮಾಜದ ದರ್ಶನವನ್ನು ಕಂಡಿದ್ದರು. ಅಲ್ಲಿ ಸ್ವಾತಂತ್ರ್ಯ, ಘನತೆ ಮತ್ತು ಇತರೆ ಹಕ್ಕುಗಳನ್ನು ಹೊಂದುವ ಮೂಲಕ ಸಾಂವಿಧಾನಿಕ ಮೌಲ್ಯಗಳು ಸಾಧಿಸಲ್ಪಡುತ್ತವೆ. ಘನತೆಯು ಎಷ್ಟು ಮೂಲಭೂತ ಅಂಶವಾಗಿದೆ ಎಂದರೆ, ಅದು ಸಂವಿಧಾನದ ಮೂರನೇ ಅಧ್ಯಾಯದಲ್ಲಿ ಹೇಳಿರುವ ಬೇರೆಲ್ಲ ಹಕ್ಕುಗಳನ್ನೂ ಆವರಿಸಿಕೊಳ್ಳುತ್ತದೆ. ಮೂಲಭೂತ ಹಕ್ಕುಗಳು ಪ್ರಧಾನವಾಗಿ ಮನುಷ್ಯರ ಘನತೆಯನ್ನು ಎತ್ತಿಹಿಡಿಯುವ, ಘನತೆಯ ಅಸ್ಥಿತ್ವವನ್ನು ನೀಡುವ ಉದ್ದೇಶ ಹೊಂದಿರುವುದರಿಂದ, ಘನತೆಯು ಎಲ್ಲ ಮೂಲಭೂತ ಹಕ್ಕುಗಳನ್ನು ಕೂಡಿಸುವ ಕೇಂದ್ರ ಬಿಂದುವಾಗಿದೆ. ಖಾಸಗಿತನ ಹಾಗೂ ಅದರೊಂದಿಗಿನ ಮೌಲ್ಯಗಳು ವ್ಯಕ್ತಿಗೆ ಘನತೆಯ ಭರವಸೆಯನ್ನು ನೀಡುತ್ತವೆ. ಯಾವಾಗ ಘನತೆಯಿಂದ ಬದುಕಲು ಸಾಧ್ಯವಾಗುತ್ತದೆಯೋ ಆಗ ಮಾತ್ರ ಸ್ವಾತಂತ್ರ್ಯಕ್ಕೆ ಅರ್ಥ ಬರುತ್ತದೆ.*

*ಖಾಸಗಿತನದ ಹಕ್ಕು, ಬದುಕುವ ಹಕ್ಕು ಹಾಗೂ ಸ್ವಾತಂತ್ರ್ಯದ ಹಕ್ಕುಗಳು ಘನತೆಯನ್ನು ಖಚಿತಪಡಿಸುತ್ತವೆ.'*

ನಾವು ಘನತೆಯನ್ನು ಅಪಮಾನದ ವಿರುದ್ಧಾರ್ಥಕ ತತ್ವವೆಂದು, ಹಾಗೂ ಮಾನವೀಯತೆಯ ನಿಜವಾದ ಅರ್ಥವನ್ನು ವಿವರಿಸಬಹುದಾದ ಕೇಂದ್ರತತ್ವವೆಂದು ಪರಿಗಣಿಸಬಹುದು. ಈ ಪರಿಕಲ್ಪನೆಯು ಸರ್ವೋಚ್ಚ ನ್ಯಾಯಾಲಯದ ಅರ್ಥೈಸುವಿಕೆಯಲ್ಲಿ ತನ್ನ ಮೌಲ್ಯವನ್ನು ಕಂಡುಕೊಂಡಿದೆ. *'ನವತೇಜ್ ಸಿಂಗ್ ಜೊಹರ್ ವರ್ಸಸ್ ಭಾರತ ಒಕ್ಕೂಟ'* ಪ್ರಕರಣದಲ್ಲಿ ಭಾರತೀಯ ದಂಡ ಸಂಹಿತೆಯ ಕಲಂ 377 ವ್ಯಕ್ತಿಯ ಸ್ವಾಯತ್ತತೆ ಮತ್ತು ಆಯ್ಕೆಯ ಹಕ್ಕನ್ನು ನಿರಾಕರಿಸುವುದರಿಂದ, ಅದು ವ್ಯಕ್ತಿಯ ಘನತೆಯ ಹಕ್ಕನ್ನು ಉಲ್ಲಂಘಿಸುತ್ತಿದೆ ಎಂದು ನ್ಯಾಯಾಲಯ ಹೇಳಿತು.

*'ಈ ನಿಬಂಧನೆಯು ಲಿಂಗತ್ವ ಅಲ್ಪಸಂಖ್ಯಾತರ ವೈಯಕ್ತಿಕ ಸ್ವಾತಂತ್ರ್ಯವನ್ನು, ಅಂದರೆ ಅವರು ಸ್ವಇಚ್ಛೆಯಿಂದ ತಮಗೆ ಇಷ್ಟವಾದ ಜೊತೆಗಾರರೊಂದಿಗೆ, ಸುರಕ್ಷಿತ ಹಾಗು ಅನುಕೂಲಕರವಾದ ಸ್ಥಳದಲ್ಲಿ ಒಪ್ಪಿತ ಲೈಂಗಿಕ ಚಟುವಟಿಕೆ ನಡೆಸುವ ಸ್ವಾತಂತ್ರ್ಯವನ್ನು ಮೊಟಕುಗೊಳಿಸಿದ್ದು ಇದು ಸಂವಿಧಾನದ 21ನೇ ಅನುಚ್ಛೇದವನ್ನು ಉಲ್ಲಂಘಿಸುತ್ತದೆ. ಇದು ಜೊತೆಗಾರರೊಂದಿಗೆ ಸ್ಥಿರವಾದ ಹಾಗೂ ಅರ್ಥಪೂರ್ಣವಾದ ಸಂಬಂಧವನ್ನು ಹೊಂದಲು ಅವರಿಗೆ ಅಡಚಣೆ ಉಂಟುಮಾಡುತ್ತದೆ. ಹೀಗಾಗಿ ಲಿಂಗತ್ವ ಅಲ್ಪಸಂಖ್ಯಾತರು (LGBTQI) ಜೀವನಪರ್ಯಂತ ಜೊತೆಗಾರರಿಲ್ಲದೆ ಏಕಾಂಗಿಗಳಾಗಿ ಅಥವಾ ಬಂಧಿತರಲ್ಲದ ಅಪರಾಧಿಗಳಂತೆ ಮುಚ್ಚುಮರೆಯಲ್ಲಿ ಜೀವನ ನಡೆಸಬೇಕಾಗುತ್ತದೆ.'*

ವ್ಯಕ್ತಿಯ ಘನತೆಯನ್ನು ರಕ್ಷಣೆ ಮಾಡುವುದು ಸಂವಿಧಾನದ ಮೂಲಮಂತ್ರವಾಗಿದೆ. ಅದು ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಆಲೋಚನೆಯ ಬೀಜಮಂತ್ರವೂ ಆಗಿತ್ತು. ಮೇಲೆ ವಿಷದೀಕರಿಸಿದ ಸರ್ವೋಚ್ಚ ನ್ಯಾಯಾಲಯದ ವ್ಯಾಖ್ಯಾನಗಳು ಈ ಪರಿಕಲ್ಪನೆಗೆ ಹೊಸ ಜೀವವನ್ನು ನೀಡಿವೆ. ಸ್ವಾತಂತ್ರ್ಯ ಮತ್ತು ಸಮಾನತೆಗಳಂತೆ ಘನತೆ ಕೂಡ ಒಂದು ಚಲನಶೀಲ ಪರಿಕಲ್ಪನೆಯಾಗಿದೆ. ಹೊಸ ಸಾಮಾಜಿಕ ಚಳವಳಿಗಳು ವ್ಯಕ್ತಿಯ ಘನತೆಗೆ ಹೊಸ ಅರ್ಥವನ್ನು ತಂದಂತೆಲ್ಲಾ ಈ ಸಾಂವಿಧಾನಿಕ ನುಡಿಗಟ್ಟಿನ ಅರ್ಥವ್ಯಾಪ್ತಿಯು ವಿಸ್ತರಿಸುತ್ತಾ ಹೋಗುತ್ತದೆ.

●

# ಕೊನೆಯ ಮಾತು

ಸಂವಿಧಾನದ ಮೌಲ್ಯಗಳನ್ನು ಸಾರಸಂಗ್ರಹವಾಗಿ ಬಿಂಬಿಸುವ ಪೀಠಿಕೆಯು ಹಲವು ಹೋರಾಟಗಳ ಪ್ರತಿಫಲ ಎನ್ನುವುದನ್ನು ಎತ್ತಿಹಿಡಿಯಲು ಈ ಕಿರುಪುಸ್ತಕವು ಪ್ರಯತ್ನಿಸಿದೆ. ಇತಿಹಾಸದ ಮಸೂರವಿಲ್ಲದೆ ಪೀಠಿಕೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಆ ನೋಟವಿಲ್ಲದೆ ಹೋದರೆ ಸಂವಿಧಾನವು ಶುದ್ಧ ಕಾನೂನನ್ನು ಬೋಧಿಸುವ ವಕೀಲರ ದಸ್ತಾವೇಜು ಮಾತ್ರ ಆಗಿಬಿಡುತ್ತದೆ. ನೆಹರೂ ಅವರು ಹೇಳಿದಂತೆ ಸಂವಿಧಾನವು ವಕೀಲರಿಂದ 'ಅಪಹರಿಸಲ್ಪಟ್ಟು ಶುದ್ಧೀಕರಿಸಲ್ಪಟ್ಟಿದೆ'. ಸಂವಿಧಾನವನ್ನು ಅದರ ನಿಜವಾದ ಮಾಲೀಕರಾದ ಭಾರತದ ಜನತೆಗೆ ಪುನರ್ ಅರ್ಪಿಸುವ ಕೆಲಸ ಈಗ ನಡೆಯಬೇಕಿದೆ.

ಸಮಕಾಲೀನ ಹೋರಾಟಗಳ ಮೂಲಕ ಜನರು ಸಂವಿಧಾನದ ಮೇಲೆ ತಮ್ಮ ಒಡೆತನವನ್ನು ಪ್ರತಿಪಾದಿಸುತ್ತಾರೆ. ಧರ್ಮದ ಆಧಾರದ ಮೇಲೆ ತಾರತಮ್ಯ ಮಾಡುವುದು ತಪ್ಪು, ಮಹಿಳೆಯರು ಪುರುಷರಿಗೆ ಸಮಾನರು ಮತ್ತು ಲಿಂಗತ್ವ ಅಲ್ಪಸಂಖ್ಯಾತರು ಘನತೆ ಮತ್ತು ಹಕ್ಕುಗಳ ವಿಷಯದಲ್ಲಿ ಭಿನ್ನಲಿಂಗೀಯ ವ್ಯಕ್ತಿಗಳಿಗೆ ಸರಿಸಮಾನರು ಎಂದು ಪ್ರತಿಪಾದಿಸಲು ಪೀಠಿಕೆಯಲ್ಲಿರುವ ಸಾಂವಿಧಾನಿಕ ಮೌಲ್ಯಗಳು ಅನುವು ಮಾಡಿಕೊಡುತ್ತವೆ. ತಮ್ಮ ಸಾಂವಿಧಾನಿಕ ಹಕ್ಕುಗಳಿಗಾಗಿ ಬೇರೆ ಬೇರೆ ವರ್ಗಗಳು ಮಾಡುವ ಆಗ್ರಹಗಳು ಸಂವಿಧಾನವನ್ನು

ಹದಗೊಳಿಸುತ್ತದೆ ಮಾತ್ರವಲ್ಲದೆ ಸಾಂವಿಧಾನಿಕ ಮೌಲ್ಯಗಳನ್ನು ಜನರ ಮನಸ್ಸಿನಲ್ಲಿ ಮತ್ತು ಹೃದಯದಲ್ಲಿ ಆಳವಾಗಿ ಬಿತ್ತುತ್ತವೆ. ಈ ಸ್ವರೂಪದ ಸಮಕಾಲೀನ ಹೋರಾಟಗಳು ಸಂವಿಧಾನವನ್ನು ಜೀವಂತ ದಸ್ತಾವೇಜನ್ನಾಗಿ ಮಾಡಿದ್ದು, ಸಮಕಾಲೀನ ಸಮಾಜದ ಸಮಸ್ಯೆಗಳೊಂದಿಗೆ ನಿರಂತರ ಸಂಭಾಷಣೆಯಲ್ಲಿ ತೊಡಗಿರುವಂತೆಯೂ ಮಾಡಿದೆ.

ಪೀಠಿಕೆಯಲ್ಲಿರುವ ಸಾಂವಿಧಾನಿಕ ಮೌಲ್ಯಗಳ ಪ್ರಾಮುಖ್ಯತೆಯೆಂದರೆ, ಈ ಮೌಲ್ಯಗಳನ್ನು ವಿವಿಧ ತಲೆಮಾರುಗಳು ತಮ್ಮ ಕಾಲಘಟ್ಟದ ನೆಲೆಯಿಂದ ಅರ್ಥೈಸಬಹುದು ಹಾಗೂ ಸ್ವಾತಂತ್ರ್ಯ, ಸಮಾನತೆ, ನ್ಯಾಯಪರತೆ ಮತ್ತು ಬಂಧುತ್ವದ ಪರಿಕಲ್ಪನೆಗಳ ಅರ್ಥಕ್ಕೆ ವಿಭಿನ್ನ ಆಯಾಮಗಳನ್ನು ಸೇರಿಸಲೂ ಬಹುದು. ಅಮೆರಿಕ ಸಂಯುಕ್ತ ರಾಷ್ಟ್ರದ ಸಂವಿಧಾನವು ಅಮೆರಿಕದ ಜನರಿಗೆ ಹೇಗೆ ಪ್ರಸ್ತುತವಾಗುತ್ತದೆ ಎನ್ನುವುದರ ಕುರಿತು ಆ ದೇಶದ ನ್ಯಾಯಮೂರ್ತಿ ಕೆನಡಿ ಅವರು ಹೇಳಿರುವುದನ್ನು ಇಲ್ಲಿ ಉಲ್ಲೇಖಿಸುವುದು ಅತ್ಯಂತ ಸೂಕ್ತವಾಗಿದೆ:

> *ಐದನೇ ತಿದ್ದುಪಡಿ ಅಥವಾ ಹದಿನಾಲ್ಕನೆಯ ತಿದ್ದುಪಡಿಯ ಪ್ರಕ್ರಿಯಾತ್ಮಕ ನಿಬಂಧನೆಗಳನ್ನು ರಚಿಸಿದವರು ಮತ್ತು ಅಂಗೀಕರಿಸಿದವರಿಗೆ ಸ್ವಾತಂತ್ರ್ಯದ ಬಹುಮುಖಿ ಆಯಾಮಗಳು ಮೊದಲೇ ತಿಳಿದಿದ್ದರೆ ಅವರು ಇನ್ನಷ್ಟು ನಿಖರವಾಗಿ ಅದನ್ನು ವ್ಯಾಖ್ಯಾನಿಸುತ್ತಿದ್ದರು. ಸ್ವಾತಂತ್ರ್ಯದ ಅರ್ಥವ್ಯಾಪ್ತಿಯನ್ನು ಚೌಕಟ್ಟಿನಲ್ಲಿ ಬಂಧಿಸದೆ ವಿಸ್ತಾರವಾಗಿಯೇ ಇರಿಸಿದರು. ಕಾಲವು ಕೆಲವು ಸತ್ಯಗಳಿಗೆ ನಮ್ಮನ್ನು ಕುರುಡಾಗಿಸಬಹುದು ಹಾಗೂ ಒಂದು ಕಾಲಘಟ್ಟದಲ್ಲಿ ತುಂಬಾ ಅಗತ್ಯ ಮತ್ತು ಉಪಯುಕ್ತವೆನಿಸುವ ಕಾನೂನುಗಳು ಮತ್ತೊಂದು ಕಾಲಘಟ್ಟದಲ್ಲಿ ದಬ್ಬಾಳಿಕೆಯ ಅಸ್ತ್ರವಾಗಬಹುದು ಎನ್ನುವುದು ಮುಂದಿನ ತಲೆಮಾರುಗಳಿಗೆ ಅರ್ಥವಾಗುತ್ತದೆ ಎಂದು ಅವರು ಭಾವಿಸಿದ್ದರು. ಸಂವಿಧಾನವು ಕಾಲದಿಂದ ಕಾಲಕ್ಕೆ ಮುಂದುವರೆದಂತೆಲ್ಲಾ, ಪ್ರತಿ ಪೀಳಿಗೆಯ ಜನರೂ ಹೆಚ್ಚಿನ ಸ್ವಾತಂತ್ರ್ಯದ ಹುಡುಕಾಟದಲ್ಲಿ ಸಂವಿಧಾನದ ತತ್ವಗಳನ್ನು ಮತ್ತೆ ಮತ್ತೆ ಮುನ್ನೆಲೆಗೆ ತರುತ್ತಾರೆ.* [92]

ಇಂದಿನ 'ಪೀಳಿಗೆಯ' ಜನರು 'ಹೆಚ್ಚಿನ ಸ್ವಾತಂತ್ರ್ಯಕ್ಕಾಗಿನ ತಮ್ಮ ಹುಡುಕಾಟ'ದಲ್ಲಿ ನಮ್ಮ ಸಾಂವಿಧಾನಿಕ ಮೌಲ್ಯಗಳನ್ನು ಮತ್ತೆ ಮುನ್ನೆಲೆಗೆ ತರಲಿ ಎಂಬ ಆಶಯದಿಂದ ಈ ಕಿರುಪುಸ್ತಕವು ಸಾಂವಿಧಾನಿಕ ಮೌಲ್ಯಗಳನ್ನು ಸರಳವಾಗಿ ವಿವರಿಸಲು ಪ್ರಯತ್ನಿಸುತ್ತದೆ. [93]

# ಕೊನೆಯ ಟಿಪ್ಪಣಿಗಳು

| ಕ್ರ. ಸಂ. | ಟಿಪ್ಪಣಿ |
|---|---|
| 1 | ವಕೀಲರಾದ ಪ್ರೊಫೆಸರ್ ಬಾಲಗೋಪಾಲ್ ಪ್ರಖ್ಯಾತ ಮಾನವಹಕ್ಕುಗಳ ಹೋರಾಟಗಾರರು. ಮೂಲತಃ ಆಂದ್ರಪ್ರದೇಶದವರಾಗಿದ್ದು ಇವರ ಬರಹ ಮತ್ತು ಕೆಲಸಗಳ ಕುರಿತಾದ ಹೆಚ್ಚಿನ ಮಾಹಿತಿಯನ್ನು ಇಲ್ಲಿ ಪಡೆಯಬಹುದು: balagopal.org |
| 2 | ಜನಮ್ ಸಾಕ್ಷಿ ಅವರು ಮಾಡಿರುವ ಬಾಲಗೋಪಾಲ್ ಅವರ ಸಂದರ್ಶನ, ಕೊಂಡಿ www.balagopal.org |
| 3 | ಕೆ.ಜಿ.ಕಣ್ಣಬೀರನ್, ದಿ ವೇಜ್ ಆಫ್ ಇಂಪ್ಯುನಿಟಿ, ಓರಿಯಂಟ್ ಲಾಂಗ್‌ಮನ್, ಪುಟ 18 |
| 4 | ಸಂವಿಧಾನ ಸಭೆ ಚರ್ಚೆ, ಸಂಪುಟ 1, ಡಿಸೆಂಬರ್ 13, 1946 |
| 5 | ಬಿಪಿನ್ ಚಂದ್ರ, ಇಂಡಿಯಾಸ್ ಸ್ಟ್ರಗಲ್ ಫಾರ್ ಇಂಡಿಪೆಂಡೆನ್ಸ್, ಪೆಂಗ್ವಿನ್, 2016, ಪುಟ 521 |
| 6 | ಹೋಮರ್ ಜ್ಯಾಕ್, ಸಂಪಾದಿತ, ದಿ ಗಾಂಧಿ ರೀಡರ್, ಗ್ರೋವರ್, ಪುಟ 191 |
| 7 | ಮೇಲಿನದೇ ಪುಸ್ತಕ, ಪುಟ 193 |
| 8 | ಮೇಲಿನದೇ ಪುಸ್ತಕ, ಪುಟ 119 |
| 9 | ಮೇಲಿನದೇ ಪುಸ್ತಕ, ಪುಟ 120 |
| 10 | ಮೇಲಿನದೇ ಪುಸ್ತಕ, ಪುಟ 6 |

| | |
|---|---|
| 11 | ಸುದೀಪ್ತೋ ಕವಿರಾಜ್, ಗಾಂಧಿಸ್ ಟ್ರಯಲ್ ಅಂಡ್ ಇಂಡಿಯಾಸ್ ಕೊಲೋನಿಯಲ್ ಸ್ಟೇಟ್ ಇನ್ ಎಕ್ಸ್‌ಪೀರಿಯನ್ಸಿಂಗ್ ದಿ ಸ್ಟೇಟ್, ಪುಟ 308 (ಲಾಯ್ಡ್ ರುಡಾಲ್ಫ್ ಮತ್ತು ಜಾನ್ ಕರ್ಟ್ ಅವರಿಂದ ಸಂಪಾದಿತ, 2006) |
| 12 | ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಉಪಸಮಿತಿಯು ನೇಮಕ ಮಾಡಿದ್ದ ಕಮಿಷನರ್ ಅವರ ವರದಿ, ಪುಟ |
| 13 | ಮೊಹಮದ್ ಸುಕುರ್ ಆಲಿ ವರ್ಸಸ್ ಸ್ಟೇಟ್ ಆಫ್ ಅಸ್ಸಾಂ, https://indiankanoon.org/doc/1470346/ |
| 14 | ಅನುಚ್ಛೇದ 22(1): ಬಂಧನಕ್ಕೊಳಗಾದ ವ್ಯಕ್ತಿಗೆ ಬಂಧನದ ಕಾರಣವನ್ನು ಎಷ್ಟು ಬೇಗ ಸಾಧ್ಯವೋ ಅಷ್ಟು ಶೀಘ್ರವಾಗಿ ತಿಳಿಸಬೇಕು. ಕಾರಣ ತಿಳಿಸದೆ ವ್ಯಕ್ತಿಯನ್ನು ಬಂಧನದಲ್ಲಿ ಇರಿಸಿಕೊಳ್ಳುವಂತಿಲ್ಲ. ಹಾಗೂ ಆ ವ್ಯಕ್ತಿಯು ತನ್ನ ಪರವಾಗಿ ವಾದ ಮಂಡಿಸಲು ತನ್ನ ಆಯ್ಕೆಯ ವಕೀಲರನ್ನು ನೇಮಕ ಮಾಡಿಕೊಳ್ಳಲು ಅವಕಾಶ ನೀಡಬೇಕು. |
| 15 | ಎ.ಎಸ್. ಮೊಹಮ್ಮದ್ ರಫಿ ವರ್ಸಸ್ ಸ್ಟೇಟ್ ಆಫ್ ತಮಿಳುನಾಡು, ಎಐಆರ್ 2011, ಎಸ್‌ಸಿ 308 |
| 16 | ಬಿ.ಟಿ. ವೆಂಕಟೇಶ್ ಮತ್ತು ಇತರರು ವರ್ಸಸ್ ಸ್ಟೇಟ್ ಆಫ್ ಕರ್ನಾಟಕ |
| 17 | https://www.livelaw.in/news-updates/every-one-has-right-to-fair-trial-kangaroo-courts-not-permitted-karnataka-hc-on-hubli-bar-resolution-against-kashmiri-students153985#:~:text=Everyone%20has%20the%20right%20to,of%20the%20Criminal%20 Procedure%20Code |
| 18 | ಮೇಲಿನದೇ ಮೂಲ |
| 19 | ರಾಜ್‌ಮೋಹನ್ ಗಾಂಧಿ, ಮೋಹನ್‌ದಾಸ್: ಎ ಟ್ರೂ ಸ್ಟೋರಿ ಆಫ್ ಎ ಮ್ಯಾನ್, ಹಿಸ್ ಪೀಪಲ್ ಅಂಡ್ ಆ್ಯನ್ ಎಂಪೈರ್, ಪೆಂಗ್ವಿನ್, 2007, ಪುಟ 396 |

| | |
|---|---|
| 20 | https://scroll.in/article/806606/why-the-uniquely-revolutionary-potential-of-ambedkarsconstitution-remains-untapped |
| 21 | ಆನಂದ್ ತೇಲ್ತುಂಬ್ಡೆ, ಮಹಾಡ್, ಆಕಾರ್, ನವದೆಹಲಿ, 2016, ಪುಟ 108 |
| 22 | ಬಾಂಬೆ ವಿಧಾನಪರಿಷತ್ತಿನ ಸದಸ್ಯ ಎಸ್.ಕೆ. ಬೋಲೆ ಅವರು 1923ರ ಅಕ್ಟೋಬರ್ 4ರಂದು ಈ ಕೆಳಗಿನಂತೆ ನಿರ್ಣಯವೊಂದನ್ನು ಮಂಡಿಸಿದರು: 'ಸಾರ್ವಜನಿಕ ನಿಧಿಯಲ್ಲಿ ನಿರ್ಮಾಣ ಮತ್ತು ನಿರ್ವಹಣೆ ಮಾಡುತ್ತಿರುವಂತಹ ಹಾಗೂ ಸರ್ಕಾರವು ನೇಮಕ ಮಾಡಿದ ಅಥವಾ ಸರ್ಕಾರದ ಅಧಿನಿಯಮದ ಮೂಲಕ ಕಾರ್ಯಾಚರಣೆ ಮಾಡುತ್ತಿರುವ ಸಂಸ್ಥೆಗಳು ನಿರ್ವಹಣೆ ಮಾಡುತ್ತಿರುವಂತಹ ಎಲ್ಲ ಸಾರ್ವಜನಿಕ ಸ್ಥಳಗಳು ಮತ್ತು ಸೌಲಭ್ಯಗಳನ್ನು–ಸಾರ್ವಜನಿಕ ನೀರಿನ ಸೌಲಭ್ಯಗಳು, ಬಾವಿ, ಧರ್ಮಶಾಲೆ, ಶಾಲೆಗಳು, ನ್ಯಾಯಾಲಯ, ಸರ್ಕಾರಿ ಕಚೇರಿಗಳು, ಆಸ್ಪತ್ರೆಗಳು, ಮೊದಲಾದವುಗಳನ್ನು– ಅಸ್ಪೃಶ್ಯ ಸಮುದಾಯದ ಉಪಯೋಗಕ್ಕೆ ತೆರೆದಿಡಬೇಕು ಎಂದು ಪರಿಷತ್ತು ಶಿಫಾರಸ್ಸು ಮಾಡುತ್ತದೆ.' 1926ರಲ್ಲಿ ಬಾಂಬೆ ವಿಧಾನ ಪರಿಷತ್ತು ಇದಕ್ಕೆ ಮತ್ತೊಂದು ಅಂಶವನ್ನು ಸೇರಿಸಿ, 'ದುರ್ಬಲ ವರ್ಗಗಳಿಗೆ ಸೌಲಭ್ಯಗಳನ್ನು ಮತ್ತು ಅವಕಾಶಗಳನ್ನು ನಿರಾಕರಿಸುವ ನಗರಸಭೆಗಳಿಗೆ ಸರ್ಕಾರದ ಅನುಧಾನ ಲಭ್ಯವಾಗುವುದಿಲ್ಲ' ಎಂದಿತು. – ಆನಂದ್ ತೇಲ್ತುಂಬ್ಡೆ, ಮಹಾಡ್, ಆಕಾರ್, ನವದೆಹಲಿ, 2016 ಪುಟ 108 |
| 23 | ಮೇಲಿನದೇ ಪುಸ್ತಕ, ಪುಟ 126 |
| 24 | ಭಾರತದ ಮಹತ್ವದ ವಿದ್ವಾಂಸರು, ಪ್ರೊಫೆಸರ್ ಹಾಗೂ ಅಂಕಣಕಾರರೂ ಆಗಿರುವ ಪ್ರೊ. ಆನಂದ ತೇಲ್ತುಂಬ್ಡೆ ಅವರು ಗೋವಾದಲ್ಲಿ ನೆಲೆಸಿರುತ್ತಾರೆ. ಪ್ರಸ್ತುತ ಅವರನ್ನು ಕೋರೆಗಾಂವ್ ಪ್ರಕರಣ ಸಂಬಂಧ ಬಂಧನದಲ್ಲಿ ಇಡಲಾಗಿದೆ. ಅವರ ಕೆಲವು ಪುಸ್ತಕಗಳು: ಮಹಾಡ್: ದಿ ಮೇಕಿಂಗ್ ಆಫ್ ದಿ ಫರ್ಸ್ಟ್ ರಿವೋಲ್ಟ್, ದಿ ಪರ್ಸಿಸ್ಟೆನ್ಸ್ ಆಫ್ ಕಾಸ್ಟ್: ದಿ ಖೈರ್ಲಾಂಜಿ ಮರ್ಡರ್ಸ್ ಅಂಡ್ ಇಂಡಿಯಾಸ್ ಹಿಡನ್ ಅಪಾರ್ಥೈಡ್ ಮತ್ತು ರಿಪಬ್ಲಿಕ್ ಆಫ್ ಕಾಸ್ಟ್. |
| 25 | ಮೇಲಿನದೇ ಪುಸ್ತಕ, ಪುಟ 141 |

| | |
|---|---|
| 26 | ಮೇಲಿನದೇ ಪುಸ್ತಕ, ಪುಟ 146 |
| 27 | ಮೇಲಿನದೇ ಪುಸ್ತಕ, ಪುಟ 147 |
| 28 | ಮೇಲಿನದೇ ಪುಸ್ತಕ, ಪುಟ 174 |
| 29 | ಮೇಲಿನಂತೆ |
| 30 | ಮೇಲಿನದೇ ಪುಸ್ತಕ, ಪುಟ 206 |
| 31 | ಮೇಲಿನದೇ ಪುಸ್ತಕ, ಪುಟ 208 |
| 32 | ವಸಂತ್ ಮೂನ್, ಸಂಪಾದಿತ, ಬಾಬಾಸಾಹೇಬ್ ಅಂಬೇಡ್ಕರ್ ರೈಟಿಂಗ್ಸ್ ಅಂಡ್ ಸ್ಪೀಚಸ್, ಸಂಪುಟ 1, ಅಂಬೇಡ್ಕರ್ ಫೌಂಡೇಷನ್, ಮುಂಬೈ, 2014 ಪುಟ 62; ತೇಲ್ತುಂಬ್ಡೆ, 2016 |
| 33 | ಬಿಪಿನ್ ಚಂದ್ರ, ಇಂಡಿಯಾಸ್ ಸ್ಟ್ರಗಲ್ ಫಾರ್ ಇಚಿಡಿಪೆಂಡೆನ್ಸ್, ಪೆಂಗ್ವಿನ್ ಪ್ರಕಾಶನ, 1989, ಪುಟ 120 |
| 34 | ವಸಂತ್ ಮೂನ್, ಸಂಪಾದಿತ, ಬಾಬಾಸಾಹೇಬ್ ಅಂಬೇಡ್ಕರ್ ರೈಟಿಂಗ್ಸ್ ಅಂಡ್ ಸ್ಪೀಚಸ್, ಸಂಪುಟ 10, ಅಂಬೇಡ್ಕರ್ ಫೌಂಡೇಷನ್, ಮುಂಬೈ, 2014, ಪುಟ 319 |
| 35 | ಮನುಷ್ಯರ ಮಾರಾಟ ಮತ್ತು ಬಲವಂತದ ದುಡಿಮೆ ನಿಷೇಧ<br>ಮನುಷ್ಯರ ಮಾರಾಟ, ಭಿಕ್ಷುಕ ಮತ್ತು ಇತರ ರೀತಿಯ ಬಲವಂತದ ದುಡಿಮೆಯನ್ನು ನಿಷೇಧಿಸಲಾಗಿದೆ ಮತ್ತು ಈ ನಿಬಂಧನೆಯ ಯಾವುದೇ ಉಲ್ಲಂಘನೆಯು ಕಾನೂನಿನ ಪ್ರಕಾರ ಶಿಕ್ಷಾರ್ಹ ಅಪರಾಧವಾಗಿರುತ್ತದೆ<br>ಸಾರ್ವಜನಿಕ ಉಪಯೋಗಕ್ಕಾಗಿ ಕಡ್ಡಾಯ ಸೇವೆ ವಿಧಿಸುವುದನ್ನು ಈ ವಿಧಿಯು ತಡೆಯುವುದಿಲ್ಲ ಹಾಗೂ ಈ ಕಡ್ಡಾಯ ಸೇವೆಯನ್ನು ವಿಧಿಸುವಾಗ ಸರ್ಕಾರವು ಧರ್ಮ, ಜನಾಂಗ, ಜಾತಿ ಅಥವಾ ವರ್ಗಗಳ ಆಧಾರದ ಮೇಲೆ ಯಾವುದೇ ತಾರತಮ್ಯವನ್ನು ಮಾಡಬಾರದು |
| 36 | ಪಿಯುಡಿಆರ್ ವರ್ಸಸ್ ಯೂನಿಯನ್ ಆಫ್ ಇಂಡಿಯಾ, https://indiankanoon.org/doc/496663/ |

| | |
|---|---|
| 37 | ಅನುಚ್ಛೇದ 24, ಭಾರತದ ಸಂವಿಧಾನ: ಕಾರ್ಖಾನೆಗಳಲ್ಲಿ ಮಕ್ಕಳ ದುಡಿಮೆ ನಿಷೇಧ, ಇತ್ಯಾದಿ. ಹದಿನಾಲ್ಕು ವರ್ಷಕ್ಕಿಂತ ಕಡಿಮೆ ವಯಸ್ಸಿನ ಯಾವುದೇ ಮಗುವನ್ನು ಯಾವುದೇ ಕಾರ್ಖಾನೆ ಅಥವಾ ಗಣಿಗಳಲ್ಲಿ ಕೆಲಸ ಮಾಡಲು ಅಥವಾ ಯಾವುದೇ ಅಪಾಯಕಾರಿ ಉದ್ಯೋಗದಲ್ಲಿ ತೊಡಗಿಸಿಬಾರದು. |
| 38 | ಸರ್ಕಾರದಲ್ಲಿ ಭಾರತೀಯರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಲು ಬ್ರಿಟಿಷ್ ಸಂಸತ್ತು ಭಾರತ ಸರ್ಕಾರ ಕಾಯಿದೆ, 1919ನ್ನು ಜಾರಿಗೆ ತಂದಿತು. ಭಾರತದಲ್ಲಿ ಸಾಂವಿಧಾನಿಕ ಬೆಳವಣಿಗೆಯನ್ನು ಮುಂದುವರಿಸಲು ರಚಿಸಲಾದ ಶಾಸನಗಳ ಪೈಕಿ ಇದೂ ಒಂದಾಗಿತ್ತು. |
| 39 | ಬಿಪಿನ್ ಚಂದ್ರ, India's struggle for independence (ಭಾರತದ ಸ್ವಾತಂತ್ರ್ಯ ಸಂಗ್ರಾಮ), ಪೆಂಗ್ವಿನ್, 1989 ಪುಟ 263 |
| 40 | ಡಾ. ಬಿ.ಆರ್.ಅಂಬೇಡ್ಕರ್, 'ಸ್ಟೇಟ್ಸ್ ಅಂಡ್ ಮೈನಾರಿಟೀಸ್, 1945 (ಈ ಕೊಂಡಿಯಲ್ಲಿ ಮೂಲ ಕೃತಿಯನ್ನು ಓದಬಹುದು– https://drambedkar.co.in/wp-content/uploads/books/category2/11statesand-minorities.pdf ) |
| 41 | ಸಂವಿಧಾನ ಸಭೆಯ ಚರ್ಚೆಗಳು, ಸಂಪುಟ 1, ಡಿಸೆಂಬರ್ 13, 1946 |
| 42 | 1965ರಲ್ಲಿ ನಡೆದ ಅಖಿಲ ಭಾರತ ಸಂಸದೀಯ ಪ್ರಜಾಪ್ರಭುತ್ವ ಕುರಿತ ವಿಚಾರ ಸಂಕಿರಣದಲ್ಲಿ ನೆಹರೂ ಅವರು ಮಾಡಿದ ಭಾಷಣ |
| 43 | ಡಾ. ಬಿ.ಆರ್. ಅಂಬೇಡ್ಕರ್, ಜಾತಿವಿನಾಶ, 1936 https://ccnmtl.columbia.edu/projects/mmt/ambedkar/web/readings/aoc_print_2004.pdf |
| 44 | ಸಂವಿಧಾನ ಸಭೆಯ ಚರ್ಚೆಗಳು, ಸಂಪುಟ 7, ನವೆಂಬರ್ 4, 1948, ಪುಟ 38 |
| 45 | ಸಂವಿಧಾನ (ನಲವತ್ತೆರಡನೇ) ತಿದ್ದುಪಡಿ ಕಾಯಿದೆ, 1976, ಇದು ಈ ಕೆಳಗಿನ ಕಾರಣಗಳಿಗಾಗಿ ಅತ್ಯಂತ ವಿವಾದಾತ್ಮಕ ತಿದ್ದುಪಡಿಗಳಲ್ಲಿ ಒಂದಾಗಿತ್ತು: |

| | |
|---|---|
| | 1. ಮೂಲಭೂತ ಹಕ್ಕುಗಳಿಗಿಂತ ರಾಜ್ಯಗಳ ನಿರ್ದೇಶಕ ತತ್ವಗಳಿಗೆ ಹೆಚ್ಚು ಆದ್ಯತೆ ನೀಡಬೇಕೆಂದು ತಿದ್ದುಪಡಿ ಕಾಯಿದೆಯ ಉದ್ದೇಶಗಳಲ್ಲಿ ತಿಳಿಸಲಾಗಿತ್ತು. ಮೂಲಭೂತ ಹಕ್ಕುಗಳ ಅಧ್ಯಾಯವನ್ನು ಭಾರತ ಸಂವಿಧಾನದ ಹೃದಯವೆಂದು ಪರಿಗಣಿಸುವಾಗ, ಈ ತಿದ್ದುಪಡಿಯು ನಮ್ಮ ಸಂವಿಧಾನದ ಮೂಲ ಉದ್ದೇಶಗಳಿಗೆ ಸರಿಹೊಂದಲಿಲ್ಲ. |
| | 2. ಸಂಸತ್ತು ತಾನು 'ರಾಷ್ಟ್ರ–ವಿರೋಧಿ' ಎಂದು ಪರಿಗಣಿಸುವ ಚಟುವಟಿಕೆಗಳನ್ನು ತಡೆಗಟ್ಟುವಂತಹ / ನಿಷೇಧಿಸುವಂತಹ ಶಾಸನಗಳನ್ನು ರೂಪಿಸಲು ಈ ತಿದ್ದುಪಡಿಯು ಸಂಸತ್ತಿಗೆ ಅವಕಾಶವನ್ನು ನೀಡಿತು. ಹಾಗೂ ಈ ಹೊಸ ಶಾಸನಗಳು ಅನುಚ್ಛೇದ 14 ಮತ್ತು ಅನುಚ್ಛೇದ 19ನ್ನು ಉಲ್ಲಂಘಿಸಿದರೂ ಸಹ (ಅನುಚ್ಛೇದ ‚ 31ಡಿ) ಅವುಗಳನ್ನು ಪ್ರಶ್ನಿಸುವಂತಿರಲಿಲ್ಲ. |
| | 3. ನ್ಯಾಯಾಂಗದ ಅಧಿಕಾರವನ್ನು ಕುಗ್ಗಿಸುವುದು ಈ ತಿದ್ದುಪಡಿಯ ಪ್ರಮುಖ ಲಕ್ಷಣವಾಗಿತ್ತು. ಭಾರತದ ಸಂವಿಧಾನವನ್ನು ಹೇಗೆ ರೂಪಿಸಲಾಗಿದೆ ಎಂದರೆ ಭಾರತದ ಸರ್ವೋಚ್ಚ ನ್ಯಾಯಾಲಯ ಮತ್ತು ಹಲವು ಉಚ್ಚ ನ್ಯಾಯಾಲಯಗಳು ಒಂದೇ ರೀತಿಯ ನ್ಯಾಯಾಂಗ ಅಧಿಕಾರಗಳನ್ನು ಹೊಂದಿರುತ್ತವೆ ಹಾಗೂ ಒಂದು ನ್ಯಾಯಾಲಯ ಮತ್ತೊಂದಕ್ಕೆ ಅಧೀನವಾಗಿರುವುದಿಲ್ಲ. ಒಂದು ವೇಳೆ ಮೂಲಭೂತ ಹಕ್ಕುಗಳು ಉಲ್ಲಂಘನೆಯಾದಲ್ಲಿ ಭಾರತ ಸಂವಿಧಾನದ ಅನುಚ್ಛೇದ 32 ಅಥವಾ ಅನುಚ್ಛೇದ 226ರ ಪ್ರಕಾರ ಅನುಕ್ರಮವಾಗಿ ಸರ್ವೋಚ್ಚ ನ್ಯಾಯಾಲಯ ಇಲ್ಲವೇ ಯಾವುದೇ ಉಚ್ಚ ನ್ಯಾಯಾಲಯದ ಮೊರೆ ಹೋಗಬಹುದು. ಆದರೆ ಈ 42ನೇ ತಿದ್ದುಪಡಿಯು ಈ ಸಂರಚನೆಯನ್ನು ಪಲ್ಲಟಗೊಳಿಸಿ, ಸಾಂವಿಧಾನಿಕ ನ್ಯಾಯಾಲಯಗಳಾಗಿ ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳು ಹೊಂದಿದ್ದ ಅಧಿಕಾರಗಳನ್ನು ಮೊಟಕುಗೊಳಿಸಿತು.<br>ರಾಜ್ಯದ ಕಾಯಿದೆಯೊಂದು ಮೂಲಭೂತ ಹಕ್ಕುಗಳ ಉಲ್ಲಂಘನೆ ಮಾಡಿದರೆ ಸರ್ವೋಚ್ಚ ನ್ಯಾಯಾಲಯದ ಮೊರೆ ಹೋಗಲಾಗುವುದಿಲ್ಲ; ಆದರೆ ಕೇಂದ್ರೀಯ ಕಾನೂನೂ ಸಹ ಈ ಹಕ್ಕುಗಳನ್ನು ಉಲ್ಲಂಘಿಸಿದರೆ ಸರ್ವೋಚ್ಚ ನ್ಯಾಯಾಲಯದ ಮೆಟ್ಟಿಲೇರಬಹುದು (ಅನುಚ್ಛೇದ 32ಎ ಸೇರಿಸುವುದರ ಮೂಲಕ) ಎಂದು ಅದು ಹೇಳಿತು. |

| | |
|---|---|
| | ಅದೇರೀತಿ ರಾಜ್ಯದ ಕಾಯಿದೆಗಳ ಸಾಂವಿಧಾನಿಕ ಸಿಂಧುತ್ವದ ಬಗ್ಗೆ ಮಾತ್ರ ವಿಚಾರಣೆ ನಡೆಸಲು ಉಚ್ಚ ನ್ಯಾಯಾಲಯಗಳಿಗೆ ಅನುಮತಿ ನೀಡಿ, ಅದನ್ನು ಕಾರ್ಯಗತಗೊಳಿಸಲು ಹೊಸ ಉಪಬಂಧವನ್ನು ಸೇರಿಸಲಾಯಿತು. (ಅನುಚ್ಛೇದ 226A) ಈ ತಿದ್ದುಪಡಿಗಳು ನ್ಯಾಯಾಂಗದ ಸ್ವಾತಂತ್ರ್ಯದ ಮೇಲಿನ ನೇರ ದಾಳಿಯಾಗಿದ್ದು, ಸಾಂವಿಧಾನಿಕ ಯೋಜನೆಗೆ ತೊಡಕು ಉಂಟುಮಾಡಿದವು. |
| | 4. ಈ ತಿದ್ದುಪಡಿ ಕಾಯಿದೆಯು ಸಂವಿಧಾನವನ್ನು ತಿದ್ದುಪಡಿ ಮಾಡಲು ಭಾರತದ ಸಂಸತ್ತಿಗೆ ಮುಕ್ತ ಅಧಿಕಾರ ನೀಡಲು ಬಯಸಿತು. ಅಂತಹ ತಿದ್ದುಪಡಿಗಳ ಸಾಂವಿಧಾನಿಕ ಸಿಂಧುತ್ವವನ್ನು ಪರೀಕ್ಷೆಗೆ ಒಳಪಡಿಸುವ ಅಧಿಕಾರ ನ್ಯಾಯಾಲಯಗಳಿಗೆ ಇರುವುದಿಲ್ಲ ಎಂದು ಹೇಳಿತು (ಅನುಚ್ಛೇದ 368ರನ್ನು ತಿದ್ದುಪಡಿ ಮಾಡುವ ಮೂಲಕ ಸಂವಿಧಾನವನ್ನು ತಿದ್ದುಪಡಿ ಮಾಡಲು ಸಂಸತ್ತಿಗೆ ಅಧಿಕಾರ ನೀಡಲಾಯಿತು). |
| 46 | ಸಂವಿಧಾನ ಸಭೆಯ ಚರ್ಚೆಗಳು, ಸಂಪುಟ 10, ಅಕ್ಟೋಬರ್ 17, 1949 |
| 47 | ಸಂವಿಧಾನ ಸಭೆಯ ಚರ್ಚೆಗಳು, ಸಂಪುಟ 7, ನವೆಂಬರ್ 15, 1948 |
| 48 | ಸಂವಿಧಾನ ಸಭೆಯ ಚರ್ಚೆಗಳು, ಸಂಪುಟ 7, ನವೆಂಬರ್ 15, 1948 |
| 49 | ಸಂವಿಧಾನ ಸಭೆಯ ಚರ್ಚೆಗಳು, ಸಂಪುಟ 7, ನವೆಂಬರ್ 15, 1948 |
| 50 | ಸಂವಿಧಾನ ಸಭೆಯ ಚರ್ಚೆಗಳು, ಸಂಪುಟ 7, ಡಿಸೆಂಬರ್ 3, 1948, ಪುಟ 38 |
| 51 | ಕೆ.ಎಂ. ಮುನ್ಷಿ, ಇಂಡಿಯನ್ ಕಾನ್‌ಸ್ಟಿಟ್ಯೂಷನಲ್ ಡಾಕ್ಯುಮೆಂಟ್ಸ್, ಸಂಪುಟ 1, ಭಾರತೀಯ ವಿದ್ಯಾಭವನ, 1967 |
| 52 | https://indiankanoon.org/doc/60799/ |
| 53 | ಮೇಲಿನಂತೆ |

| | |
|---|---|
| 54 | ಸಂವಿಧಾನ ಸಭೆಯ ಚರ್ಚೆಗಳು, ಸಂಪುಟ 7, ನವೆಂಬರ್ 15, 1948 |
| 55 | https://indiankanoon.org/doc/257876/ |
| 56 | ಮೇಲಿನಂತೆ |
| 57 | ಸಂವಿಧಾನ ಸಭೆಯ ಚರ್ಚೆಗಳು, ಸಂಪುಟ 1, ಡಿಸೆಂಬರ್ 19, 1946 |
| 58 | ಕೇಶವಾನಂದ ಭಾರತಿ ವರ್ಸಸ್ ಸ್ಟೇಟ್ ಆಫ್ ಕೇರಳ ಅಂಡ್ ಅನದರ್ |
| 59 | ಆಕಾಶ್ ಸಿಂಗ್ ರಾಥೋಡ್, ಅಂಬೇಡ್ಕರ್ಸ್ ಪ್ರಿಯಾಂಬಲ್, ವಿಂಟೇಜ್, ನವದೆಹಲಿ, 2020, ಪುಟ 6. |
| 60 | https://indiankanoon.org/doc/111867/ |
| 61 | ಮೇಲಿನಂತೆ |
| 62 | https://indiankanoon.org/doc/86852828/ |
| 63 | http://supremecourtofindia.nic.in/outtoday/wc40012.pdf |
| 64 | https://indiankanoon.org/doc/257876/ |
| 65 | ಸಂವಿಧಾನ ಸಭೆಯ ಚರ್ಚೆಗಳು, ಸಂಪುಟ 11, ನವೆಂಬರ್ 25, 1949, ಪುಟ 972–981 |
| 66 | https://indiankanoon.org/doc/1130169/ |
| 67 | 1860ರ ಭಾರತೀಯ ದಂಡ ಸಂಹಿತೆ ಕಲಂ 377: ಅಸ್ವಾಭಾವಿಕ ಅಪರಾಧಗಳು: ನಿಸರ್ಗದ ನಿಯಮಗಳಿಗೆ ವಿರುದ್ಧವಾಗಿ ಯಾರಾದರೂ ಯಾವುದೇ ಪುರುಷನೊಂದಿಗೆ, ಮಹಿಳೆಯೊಂದಿಗೆ ಅಥವಾ ಪ್ರಾಣಿಯೊಂದಿಗೆ ಸಂಭೋಗ ನಡೆಸಿದ್ದೇ ಆದಲ್ಲಿ ಅಂತಹವರು ಜೀವಾವಧಿ ಶಿಕ್ಷೆಗೆ ಅಥವಾ ಮರಣದಂಡನೆಗೆ ಅಥವಾ ಹತ್ತು ವರ್ಷಗಳ ಜೈಲು ವಾಸ ಮತ್ತು ದಂಡ ವಿಧಿಸುವ ಶಿಕ್ಷೆಗೆ ಗುರಿಯಾಗುತ್ತಾರೆ. |
| 68 | https://indiankanoon.org/doc/845216/ |

| | |
|---|---|
| 69 | https://indiankanoon.org/doc/42184625/ |
| 70 | ಅನುಚ್ಛೇದ 497. ವ್ಯಭಿಚಾರ – ಮತ್ತೊಬ್ಬ ಪುರುಷನ ಹೆಂಡತಿಯಾದ ಮಹಿಳೆಯೊಂದಿಗೆ, ಆಕೆಯ ಗಂಡನ ಸಮ್ಮತಿಯಿಲ್ಲದೆ ಅಥವಾ ಸಹಕಾರ ಇಲ್ಲದೆ ಲೈಂಗಿಕ ಸಂಬಂಧ ಮಾಡಿದಲ್ಲಿ ಅದು ಅತ್ಯಾಚಾರ ಹೊರತುಪಡಿಸಿ, ವ್ಯಭಿಚಾರ ಎನಿಸಿಕೊಳ್ಳುತ್ತದೆ. ಅಂತಹ ಅಪರಾಧಿಗೆ ಐದು ವರ್ಷಗಳ ಜೈಲು ಶಿಕ್ಷೆ ಅಥವಾ ದಂಡ ಅಥವಾ ಎರಡೂ ಶಿಕ್ಷೆಯನ್ನು ವಿಧಿಸಬಹುದು. ಆದರೆ ಇದರಲ್ಲಿ ಭಾಗಿಯಾದ ಹೆಣ್ಣನ್ನು ಶಿಕ್ಷೆಗೆ ಗುರಿಪಡಿಸುವಂತಿಲ್ಲ ಎನ್ನುತ್ತದೆ ಕಾಯಿದೆ. |
| 71 | https://indiankanoon.org/doc/42184625/ |
| 71 | 1860 ರ ಭಾರತೀಯ ದಂಡಸಂಹಿತೆ ಕಲಂ 377: ಅಸ್ವಾಭಾವಿಕ ಅಪರಾಧಗಳು: ನಿಸರ್ಗದ ನಿಯಮಗಳಿಗೆ ವಿರುದ್ಧವಾಗಿ ಯಾರಾದರೂ ಯಾವುದೇ ಪುರುಷನೊಂದಿಗೆ, ಮಹಿಳೆಯೊಂದಿಗೆ ಅಥವಾ ಪ್ರಾಣಿಯೊಂದಿಗೆ ಸಂಭೋಗ ನಡೆಸಿದ್ದೇ ಆದಲ್ಲಿ ಅಂತಹವರು ಜೀವಾವಧಿ ಶಿಕ್ಷೆಗೆ ಅಥವಾ ಮರಣದಂಡನೆಗೆ ಅಥವಾ ಹತ್ತು ವರ್ಷಗಳ ಜೈಲುವಾಸ ಮತ್ತು ದಂಡ ವಿಧಿಸುವ ಶಿಕ್ಷೆಗೆ ಗುರಿಯಾಗುತ್ತಾರೆ. |
| 72 | http://altlawforum.org/publications/right-tolove-navtej-singh-johar-v-union-of-india-a-transformative-constitution-and-the-rights-oflgbt-persons/ |
| 73 | ಆಕಾಶ್ ಸಿಂಗ್ ರಾಥೋಡ್, ಅಂಬೇಡ್ಕರ್ಸ್ ಪ್ರಿಯಾಂಬಲ್, ವಿಂಟೇಜ್, ನವದೆಹಲಿ, 2020. ಪುಟ 119–149 |
| 74 | ಡಾ. ಬಿ.ಆರ್. ಅಂಬೇಡ್ಕರ್:ರೈಟಿಂಗ್ಸ್ ಅಂಡ್ ಸ್ಪೀಚಸ್, ಸಂಪುಟ 12, ಸಂಪಾದನೆ–ವಸಂತ ಮೂನ, (ಬಾಂಬೆ ಶಿಕ್ಷಣ ಇಲಾಖೆ, ಮಹಾರಾಷ್ಟ್ರ ಸರ್ಕಾರ, 1933) ಅಧ್ಯಾಯ 1, ಪುಟ 661–691 http://www.columbia.edu/itc/mealac/pritchett/00ambedkar/txt_ambedkar_waiting.html |

| | |
|---|---|
| 75 | ಡಾ. ಬಿ.ಆರ್. ಅಂಬೇಡ್ಕರ್:ರೈಟಿಂಗ್ಸ್ ಅಂಡ್ ಸ್ಪೀಚಸ್, ಸಂಪುಟ 12, ಸಂಪಾದನೆ–ವಸಂತ ಮೂನ, (ಬಾಂಬೆ ಶಿಕ್ಷಣ ಇಲಾಖೆ, ಮಹಾರಾಷ್ಟ್ರ ಸರ್ಕಾರ, 1933) ಅಧ್ಯಾಯ 1, ಪುಟ 661–691 http://www.columbia.edu/itc/mealac/pritchett/00ambedkar/txt_ambedkar_waiting.html |
| 76 | ಸಂವಿಧಾನ ಸಭೆಯ ಚರ್ಚೆಗಳು, ಸಂಪುಟ 11, ನವೆಂಬರ್ 25, 1949, ಪುಟ 979 |
| 77 | ಸಂವಿಧಾನ ಸಭೆಯ ಚರ್ಚೆಗಳು, ಸಂಪುಟ 1, ಡಿಸೆಂಬರ್ 13, 1946, ಪುಟ 57–65 |
| 78 | ಸಂವಿಧಾನ ಸಭೆಯ ಚರ್ಚೆಗಳು, ಸಂಪುಟ 11, ನವೆಂಬರ್ 25, 1949, ಪುಟ 980 |
| 79 | ನರೇಂದ್ರ ಜಾಧವ್, ಸಂಪಾದಿತ, ಸಂಪುಟ 1, 2013, ಪುಟ 97 |
| 80 | ಮೇಲಿನಂತೆ |
| 81 | ಮೇಲಿನಂತೆ ಪುಟ 308 |
| 82 | ನರೇಂದ್ರ ಜಾಧವ್, ಸಂಪಾದಿತ, ಸಂಪುಟ 2, 2014, ಪುಟ 217 |
| 83 | http://puclkarnataka.org/?p=72 |
| 84 | http://puclkarnataka.org/?p=72 |
| 85 | ಚಿನ್ನಸಾಮಿ ವರ್ಸಸ್ ರಾಜ್ಯ ಸರ್ಕಾರ (https://www.livelaw.in/pdf_upload/pdf_upload-376839.pdf) |
| 86 | ಅಂಬೇಡ್ಕರ್, ವಾಟ್ ಕಾಂಗ್ರೆಸ್ ಅಂಡ್ ಗಾಂಧಿ ಹ್ಯಾವ್ ಡನ್ ಟು ದಿ ಅನ್‌ಟಚಬಲ್ಸ್, ಪುಟ 212–213 |
| 87 | ಆಕಾಶ್ ಸಿಂಗ್ ರಾಥೋರ್, ಅಂಬೇಡ್ಕರ್ಸ್ ಪ್ರಿಯಾಂಬಲ್, ವಿಂಟೇಜ್, ನವದೆಹಲಿ, 2020 |

| | |
|---|---|
| 88 | ಆಕಾಶ್ ಸಿಂಗ್ ರಾಥೋರ್, ಅಂಬೇಡ್ಕರ್ಸ್ ಪ್ರಿಯಾಂಬಲ್, ವಿಂಟೇಜ್, ನವದೆಹಲಿ, 2020 |
| 89 | https://indiankanoon.org/doc/162242 |
| 90 | https://indiankanoon.org/doc/78536/91 |
| 91 | https://indiankanoon.org/doc/127517806/92 |
| 92 | ಲಾರೆನ್ಸ್ ವರ್ಸಸ್ ಟೆಕ್ಸಸ್, 539, ಯು.ಎಸ್. 558 (2003) (https://supreme.justia.com/cases/federal/us/539/558/ ) |
| 93 | ಮೇಲಿನಂತೆ |


**ಪರ್ಯಾಯ ಕಾನೂನು ವೇದಿಕೆ**

122/4, ಇನ್‌ಫ್ಯಾಂಟ್ರಿರಸ್ತೆ, ಬಾಲಾಜಿ ಆರ್ಟ್ ಗ್ಯಾಲರಿ ಪಕ್ಕ
ಬೆಂಗಳೂರು–560001
ದೂರವಾಣಿ: +91–80–22865757
www.altlawforum.org | contact@altlawforum.org

ಪರ್ಯಾಯ ಕಾನೂನು ವೇದಿಕೆ 2000ನೇ ಇಸವಿಯಲ್ಲಿ ಸ್ಥಾಪನೆಯಾಯಿತು. ಸಾಮಾಜಿಕ ಮತ್ತು ಆರ್ಥಿಕ ಅನ್ಯಾಯಗಳಿಗೆ ಪ್ರತಿಕ್ರಿಯಿಸಲು ಹಾಗೂ ಅವುಗಳನ್ನು ಎದುರಿಸಲು ನಾವು ಬದ್ಧರಾಗಿದ್ದೇವೆ. ಶೋಷಿತ ಸಮುದಾಯಗಳಿಗೆ, ಶೋಷಣೆಗೆ ಒಳಗಾದ ವ್ಯಕ್ತಿಗಳಿಗೆ ಕಾನೂನಿನ ಮೂಲಕ ಹಾಗೂ ನ್ಯಾಯಾಲಯಗಳ ಮೂಲಕ ನ್ಯಾಯ, ಸಮಾನತೆ ಹಾಗೂ ಸ್ವಾತಂತ್ರ್ಯ ದೊರೆಯುವಂತೆ ನೆರವು ನೀಡುತ್ತೇವೆ. ಇದರ ಜೊತೆಗೆ ಕಾನೂನಿನ ಬಗ್ಗೆ ಕಾರ್ಯಾಗಾರಗಳನ್ನು, ಸಾಮಾಜಿಕ–ಆರ್ಥಿಕ ಹಾಗೂ ಕಾನೂನಾತ್ಮಕ ವಿಷಯಗಳ ಬಗ್ಗೆ ಸಂಶೋಧನೆಯನ್ನು ಸಹ ಕೈಗೊಳ್ಳುತ್ತೇವೆ.

# ಜನ ಪ್ರಕಾಶನದ ಪ್ರಕಟಣೆಗಳು




**ಜನ ಪ್ರಕಾಶನದ ಎಲ್ಲಾ ಪುಸ್ತಕಗಳು**

**www.janaprakashana.com**

ಜಾಲತಾಣದಲ್ಲಿ ಲಭ್ಯ

**ಮೊಬೈಲ್ : 96323 29955, 9980 633644**



ನಮ್ಮ ಸಂವಿಧಾನ ಜಗತ್ತಿನ ಅನೇಕ ದೇಶಗಳಿಗೆ ಮಾದರಿಯಾಗಿದೆ. ನಮ್ಮ ಸಂವಿಧಾನವು ಕೇವಲ ಒಂದು ವರ್ಗ, ಜಾತಿ, ಜನಾಂಗ ಅಥವಾ ಪ್ರದೇಶಕ್ಕೆ ಅನ್ವಯವಾಗುವಂತಹುದಲ್ಲ. ಈ ದೇಶದ ಕಟ್ಟ ಕಡೆಯ ವ್ಯಕ್ತಿ ಕೂಡ ಅದರಿಂದ ರಕ್ಷಣೆ ಪಡೆಯುವಂತೆ ಮತ್ತು ಆತನನ್ನು ಶೋಷಣೆಯಿಂದ ಹೊರತರಲು ಬೇಕಾದಂತಹ ಕಾನೂನಿನ ಆಳ್ವಿಕೆಯನ್ನು ಸಂವಿಧಾನವು ನಿರ್ದೇಶಿಸುತ್ತದೆ. ಇಂತಹ ಸಂವಿಧಾನ ರೂಪಗೊಂಡ ಹಿನ್ನೆಲೆಯಲ್ಲಿ ವಿಸ್ತಾರವಾದ ಇತಿಹಾಸ ಇದೆ. ಮತ್ತು ಸಂವಿಧಾನದ ಪೀಠಿಕೆಯು ವಿಶಿಷ್ಟ ಉದಾತ್ತ ಮತ್ತು ಎಲ್ಲರನ್ನೂ ಒಳಗೊಳ್ಳುವ ತಿರುಳು, ಭಾಷೆ ಹಾಗೂ ಅದ್ಭುತವಾದ ಮಿಡಿಯುವ ಹೃದಯವನ್ನು ಹೊಂದಿದೆ.

- ಭಾನು ಮುಷ್ತಾಕ್



ಸಂವಿಧಾನದ ಮುಖ್ಯ ಅಂಶಗಳನ್ನು ಅತ್ಯಂತ ಸರಳವಾಗಿ ನಮಗೆ ತಿಳಿಸಿಕೊಟ್ಟು ನಮ್ಮ ಆತ್ಮಾಭಿಮಾನವನ್ನು ಹೆಚ್ಚಿಸುವ ಉದ್ದೇಶವನ್ನು ಈ ಕೃತಿ ಹೊಂದಿದೆ. ಅಂಬೇಡ್ಕರ್, ಗಾಂಧೀಜಿ ಮತ್ತು ನೆಹರೂರವರ ಮನೋಭಾವವನ್ನು ತೆರೆದಿಡುತ್ತಲೇ ನಮ್ಮ ಸಂವಿಧಾನವನ್ನು ಪರಿಚಯಿಸುತ್ತದೆ. ಸ್ವಾತಂತ್ರ್ಯದ ವಿವಿಧ ಆಯಾಮಗಳು, ಸಂವಿಧಾನದ ಮುಖ್ಯ ಸಂಗತಿಗಳಾದ ಸ್ವಾತಂತ್ರ್ಯ, ಧರ್ಮ ನಿರಪೇಕ್ಷತೆ, ಬಂಧುತ್ವ, ಘನತೆ, ನ್ಯಾಯಪರತೆ – ಇತ್ಯಾದಿಗಳ ಕರಾರುವಾಕ್ಕು ಅರ್ಥ ತಿಳಿಸಿ, ಉದಾಹರಣೆಗಳ ಮೂಲಕ ನಮ್ಮ ತಿಳಿವನ್ನು ಗಟ್ಟಿಗೊಳಿಸುತ್ತದೆ. ಈ ಅರಿವು ಎಲ್ಲಾ ಭಾರತೀಯರಿಗೂ ಇರಲೇ ಬೇಕಾದ ಜರೂರತ್ತಿದೆ.

- ವಸುಧೇಂದ್ರ



ಪ್ರಜಾಪ್ರಭುತ್ವ ಎನ್ನುವುದು ಕಾಲದಿಂದ ಕಾಲಕ್ಕೆ ಪ್ರಗತಿಯಾಗುತ್ತಲೇ ಇರುತ್ತದೆ. ಪ್ರಜೆಗಳು ಅಸಡ್ಡೆ ಮಾಡಿದರೆ, ನಿರಾಸಕ್ತಿ ಹೊಂದಿದರೆ ಪ್ರಜಾಪ್ರಭುತ್ವದ ಅವನತಿ ಆರಂಭವಾಗುತ್ತದೆ. ಪುಸ್ತಕದಲ್ಲಿ ಹೇಳುವಂತೆ "ಭಾರತವೆಂಬ ದೇಶದ ಸಂಸ್ಥಾಪನಾ ಕ್ಷಣದ ಸಾರವಿರುವುದು ಅದರ ಗತಕಾಲದ ಹಳಹಳಿಕೆಗಳಿಗೆ ಜೋತು ಬೀಳದೆ, ಈ ದೇಶದ ಜನರು ತಮಗೆ ತಾವೇ ಈ ಸಂವಿಧಾನವನ್ನು ಕೊಟ್ಟು ಕೊಂಡಿದ್ದಾರೆ ಎಂಬ ವಿಚಾರದಲ್ಲಿದೆ". ಸಂವಿಧಾನ ರಚನಾ ಸಭೆಯು ತಮಗೆ ತಾವೇ 'ಸಾರ್ವಭೌಮ, ಪ್ರಜಾಪ್ರಭುತ್ವವಾದ, ಗಣರಾಜ್ಯ' ವನ್ನು ಕೊಟ್ಟು ಕೊಳ್ಳಲು ಪ್ರತಿಜ್ಞೆ ಮಾಡಿದ 'ಭಾರತದ ಪ್ರಜೆಗಳ' ಪ್ರಾತಿನಿಧಿಕ ಸಭೆಯಾಗಿತ್ತು ಎನ್ನುವುದು ಪೀಠಿಕೆಯ ಪಠ್ಯ ಮತ್ತು ಧೋರಣೆಗಳಲ್ಲಿ ಸ್ಪಷ್ಟವಾಗಿ ತಿಳಿಯುತ್ತದೆ. ಅಧಿಕಾರದ ಮೂಲ ಪ್ರಜೆಗಳಾಗಿರುತ್ತಾರೆಯೇ ವಿನಃ ರಾಜನಲ್ಲ ಎಂಬ ಗಣರಾಜ್ಯದ ಚಿಂತನೆಯನ್ನು ಸಂವಿಧಾನವು ತನ್ನ ಮೂಲದಲ್ಲೇ ತಿಳಿಸುತ್ತದೆ.

- ಎಂ.ಡಿ. ಪಲ್ಲವಿ



ಪುಸ್ತಕದ ವಿಶೇಷವೆಂದರೆ, ಸಾಂವಿಧಾನಿಕ ಮೌಲ್ಯಗಳಾದ ಸ್ವಾತಂತ್ರ್ಯ, ಸಮಾನತೆ ಮತ್ತು ಬಂಧುತ್ವವನ್ನು ಮನಗಾಣಿಸಲು ಉಲ್ಲೇಖಿಸಿರುವ ನ್ಯಾಯಾಲಯ ಪ್ರಕರಣಗಳು ಮತ್ತು ವಿಶ್ಲೇಷಣೆಗಳು. ಪುಸ್ತಕ ಓದಿದ ಮೇಲೆ ಸಮಾನತೆ, ಬಂಧುತ್ವವನ್ನು ನಂಬುವವರಿಗೆಲ್ಲಾ ಭಾರತೀಯ ಸಂವಿಧಾನದ ಬಗ್ಗೆ ಹೆಮ್ಮೆ ಎನಿಸದೆ ಇರಲಾರದು.

- ದು. ಸರಸ್ವತಿ

₹100/-

ಜನ ಪ್ರಕಾಶನ
ಜನ ಸಂಸ್ಕೃತಿ ಅಧ್ಯಯನ ಮತ್ತು ಪ್ರಕಾಶನ
ಬೆಂಗಳೂರು

ISBN 939358822-8
9 789393 588227

ಪರ್ಯಾಯ ಕಾನೂನು ವೇದಿಕೆ, ಬೆಂಗಳೂರು
lawyering for change